ಸಂಪುಟ : 14 Volume ಸಂಚಿಕೆ : 18 Issue ಪುಟಗಳು : 08 Pages ಸೋಮವಾರ 20 ಏಪ್ರಿಲ್ 2026 ₹4 PRGINO. 120927(RNINO:KARKAN/2011/48371) BDR/054/2026-2027 www.mallammanudi.in mallammanudi@gmail.com 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ತಿರಸ್ಕಾರಕ್ಕೆತಿರಸ್ಕಾರವೇಮದ್ದಲ್ಲ ಪ್ರೀತಿಯೇ ದಿವ್ಯಾಷಧ

ಗೌತಮ ಬುದ್ಧ .

3 ಭವ್ಯ ಬೈಕ್ ಕಾರ್ ರ್‍ಯಾಲಿ | 4 ಪುಸ್ತಕ ಪ್ರೇಮ ಬೆಳಸಿಕೊಳ್ಳಿ | 8 ನೀರಿನಲ್ಲಿ ಮುಳುಗಿ ಬಾಲಕ ಸಾವು

# ಸಿಎಂ ಶಾಂತಿಯ ಮಂತ್ರ

## ಮಾನವ ಸಮಾಜ ನಿರ್ಮಾಣದಲ್ಲಿ ಎಲ್ಲರೂ ಪಾಲುದಾರರಾಗಬೇಕು: ಸಿದ್ದರಾಮಯ್ಯ

• ಮಲ್ಲಮ್ಮ ನುಡಿವಾರ್ತೆ, ರಾಣೇಬೆನ್ನೂರು

ಮಾನವ ಸಮಾಜ ನಿರ್ಮಾಣದಲ್ಲಿ ಎಲ್ಲರೂ ಪಾಲುದಾರರಾಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದ್ದಾರೆ.

ಅವರು ರಾಣಿಬೆನ್ನೂರಿನ ನಿಟ್ಟೂರು ಗ್ರಾಮದಲ್ಲಿ ಆಯೋಜಿಸಿದ್ದ ಶ್ರೀ ಬೀರೇಶ್ವರ ಸ್ವಾಮಿ ದೇವಸ್ಥಾನದ 50 ನೇ ವರ್ಷದ ಸುವರ್ಣ ಮಹೋತ್ಸವ, ಭಕ್ತ ಕನಕದಾಸರ ಮಹಾದ್ವಾರದ ಉದ್ಘಾಟನೆ, ಧರ್ಮ ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ನಿಟ್ಟೂರಿನ ದೇವಸ್ಥಾನಕ್ಕೆ ವಿವಿಧ ಜಿಲ್ಲೆಗಳಿಂದ

ಭಕ್ತರು ಆಗಮಿಸುತ್ತಾರೆ. ಬೀರಲಿಂಗೇಶ್ವರ ದೇವಸ್ಥಾನ ನಿಟ್ಟೂರಿಗೆ ಮಾತ್ರ

ಸೀಮಿತವಾಗಿಲ್ಲ. ದೇವನೊಬ್ಬ ನಾಮ ಹಲವು ಎಂದು ಅರ್ಥೈಸಿಕೊಳ್ಳಬೇಕೆಂದಿದ್ದಾರೆ.

ಸರ್ವಜನಾಂಗದ ಶಾಂತಿ:



**ಮಹಿಳಾ ವಿರೋಧಿ:ರಾಜ್ಕೀಯ**

ಮರುವಿಂಗಡಣೆಯಿಂದ ಉತ್ತರ ಭಾರತದ ರಾಜ್ಯಗಳಲ್ಲಿ ಕ್ಷೇತ್ರಗಳು ಹೆಚ್ಚಾಗುತ್ತವೆ. ದಕ್ಷಿಣದಲ್ಲಿ ಕಡಿಮೆಯಾಗುತ್ತವೆ. ಆಡಳಿತ ವಿಕೇಂದ್ರೀಕರಣಕ್ಕೆ ಇದು ಮಾರಕ. ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಸಿಎಂ, ಪ್ರಧಾನಿ ಮೋದಿ ರಾಜಕೀಯ ಕಾರಣ-ಕ್ಕಾಗಿ ಕಾಂಗ್ರೆಸ್ ಪಕ್ಷವನ್ನು ಮಹಿಳಾ ವಿರೋಧಿ ಎಂದು ಬಿಂಬಿಸುತ್ತಿದ್ದಾರೆ. ಪಶ್ಚಿಮ ಬಂಗಾಲದ ಚುನಾವಣೆಯ ಸಲುವಾಗಿ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ.

**ಕುಲದ ನೆಲೆಯನ್ನು ಬಲ್ಲಿರಾ..?**

ಇಸ್ಲಾಂ, ಹಿಂದೂ, ಕ್ರಿಶ್ಚಿಯನ್ ಧರ್ಮಗಳು ಜನರನ್ನು ಪ್ರೀತಿಸಬೇಕೆಂದು ಬೋಧಿಸುತ್ತವೆ. ಇದಾದಾಗ ಮಾತ್ರ ಮಾನವ ಸಮಾಜ ನಿರ್ಮಾಣ ಸಾಧ್ಯ. ಸೈದ್ಧಾಂತಿಕವಾಗಿ ನಮ್ಮ ವಿರೋಧಿಗಳಾದರೂ ಜನರನ್ನು ಪ್ರೀತಿಸಬೇಕು. ಕುಲದ ನೆಲೆಯನ್ನು ಬಲ್ಲಿರಾ ಎಂದ ಕನಕದಾಸರ ಹಾಗೂ ಇವ ನಮ್ಮವ ಎಂಬ ಬಸವಣ್ಣನ ತತ್ವವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಉನ್ನತ ವಿದ್ಯೆ ಕಲಿತವರೇ ಜಾತಿ ವ್ಯವಸ್ಥೆಯನ್ನು ಪೋಷಿಸುವುದು ನಮ್ಮ ಸಮಾಜದ ದುರಂತ ಎಂದು ವಿಷಾದಿಸಿದ್ದಾರೆ.

ನಮ್ಮ ನಾಡು, ನಮ್ಮ ದೇಶ ಸರ್ವಜನಾಂಗದ ಶಾಂತಿಯ ತೋಟವಾಗಬೇಕೆಂದು ಬುದ್ಧ, ಬಸವ, ಮಹಾತ್ಮಾ ಗಾಂಧಿ, ಅಂಬೇಡ್ಕರ್ , ಕುವೆಂಪು ಬಯಸಿದ್ದರು. ಅದನ್ನೇ ನಮ್ಮ ಸರ್ಕಾರ ಪಾಲಿಸುತ್ತಿದೆ ಎಂದು ತಿಳಿಸಿದ್ದಾರೆ.

> ಬಸವಣ್ಣನವರನ್ನು ರಾಜ್ಯದ ಸಾಂಸ್ಕೃತಿಕ ನಾಯಕ ಎಂದು ನಮ್ಮ ಸರ್ಕಾರ ಘೋಷಣೆ ಮಾಡಿದೆ. ನಮ್ಮ ಸರ್ಕಾರ ಸರ್ವ ಜನಾಂಗದ ಶಾಂತಿಯ ತೋಟವಾಗಿಸಬೇಕೆನ್ನುವ ಉದ್ದೇಶ ಹೊಂದಿದ್ದು, ನಾನೂ ಕೂಡ ಬಸವಣ್ಣನ ಅನುಯಾಯಿ
>
> ಸಿದ್ದರಾಮಯ್ಯ ಮಯಖ್ಯಮಂತ್ರಿ

**ಮೂಢನಂಬಿ ಕೆತ್ಯಜಿಸಿ**

ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಎಂಬ ವಿಚಾರಗಳು ಸಂವಿಧಾನದ ಆಧಾರ ಸ್ತಂಭಗಳು. ದೇವರ ಪೂಜೆ ಮಾಡಬೇಕು ಆದರೆ ಮೂಢ ನಂಬಿಕೆಗಳನ್ನು ಇಟ್ಟುಕೊಳ್ಳಬಾರದು. ಬಸವಣ್ಣ ಕರ್ಮಸಿದ್ಧಾಂತವನ್ನು ತಿರಸ್ಕರಿಸಿದ್ದರು ಎನ್ನುವುದನ್ನು ಸ್ಮರಿಸಬೇಕು. ಅಂಬೇಡ್ಕರ್ ಅವರು ದೇಶದ ಸ್ವಾತಂತ್ರ್ಯ ಸಮಾಜಿಕ, ಆರ್ಥಿಕ ಸ್ವಾತಂತ್ರ್ಯದ ತಳಹದಿಯ ಮೇಲೆ ನಿಂತಿದೆ, ಇಲ್ಲದಿದ್ದರೆ ರಾಜಕೀಯ ಸ್ವಾತಂತ್ರ್ಯ ಯಶಸ್ವಿಯಾಗುವುದಿಲ್ಲ ಎಂದಿದ್ದರು. ಸಮಾನತೆಯ ಆಶಯದಿಂದಲೇ ಭಾಗ್ಯಗಳನ್ನು, ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿರುವುದು ಎಂದು ಸಿಎಂ ಪ್ರತಿಪಾದಿಸಿದ್ದಾರೆ.

## ಅಕ್ಷಯ ತೃತೀಯವು ಮಂಗಳಕರ ದಿನ



ಶ್ರೀಮತಿ. ಭಾಗ್ಯಶ್ರೀ ಜೋಶಿ, ಪತ್ರಕರ್ತರು, ಹುಬ್ಬಳ್ಳಿ.

ಹುಬ್ಬಳ್ಳಿ :– ಅಕ್ಷಯ ತೃತೀಯವು ವೈಶಾಖ ಮಾಸದ ಶುಕ್ಲಪಕ್ಷದ ತೃತೀಯದಂದು ಆಚರಿಸಲಾಗುವ ಅತ್ಯಂತ ಮಂಗಳಕರ ದಿನವಾಗಿದ್ದು ಅಕ್ಷಯ ಅಂದರೆ ಕಡಿಮೆಯಾಗದ ಸಂಪತ್ತು ಮತ್ತು ಯಶಸ್ಸನ್ನು ಸಂಕೇತಿಸುತ್ತದೆ. ಈ ದಿನ ಚಿನ್ನ, ಬೆಳ್ಳಿ ಖರೀದಿ, ಹೊಸ ವ್ಯವಹಾರ, ದಾನ ಮತ್ತು ಪೂಜೆಗೆ ವಿಶೇಷ ಮಹತ್ವವಿದೆ. ಇದು ಶಾಶ್ವತ ಬೆಳವಣಿಗೆಯ ದಿನವಾಗಿದ್ದು, ಯಾವುದೇ ಒಳ್ಳೆಯ ಕೆಲಸಕ್ಕೆ ಶುಭ ಮುಹೂರ್ತದ ಅಗತ್ಯವಿಲ್ಲದೆ ಪೂಜಿಸಬಹುದಾಗಿದೆ.

**ಅಕ್ಷಯತೃತೀಯದ ಮಹತ್ವ ಮತ್ತು ವಿಶೇಷತೆಗಳು:–**


ಶಾಶ್ವತ ಫಲ (ಅಕ್ಷಯ): ಈ ದಿನ ಮಾಡುವ ದಾನ, ಪೂಜೆ ಮತ್ತು ಹೂಡಿಕೆಗಳು ಎಂದಿಗೂ ನಶಿಸದ (ಅಕ್ಷಯ) ಫಲವನ್ನು ನೀಡುತ್ತವೆ ಎಂದು ನಂಬಲಾಗಿದೆ. ಚಿನ್ನ ಮತ್ತು ಹೂಡಿಕೆ ಖರೀದಿ: ಚಿನ್ನ, ಬೆಳ್ಳಿ ಅಥವಾ ಇತರ ಅಮೂಲ್ಯ ವಸ್ತುಗಳನ್ನು ಖರೀದಿಸುವುದು ಅದೃಷ್ಟ ಮತ್ತು ಸಮೃದ್ಧಿಯನ್ನು ತರುತ್ತದೆ, ಏಕೆ–ಂದರೆ ಇದು ಲಕ್ಷ್ಮಿ ಮತ್ತು ಕುಬೇರನಿಗೆ ಪ್ರಿಯವಾದ ದಿನವಾಗಿದೆ. ಪೌರಾಣಿಕ ಹಿನ್ನೆಲೆ: ಈ ದಿನವೇ ತ್ರೇತಾಯುಗ ಆರಂಭವಾಯಿತು, ಗಂಗೆ ಭೂಮಿಗೆ ಬಂದಳು, ಮತ್ತು ವೇದವ್ಯಾಸರು ಮಹಾಭಾರತವನ್ನು ಬರೆಯಲು ಆರಂಭಿಸಿದರು. ಅಕ್ಷಯ ಪಾತ್ರೆಯ ಕಥೆ: ಶ್ರೀಕೃಷ್ಣನು ದ್ರೌಪದಿಗೆ 'ಅಕ್ಷಯ ಪಾತ್ರೆ'ಯನ್ನು ನೀಡಿದ ದಿನವೂ ಇದೇ ಎಂದು ಹೇಳಲಾಗುತ್ತದೆ, ಇದು ಎಂದಿಗೂ ಆಹಾರ ಕಡಿಮೆಯಾಗದ ಪಾತ್ರೆಯಾಗಿದೆ. ದಾನದ ಮಹತ್ವ: ಈ ದಿನ ಬಡವರಿಗೆ ಅಥವಾ ಅಗತ್ಯವಿರುವವರಿಗೆ ಅನ್ನ, ನೀರು, ಕಬ್ಬಿನ ರಸ, ಬಟ್ಟೆ ಮತ್ತು ಇತರ ವಸ್ತುಗಳನ್ನು ದಾನ ಮಾಡುವುದು ಪುಣ್ಯಫಲವನ್ನು ನೀಡುತ್ತದೆ. ಈ ದಿನದಂದು ಯಾವುದೇ ಕೆಲಸ, ಕಾರ್ಯಗಳನ್ನು ಮಾಡಿದರೆ ಮಂಗಳಕರವಾಗುತ್ತದೆ. –

## ಮಾಧ್ಯಮ ಪ್ರತಿನಿಧಿಯಾಗಿ ರಾಜಕುಮಾರ ಹಡಪದ ನೇಮಕ




ಮಲ್ಲಮ್ಮ ನುಡಿವಾರ್ತೆ ಬೆಂಗಳೂರು

ಬೀದರ್ ಜಿಲ್ಲೆಯ ಚಿಟಗುಪ್ಪ ತಾಲೂಕಿನ ಕನ್ನಡ ಸೇನೆ ಕರ್ನಾಟಕ ಸಂಘಟನೆಯ ಮಾಧ್ಯಮ ಪ್ರತಿನಿಧಿಯಾಗಿ ರಾಜಕುಮಾರ್ ಆರ್. ಹಡಪದ ಇವರನ್ನು ನೇಮಕ ಮಾಡಲಾಗಿದೆ ಎಂದು ಕನ್ನಡ ಸೇನೆ ರಾಜ್ಯ ಉಪಾಧ್ಯಕ್ಷ ಡಾ. ರವಿ ಸ್ವಾಮಿ ನಿರ್ಣಾ ತಿಳಿಸಿದ್ದಾರೆ. ಕನ್ನಡ ನಾಡು, ನುಡಿ, ನೆಲ, ಜಲ, ಭಾಷೆಗಾಗಿ ಹಗಲಿರಳು ಶ್ರಮಿಸಲು ಹಾಗೂ ಕನ್ನಡ ಸೇನೆ ಕರ್ನಾಟಕ ಸಂಘಟನೆ ಬಲಪಡಿಸಲು ಚಿಟಗುಪ್ಪ ತಾಲೂಕ ಮಾಧ್ಯಮ ಪ್ರತಿನಿಧಿಯಾಗಿ ರಾಜಕುಮಾರ ಆರ್. ಹಡಪದ ಇವರನ್ನು ನೇಮಕ ಮಾಡಿ, ನೇಮಕಾತಿ ಪತ್ರ ನೀಡಲಾಗಿದೆ ಎಂದು ಕನ್ನಡ ಸೇನೆ ರಾಜ್ಯ ಉಪಾಧ್ಯಕ್ಷ ಡಾ. ರವಿ ಸ್ವಾಮಿ ನಿರ್ಣಾ ಅವರು ಶನಿವಾರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ತಾಲೂಕಾಧ್ಯಕ್ಷ ಪವನ ಪೂಜಾರಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಮೇಶ ಧೂಳ, ಜಿಲ್ಲಾ ಕೋಶಾಧ್ಯಕ್ಷ ಮಹಮ್ಮದ್ ಹಮೀದ್, ಚಂದ್ರಶೇಖರ್ ಪಾಟೀಲ್ ಬನ್ನಳ್ಳಿ, ತಿಪ್ಪಣ್ಣರೆಡ್ಡಿ ಇಟಗಾ ಸೇರಿದಂತೆ ಇತರರು ಉಪಸ್ಥಿತರಿದ್ದರು.











# ಸ್ಮಶಾನ ಭೂಮಿಗಾಗಿ ದಲಿತ ಸಂಘರ್ಷ ಸಮಿತಿಯಿಂದ ಆಯುಕ್ತರಿಗೆ ಮನವಿ




• **ಮಲ್ಲಮ್ಮ ನುಡಿ ವಾರ್ತೆ, ಚಿಟಗುಪ್ಪ**

ತಾಲೂಕಿನ ಕೋಡಂಬಲ್ ಗ್ರಾಮದಲ್ಲಿ ಪರಿಶಿಷ್ಟ ಜಾತಿಗೆ ಸ್ಮಶಾನ ರುದ್ರಭೂಮಿ ಮಂಜೂರು ಮತ್ತು ಹಳೆಯ ರುದ್ರಭೂಮಿಗೆ ಹೋಗಲು ದಾರಿ ಮಾಡಿಕೊಡುವಂತೆ ರಾಜ್ಯ ದಲಿತ ಸಂಘರ್ಷ ಸಮಿತಿಯಿಂದ ಬಸವಕಲ್ಯಾಣ ಉಪ ವಿಭಾಗದ ಸಹಾಯಕ ಆಯುಕ್ತ ಪ್ರಕಾಶ ಕುದರಿ ಅವರಿಗೆ ಕೋಡಂಬಲ್ ಗ್ರಾಮ ಪಂಚಾಯತನಲ್ಲಿ ಮನವಿ ಪತ್ರ ಸಲ್ಲಿಸಿದರು. ಗ್ರಾಮದ ಸರ್ವೆ ನಂ 208 ರಲ್ಲಿ ಸಮುದಾಯದ ಹಳೆಯ ಸ್ಮಶಾನ ಭೂಮಿಯಿದ್ದು ಅತೀ ಚಿಕ್ಕದ್ದಾಗಿದೆ. ಈಗ ಗ್ರಾಮದಲ್ಲಿ ದಲಿತ ಜನಾಂಗದ ಸಂಖ್ಯೆ ಹೆಚ್ಚಾಗಿದ್ದು, ಸ್ಮಶಾನ ಭೂಮಿ ಕಡಿಮೆ ಬೀಳುತ್ತಿದೆ, ಅಲ್ಲದೇ ಅಲ್ಲಿಗೆ ಹೋಗಲು ಸೂಕ್ತ ದಾರಿ ಕೂಡ ಇರುವುದಿಲ್ಲ. ಆದ ಕಾರಣ ಸರ್ವೆ ನಂ 195ರ ಸ್ಥಳ ಮಂಜೂರು ಮಾಡಬೇಕು ಮತ್ತು ಹಳೆಯ ಸ್ಮಶಾನಕ್ಕೆ ತೆರಳಲು ದಾರಿ ಮಾಡಿಕೊಡಬೇಕು. ಸಮಸ್ಯೆ ಪರಿಹರಿಸುವಂತೆ ಈ ಹಿಂದೆ 2024ನೇ ಸಾಲಿನ ಅಕ್ಟೋಬರ್ 7ರಂದು ಜಿಲ್ಲಾಧಿಕಾರಿಗಳ ಜನಸ್ಪಂದನ ಕಾರ್ಯಕ್ರಮದಲ್ಲಿ ಹಾಗು 2026 ಫೆಬ್ರವರಿ 5ರಂದು ತಹಸೀಲ್ದಾರರಿಗೆ ಮನವಿ ಪತ್ರ ಸಲ್ಲಿಸಲಾಗಿದೆ. ಆದರೂ ಕೂಡ ಇಲ್ಲಿಯವರೆಗೆ ಯಾವುದೇ ಕ್ರಮ ಜರುಗಿಸಿಲ್ಲ ಎಂದು ತಿಳಿಸಿದರು.

ಗ್ರಾಮ ಪಂಚಾಯತ್ ಉಪಾಧ್ಯಕ್ಷ ವಿಷ್ಣುವರ್ಧನ ಬುದ್ಧ, ಸಂತೋಷ ರಾಂಪುರೆ, ಸಚೀನ್ ಇಟಗಾರಿ, ಅನೀಲ್ ಅಂಬುಲಗಿ, ಪ್ರಕಾಶ ಅಂಬುಲಗಿ, ಹಣಮಂತ್, ನಾಗಪ್ಪ, ರಾಮಶೆಟ್ಟಿ, ರಮೇಶ ಗಿರಗಿರೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ವಿಶ್ವಗುರು ಬಸವಣ್ಣನವರ ಜಯಂತಿ

# ಅದ್ದೂರಿ ಬೈಕ್ ಕಾರ್ ರ್‍ಯಾಲಿ



• **ಮಲ್ಲಮ್ಮ ನುಡಿ ವಾರ್ತೆ, ಕಮಲನಗರ**

> “ ಬಸವಣ್ಣನವರ ಸಮಾನತೆಯ ಸಂದೇಶ ಮತ್ತು ವಚನ ಸಾಹಿತ್ಯ ಇಂದಿನ ಸಮಾಜಕ್ಕೆ ಅತ್ಯಗತ್ಯ. ಅವರ ತತ್ವ ಆದರ್ಶ ಪಾಲನೆ ಮಾಡಿಬೇಕು. ಜಯಂತಿಯನ್ನು ಇಷ್ಟು ದೊಡ್ಡ ಮಟ್ಟದಲ್ಲಿ ಆಚರಿಸುತ್ತಿರುವುದು ಹೆಮ್ಮೆಯ ವಿಷಯ,
>
> **ಪ್ರಕಾಶ ಟೋಣ್ಣೆ, ಮುಖಂಡ ಕಮಲನಗರ.**

ಪಟ್ಟಣದಲ್ಲಿ ವಿಶ್ವಗುರು ಬಸವಣ್ಣನವರ ಜಯಂತಿಯ ಅಂಗವಾಗಿ ಭಾನುವಾರ ಅತ್ಯಂತ ಸಂಭ್ರಮ ಹಾಗೂ ಸಡಗರದಿಂದ ಬೃಹತ್ ಬೈಕ್ ಮತ್ತು ಕಾರ್ ರ್‍ಯಾಲಿಯನ್ನು ಹಮ್ಮಿಕೊಳ್ಳಲಾಗಿತ್ತು.

ಈ ರ್‍ಯಾಲಿಗೆ ಪ್ರಮುಖ ಮುಖಂಡರಾದ ಪ್ರಕಾಶ ಟೋಣ್ಣೆ ಅವರ ನೇತೃತ್ವದಲ್ಲಿ ಬಸವ ಮಂದಿರ ದಿಂದ ಚಾಲನೆ ನೀಡಲಾಯಿತು. ರ್‍ಯಾಲಿಯಲ್ಲಿ ನೂರಾರು ಬೈಕ್‌ಗಳು ಮತ್ತು ಕಾರುಗಳು ಭಾಗವಹಿಸಿದ್ದವು.

ಪಟ್ಟಣದ ಅಕ್ಕಮಹಾದೇವಿ ವೃತ್ತ, ಹನುಮಾನ ಮಂದಿರ, ಏನ್. ಎಚ್ ರಾಷ್ಟ್ರೀಯ ಹೆದ್ದಾರಿ, ಅಲ್ಲಮ ಪ್ರಭು ವೃತ್ತ, ಶನಿದೇವ ಮಂದಿರ, ಪ್ರವಾಸಿ ಗ್ರಹ, ಮಾರ್ಗವಾಗಿ ಬಸವಣ್ಣ ವೃತ್ತ ಹೀಗೆ ಪ್ರಮುಖ ರಸ್ತೆಗಳಲ್ಲಿ ಸಾಗಿದ ರ್‍ಯಾಲಿಯುದ್ದಕ್ಕೂ ಬಸವಣ್ಣನವರ ತತ್ವಗಳ ಘೋಷಣೆಗಳು ಮೊಳಗಿದವು.

ಪಟ್ಟಣದಲ್ಲಿ ಕೇಸರಿ ಧ್ವಜಗಳು ಮತ್ತು ಬಸವಣ್ಣನವರ ಭಾವಚಿತ್ರಗಳೊಂದಿಗೆ ಯುವಕರು ಉತ್ಸಾಹದಿಂದ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರು. ಇಡೀ ಕಮಲನಗರ ಪಟ್ಟಣವು ಹಬ್ಬದ ಕಳೆಯನ್ನು ಹೊಂದಿತ್ತು.

ಈ ಸಂದರ್ಭದಲ್ಲಿ ಮುಖಂಡರಾದ ಅವಿನಾಶ ಶಿವಣಕರ, ಶಿವಾನಂದ ವಡ್ಡೆ, ಶಿವಕುಮಾರ ಜುಲ್ಪೆ, ಚಂದ್ರಕಾಂತ ಸಂಗಮೇ, ಸಂತೋಷ ಸುಲಾಕೆ, ದತ್ತು ಮಹಾಜನ, ಸೇರಿದಂತೆ ಬಸವ ಅನುಯಾಯಿಗಳು ಮತ್ತು ನೂರಾರು ಯುವಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಗ್ರಾಮೀಣ ಆಡಳಿತ ವ್ಯವಸ್ಥೆ ಹಾಳಾಗುತ್ತಿರುವುದು ತಕ್ಷಣದ ಸುಧಾರಣೆ ಅಗತ್ಯ

ರಾಜ್ಯದ ಗ್ರಾಮೀಣ ಭಾಗಗಳಲ್ಲಿ ಆಡಳಿತ ವ್ಯವಸ್ಥೆ ಹಾಳಾಗುತ್ತಿರುವುದು ಇಂದು ಗಂಭೀರ ಚಿಂತೆಯ ವಿಷಯವಾಗಿದೆ. ಸರ್ಕಾರ ಜನರ ಕಲ್ಯಾಣಕ್ಕಾಗಿ ಅನೇಕ ಯೋಜನೆಗಳನ್ನು ಜಾರಿಗೆ ತರುತ್ತಿದ್ದರೂ, ಅವುಗಳ ಪ್ರಯೋಜನ ನೆಲಮಟ್ಟಕ್ಕೆ ತಲುಪದೇ ಇರುವುದೇ ದೊಡ್ಡ ಸಮಸ್ಯೆಯಾಗಿದೆ. ಅಧಿಕಾರಿಗಳ ನಿರ್ಲಕ್ಷ್ಯ, ಭ್ರಷ್ಟಾಚಾರ ಮತ್ತು ಹೊಣೆಗಾರಿಕೆಯ ಕೊರತೆ ಗ್ರಾಮೀಣ ಜನರ ಬದುಕನ್ನು ಸಂಕಷ್ಟಕ್ಕೆ ತಳ್ಳುತ್ತಿದೆ.

ಗ್ರಾಮ ಪಂಚಾಯತ್‌ಗಳಿಂದ ಹಿಡಿದು ತಾಲೂಕು ಮಟ್ಟದ ಕಚೇರಿಗಳವರೆಗೆ ಅನೇಕ ಕಡತಗಳು ವಿಲೇವಾರಿ ಆಗದೆ ಬಾಕಿ ಉಳಿಯುತ್ತಿವೆ. ಜನರು ತಮ್ಮ ಹಕ್ಕಿನ ಸೇವೆಗಳನ್ನು ಪಡೆಯಲು ಕಚೇರಿಗಳ ಸುತ್ತಲು ತಿಂಗಳುಗಟ್ಟಲೆ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಜನರಿಂದ ಸಂಗ್ರಹಿಸಲಾದ ತೆರಿಗೆಯಿಂದ ಸಂಬಳ ಪಡೆಯುವ ಅಧಿಕಾರಿಗಳು, ಜನಸೇವೆಯ ಮೂಲ ಉದ್ದೇಶವನ್ನೇ ಮರೆತು ಸ್ವಾರ್ಥಪರ ಧೋರಣೆಯನ್ನು ಅನುಸರಿಸುತ್ತಿರುವುದು ವಿಷಾದನೀಯ.

## ಸಂಪಾದಕೀಯ



**ಮಾಣಿಕರೆಡ್ಡಿ ಕೌಡಾಳೆ**
ಪ್ರಧಾನ ಸಂಪಾದಕರು
ಮೋ: 9845028349

ಈ ಹಿನ್ನಲೆಯಲ್ಲಿ, ಆಡಳಿತ ವ್ಯವಸ್ಥೆಯನ್ನು ಸುಧಾರಿಸಲು ತಕ್ಷಣವೇ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಭ್ರಷ್ಟಾಚಾರದಲ್ಲಿ ತೊಡಗಿರುವ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು.

ಪ್ರತಿಯೊಂದು ಕಚೇರಿಯಲ್ಲೂ ಪಾರದರ್ಶಕತೆ ಮತ್ತು ಹೊಣೆಗಾರಿಕೆ ಕಡ್ಡಾಯಗೊಳಿಸಬೇಕು. ಡಿಜಿಟಲ್ ವ್ಯವಸ್ಥೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಸೇವೆಗಳ ವೇಗವನ್ನು ಹೆಚ್ಚಿಸಬೇಕು. ಜೊತೆಗೆ ಗ್ರಾಮ ಸಭೆಗಳನ್ನು ಸಕ್ರಿಯಗೊಳಿಸಿ, ಜನರ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಬೇಕು.

ಜನಪ್ರತಿನಿಧಿಗಳು ಕೂಡ ತಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳಬೇಕು. ಅವರು ಅಧಿಕಾರಿಗಳ ಮೇಲೆ ಹಿಡಿತ ಸಾಧಿಸಿ, ಜನರ ಸಮಸ್ಯೆಗಳಿಗೆ ಸ್ಪಂದಿಸುವಂತೆ ಮಾಡಬೇಕು. ಇಲ್ಲದಿದ್ದರೆ ಜನರ ವಿಶ್ವಾಸ ಸಂಪೂರ್ಣವಾಗಿ ಕುಸಿಯುವ ಅಪಾಯ ಇದೆ.ಒಟ್ಟಿನಲ್ಲಿ, ಗ್ರಾಮೀಣ ಆಡಳಿತ ವ್ಯವಸ್ಥೆ ಬಲವಾಗಿದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಆದ್ದರಿಂದ ಸರ್ಕಾರ, ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಒಟ್ಟಾಗಿ ಕಾರ್ಯನಿರ್ವಹಿಸಿ, ಗ್ರಾಮಗಳ ಅಭಿವೃದ್ಧಿಗೆ ಆದ್ಯತೆ ನೀಡುವುದು ಕಾಲದ ಅವಶ್ಯಕತೆಯಾಗಿದೆ.

# ಕನ್ನಡ ರತ್ನ ಪ್ರಶಸ್ತಿ ಪುರಸ್ಕೃತೆ ದೀಪಿಕಾ ಸಗರ್‌ಅವರಿಗೆ ಪ್ರೇಮಿಳಾ ರೆಡ್ಡಿ ಅಭಿನಂದನೆ




• **ಮಲ್ಲಮ್ಮ ನುಡಿ ವಾರ್ತೆ, ಚಿಟಗುಪ್ಪ**

ಪಟ್ಟಣದ ಸದ್ಬೋದನಿ ಶಿಕ್ಷಣ ಸಂಸ್ಥೆಯಲ್ಲಿ ಸಹ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿರುವ ದೀಪಿಕಾ ಸಗರ್ ಇವರಿಗೆ ಏಪ್ರಿಲ್ 19 ರವಿವಾರದಂದು ದಾವಣಗೆರೆ ಜಿಲ್ಲೆಯಲ್ಲಿ ಶ್ರೀಮತಿ ಸರಸ್ವತಿ ದಾಸಪ್ಪ ಶೆಣ್ಯೆ ಸಾಲಿಗ್ರಾಮ, ಕಲಾಕುಂಚಿ ಸಾಂಸ್ಕೃತಿಕ ಸಂಸ್ಥೆ ಸಹಯೋಗದಲ್ಲಿ ನಡೆದ ಬೆಳ್ಳಿ ಹಬ್ಬದ ಸಮಾರಂಭದಲ್ಲಿ ರಾಜ್ಯ ಮಟ್ಟದ ಸರಸ್ವತಿ ಕನ್ನಡ ರತ್ನ ಪ್ರಶಸ್ತಿ ಪುರಸ್ಕೃತರಾದ ದೀಪಿಕಾ ಸಗರ್ ಇವರಿಗೆ ಚಿಟಗುಪ್ಪ ತಾಲೂಕ ಸಾವಿತ್ರಿಬಾಯಿ ಫುಲೇ ಶಿಕ್ಷಕಿಯರ ಸಂಘದ ತಾಲೂಕಾಧ್ಯಕ್ಷೆ ಪ್ರೇಮಿಳಾ ರೆಡ್ಡಿ ಹಾಗೂ ಸಂಘದ ಪದಾಧಿಕಾರಿಗಳು ಹರ್ಷ ವ್ಯಕ್ತಪಡಿಸಿ, ಅಭಿನಂದನೆಗಳು ತಿಳಿಸಿದ್ದಾರೆ.

# ಕಾಂಗ್ರೆಸ್‌ಗೆ ನಾರಿ ಶಕ್ತಿಯ ಶ್ರಾಪ ತಟ್ಟದೆ ಬಿಡದು: ಖೂಬಾ

• **ಮಲ್ಲಮ್ಮ ನುಡಿ ವಾರ್ತೆ, ಬೀದರ್**



ಕಾಂಗ್ರೆಸ್ ಪಕ್ಷವು ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ವಿಧೆಯಕಕ್ಕೆ ವಿರೋಧ ವ್ಯಕ್ತಪಡಿಸಿ ಅದು ಜಾ–ರಿಯಾಗದೇ ಇರಲು ಮುಖ್ಯ ಕಾರಣವಾಗಿದ್ದು, ಇದರಿಂದ ನಾರಿ ಶಕ್ತಿಯ ಶಾಪ ಕೈ ನಾಯಕರಿಗೆ ಖಂಡಿತ ತಟ್ಟಲಿದೆ ಎಂದು ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ತಿಳಿಸಿದರು.

ಭಾನುವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, 12ನೇ ಶತಮಾನದಲ್ಲಿ ಅಣ್ಣ ಬಸವಣ್ಣನವರ ಕಾಲದಲ್ಲಿ ಅಕ್ಕ ಮಹಾದೇವಿ, ಅಕ್ಕ ನಾಗಮ್ಮ, ಆಯ್ದಕ್ಕಿ ಲಕ್ಕಮ್ಮ, ಕಲ್ಯಾಣಮ್ಮ ಸೇರಿದಂತೆ 50 ಪ್ರತಿಶತದಷ್ಟು ಶಿವಶರಣೆಯರು ಅನುಭವ ಮಂಟಪದ ಭಾಗವಾಗಿರುವ ಈ ದೇಶದಲ್ಲಿ 800 ವರ್ಷಗಳ ಬಳಿಕ ಈ ದೇಶದಲ್ಲಿ ದೇಶವನ್ನು ಅಭಿವೃದ್ಧಿಪಡಿಸುವಲ್ಲಿ ಪ್ರಮುಖ ಕಾರಣಿಕರ್ತರಾದ ಮಹಿಳಾ ಲೋಕಕ್ಕೆ ಅವಮಾನ ಮಾಡಿರುವ ಕಾಂಗ್ರೆಸ್ ಪಕ್ಷಕ್ಕೆ ಬರುವ ವರ್ಷಗಲಲ್ಲಿ ಒಳ್ಳೆಯ ಪಾಠ ಕಲಿಸಲಿದ್ದಾರೆ ಎಂದರು.

ಮಹಿಳಾ ಮೀಸಲಾತಿ ವಿಧೆಯಕದಿಂದ ದಕ್ಷಿಣದ ರಾಜ್ಯಗಳಿಗೆ ಯಾವುದೇ ಹಾನಿಯಾಗುವುದಿಲ್ಲ. ಬದಲಿಗೆ ಕ್ಷೇತ್ರ ಪುನರ್ ವಿಂಗಡಣೆಯಿಂದ ಕರ್ನಾಟಕದಲ್ಲಿ ಪರಿಶಿಷ್ಟರಿಗೆ ಈಗಿರುವ ಲೋಕಸಭೆಯ 9 ಸ್ಥಾನಗಳಿ ಬದಲು, 11, ಒಟ್ಟು 28ರ ಬದಲು 42 ಸ್ಥಾನಗಳು ಹೆಚ್ಚಾಗಿ ಮಹಿಳೆಯರಿಗೂ ಸ್ಥಾನ ಕಲ್ಪಿಸಲು ಸಾಧ್ಯವಾಗುತ್ತಿತ್ತು. ಇದರಿಂದ ಪರಿಶಿಷ್ಟ ಜಾತಿ ಹಾಗೂ ಬುಡಕಟ್ಟು ಜನಾಂಗದವರಿಗೂ ವಿಶೇಷವಾಗಿ ಇದನ್ನು ಮಹಿಳಾ ಮಣಿಯರಿಗೆ ಮಾಡಿದ ಮಹಾದ್ರೋಹ ಎಂದರು.


ಫಸಲು ವಿಮೆ ಬಗ್ಗೆ ಮಾತನಾಡಿರುವ ಮಾಜಿ ಕೇಂದ್ರ ಸಚಿವರು ಜಿಲ್ಲಾ ಉಸ್ತುವಾರಿ ಸಚಿವ ಖಂಡ್ರೆಯವರು ಫಸಲು ವಿಮೆ ಹಣ ಬಂದಿಲ್ಲ ಎಂದು ಆಪಾದಿಸಿದ್ದರು. ಆದರೆ ನಮ್ಮ ಕೇಂದ್ರ ಸರ್ಕಾರವು 1 ಲಕ್ಷ 60 ಸಾವಿರ ರೈತರಿಗೆ 100 ಕೋಟಿ 66 ಲಕ್ಷ ಫಸಲು ವಿಮೆ ಹಣ ನೀಡಿದೆ ಎಂದು ಸ್ಪಷ್ಟಪಡಿಸಿದರು.

ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾದ ಅಧ್ಯ–ಕ್ಷೆ ಉಲ್ಲಾಸಿನಿ ಮುದಾಳೆ ಮಾತನಾಡಿ, ನಮ್ಮ ನೆಚ್ಚಿನ ಪ್ರಧಾನಿ ನರೇಂದ್ರ ಮೋದಿಜಿಯವರು ನಾರಿಶಕ್ತಿಯನ್ನು ಸದಾ ಗೌರವಿಸುತ್ತಾರೆ. ಹಾಗಾಗಿ ಮಹಿಳಾ ಮೀಸಲಾತಿ ವಿಧೆಯಕ ಜಾರಿಗೆ ತರಲು ಸಂಸತ್ತಿನಲ್ಲಿ ಪ್ರಯತ್ನಿಸಿದರು. ಧರ್ಮದ ಮೇಲೆ ಹಾಗೂ ಜಾತಿ ಜಾತಿಗಳ ನಡುವೆ ಸದಾ ವಿಶ ಬೀಜ ಬಿತ್ತುವ ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳು ಈ ವಿಧೆಯಕವನ್ನು ವಿರೋಧಿಸುವ ಮೂಖೇನ ಇಡೀ ಮಹಿಳಾ ಲೋಕಕಕ್ಕೆ ಅವಮಾನ ಮಾಡಿದ್ದಾರೆ. ಇದನ್ನು ನಾರಿಶಕ್ತಿ ಸಹಿಸದು. ಮುಂಬರುವ ದಿನಗಳಲ್ಲಿ ಕಾಂಗ್ರೆಸ್ ನಾಯಕರ ಮನೆ ಮುಂದೆ ಇಡೀ ಮಹಿಳಾ ಸಮೂಹ ಪ್ರತಿಭಟಿಸಲಿದೆ ಎಂದು ಎಚ್ಚರಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ ಮಾತನಾಡಿ, ಕಾಂಗ್ರೆಸ್ ಪಕ್ಷ ಸದಾ ನಮ್ಮನ್ನು ಮನುವಾದಿಗಳು, ಕೋಮುವಾದಿಗಳು ಎಂದು ಕರೆಯುವ ಇವರು ಮಹಿಳಾ ಮೀಸಲಾತಿ ಮಸುದೆಯನ್ನು ವಿರೋಧಿಸಿ ತಾವೆ ಕೋಮುವಾದಿಗಳು, ಮಹಿಳಾ ವಿರೋಧಿಗಳು ಎಂಬುದನ್ನು ಸಾಬಿತು ಮಾಡಿದ್ದಾರೆ. ಬರುವಂತಹ ದಿನಗಳಲ್ಲಿ ಕಾಂಗ್ರೆಸ್‌ನವರಿಗೆ ಜನ ತಕ್ಕ ಪಾಠ ಕಲಿಸದೆ ಬಿಡುವುದಿಲ್ಲ. ರಾಜ್ಯ ಸರ್ಕಾರ ಕಬ್ಬು ಸಾಗಿಸಿದ ರೈತರ ನಿಗದಿಪಡಿಸಿದ ಹಣ ರು.2800 ಇನ್ನು ಸಹ ಕೊಡಿಸದೇ ಮಾಡಿದ್ದಾರೆ ಎಂದರು.

ಹಿರಿಯ ಮುಖಂಡರಾದ ಗುರುನಾಥ ಜ್ಯಾಂತಿಕರ್, ಮಹಾನಗರ ಪಾಲಿಕೆ ಸದಸ್ಯರಾದ ಶಶಿಧರ ಹೊಸಳ್ಳಿ, ರಾಜ್ಯ ಕಾರ್ಯಕಾರಿಣಿ ಸದಸ್ಯೆ ಶಕುಂತಲಾ ಬೆಲ್ದಾಳೆ, ಮಹಿಳಾ ಮೋರ್ಚಾ ಜಿಲ್ಲಾ ಪ್ರ.ಕಾರ್ಯದರ್ಶಿ ವಿಜಯಲಕ್ಷ್ಮಿ ಕೌಟಗೆ, ಕಾರ್ಯದರ್ಶಿ ಲುಂಬಿಣಿ ಗೌತಮ, ಮಾಧ್ಯಮ ವಿಭಾಗದ ಶ್ರೀನಿವಾಸ ಚೌಧರಿ, ಎಸ್.ಟಿ ಘಟಕದ ಪ್ರ.ಕಾರ್ಯದರ್ಶಿ ಅರುಣ ಬಾವಗೆ ಪತ್ರಿಕಾಗೋಷ್ಠಿಯಲ್ಲಿದ್ದರು.

# 22 ಕ್ಕೆ ರಾಜ್ಯಪಾಲ ಗೆಹ್ಲೋಟ್ ಅವರ ಬೀದರ ಜಿಲ್ಲಾ ಪ್ರವಾಸ



• **ಮಲ್ಲಮ್ಮ ನುಡಿ ವಾರ್ತೆ ಬೀದರ**

ಕರ್ನಾಟಕ ರಾಜ್ಯದ ಘನವೆತ್ತ ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್ ಅವರು ಏಪ್ರಿಲ್.22 ರಂದು ಬೀದರ ಜಿಲ್ಲೆಯಲ್ಲಿ ಪ್ರವಾಸ ಕಾರ್ಯಕ್ರಮ ಕೈಗೊಂಡಿರುತ್ತಾರೆ.

ಅವರು ಏಪ್ರಿಲ್. 21 ರಂದು ರಾತ್ರಿ 8.30ಕ್ಕೆ ಬೀದರ ಅತಿಥಿ ಗೃಹಕ್ಕೆ ಆಗಮಿಸಿ ಅಲ್ಲಿಯೇ ವಾಸ್ತವ್ಯ ಮಾಡಲಿದ್ದಾರೆ.

ಏಪ್ರಿಲ್.22 ರಂದು ಬೆಳಿಗ್ಗೆ 9.55ಕ್ಕೆ ಬೀದರ ವಿಮಾನ ನಿಲ್ದಾಣದಲ್ಲಿ ಭಾರತದ ಉಪರಾಷ್ಟ್ರಪತಿಗಳನ್ನು ಬರಮಾಡಿಕೊಳ್ಳಲಿದ್ದಾರೆ. ನಂತರ ಬೆಳಿಗ್ಗೆ 10.30 ರಿಂದ 11.30 ರವರೆಗೆ ನಾಡೋಜ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದೇವರ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆಂದು ರಾಜ್ಯಪಾಲರ ಎ.ಡಿ.ಸಿ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವೃಕ್ಷ ಸಂರಕ್ಷಣೆ ಅಭಿಯಾನಕ್ಕೆ ಚಾಲನೆ ವೃಕ್ಷಗಳನ್ನು ಉಳಿಸಿ ಸಂರಕ್ಷಿಸಿ: ರಾಥೋಡ



**ಮಲ್ಲಮ್ಮ ನುಡಿ ವಾರ್ತೆ, ಹುಮನಾಬಾದ**


ಪರಿಸರ ಸಂರಕ್ಷಣೆಯಲ್ಲಿ ವೃಕ್ಷಗಳ ಪಾತ್ರ ಅದ್ಭುತವಾಗಿದೆ. ವೃಕ್ಷಗಳನ್ನು ಸಂರಕ್ಷಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಹುಮ್ನಾಬಾದ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರದ ಅಂಗವಾಗಿ ಪರಿಸರವಾಹಿನಿ ಬೀದರ್ ಹಮ್ಮಿಕೊಂಡಿದ್ದ ವೃಕ್ಷ ಸಂರಕ್ಷಣೆ ಅಭಿಯಾನ ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿ ಶಿವಾಜಿ ರಾಥೋಡ್ ಮಾತನಾಡಿ ತಿಳಿಸಿದರು.

ಪರಿಸರವಾದಿ ಶೈಲೇಂದ್ರ ಕಾವಡಿ ಪ್ರತಿ ವರ್ಷ ಬೇಸಿಗೆಯಲ್ಲಿ ವೃಕ್ಷ ಸಂರಕ್ಷಣಾ ಅಭಿಯಾನ ಅಂಗವಾಗಿ ಸಸಿಗಳಿಗೆ ನೀರು ಹಾಕುವ ಕಾರ್ಯ ಅತ್ಯುತ್ತಮ ಕಾರ್ಯವಾಗಿದೆ ಎಂದರು. ವೃಕ್ಷಗಳು ನೆಡುವುದು ಎಷ್ಟು ಮುಖ್ಯವೋ ವೃಕ್ಷಗಳನ್ನು ರಕ್ಷಿಸುವುದು ಉಳಿಸುವುದು ಅತಿ ಮುಖ್ಯವಾಗಿದೆ. ವೃಕ್ಷಗಳ ನಾಶದಿಂದ ಪ್ರತಿ ವರ್ಷ ದಿನೇ ದಿನೇ ಬಿಸಿಲು ತಾಪಮಾನ ಹೆಚ್ಚಳವಾಗುತ್ತಿದೆ . ಭೂ ತಾಪಮಾನ ಕಡಿಮೆ ಮಾಡಲು ಪ್ರತಿಯೊಬ್ಬರು ಕಡ್ಡಾಯವಾಗಿ ಮರಗಿಡಗಳನು ಬೆಳೆಸಬೇಕು ಎಂದು ಶಿವಾಜಿ ರಾಥೋಡ್ ತಿಳಿಸಿದರು.

ಪರಿಸರವಾಹಿನಿಯ ಅಧ್ಯಕ್ಷ ಶೈಲೇಂದ್ರ ಕಾವಡಿ ಮಾತನಾಡಿ ಅರಣ್ಯ ಇಲಾಖೆಯಿಂದ ಜೂನ್ ತಿಂಗಳಲ್ಲಿ ನೆಟ್ಟ ಅಂತಹ ಸಸಿಗಳನ್ನು ಸಂರಕ್ಷಿಸುವ ಜವಾಬ್ದಾರಿ ಅರಣ್ಯ ಇಲಾಖೆಯ ಜೊತೆಜೊತೆಗೆ ಸಾರ್ವಜನಿಕರದು ಅತ್ಯಂತ ಮಹತ್ವದ ಪಾತ್ರವಾಗಿದೆ. ಅರಣ್ಯ ಇಲಾಖೆ ವಿವಿಧ ಯೋಜನೆಯಲ್ಲಿ ನೆಟ್ಟ ಅಂತಹ ಸಸ್ಯಗಳನ್ನು ಸಂರಕ್ಷಿಸಲು ಪ್ರತಿ ವರ್ಷ ಬೇಸಿಗೆ ತಿಂಗಳಲ್ಲಿ ವೃಕ್ಷ ಸಂರಕ್ಷಣಾ ಅಭಿಯಾನ ಅಂಗವಾಗಿ ಸಸಿಗಳಿಗೆ ನೀರು ಹಾಕಿ ಸಂರಕ್ಷಿಸುವಂತ ಕಾರ್ಯ ಪ್ರತಿ ವರ್ಷ ಮಾಡಲಾಗುತ್ತಿದೆ ಎಂದರು. ಹುಮನಾಬಾದ ಸಾಮಾಜಿಕ ವಲಯ ಅರಣ್ಯ ಪಟ್ಟಣದ ಐಟಿಐ ಕಾಲೇಜು ಆವರಣದಲ್ಲಿ ಜೂನ 5 2025 ರಂದು 200 ಎತ್ತರ ಸಸಿಗಳು ನೆಡಲಾಗಿತ್ತು ಈ ಸಸಿಗಳನ್ನು ಸಂರಕ್ಷಿಸಲು ರವಿವಾರ ವೃಕ್ಷ ಸಂರಕ್ಷಣಾ ಅಭಿಯಾನ ಅಂಗವಾಗಿ ಹುಮ್ನಾಬಾದ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರಾರ್ಥಿಗಳಿಂದ ಸಸಿಗಳಿಗೆ ನೀರು ಹಾಕುವಂಥ ಕಾರ್ಯ ಮಾಡಲಾಯಿತು.

ರಾಷ್ಟ್ರೀಯ ಸೇವಾ ಯೋಜನೆ ಪರಿಸರ ಸಂರಕ್ಷಣೆಗೆ ತುಂಬಾ ಸಹಾಯವಾಗುತ್ತಿದೆ ಎಂದು ಶೈಲೇಂದ್ರ ಕಾವಡಿ ತಿಳಿಸಿದರು. ಸದಾಶಿವಯ್ಯ ವಿಭೂತಿ ಮಾತನಾಡಿ ಪ್ರತಿಯೊಬ್ಬ ವಿದ್ಯಾರ್ಥಿ ತಮ್ಮ ಮನೆಯ ಅಂಗಳದಲ್ಲಿ ತುಳಸಿ ಅಮೃತಬಳ್ಳಿ ನವಳಸರ ಸಸಿಗಳನ್ನು ನೇಡಲು ತಿಳಿಸಿದರು.ಅರಣ್ಯ ರಕ್ಷಕರಾದ ಪ್ರಕಾಶ್ ಗೋಟುರ ಮಾತನಾಡಿ ಅರಣ್ಯ ಇಲಾಖೆಯು ಅತ್ಯಂತ ಮಹತ್ವದ ಇಲಾಖೆಯಾಗಿದೆ. ಈ ಇಲಾಖೆಯಲ್ಲಿ ಹಲವಾರು ಉದ್ಯೋಗ ಅವಕಾಶಗಳು ಇವೆ ಎಂದು ತಿಳಿಸಿದರು. ವೃಕ್ಷಗಳ ಮಾಹಿತಿ ಸಸ್ಯ ಕ್ಷೇತ್ರದ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಿದರು . ವೃಕ್ಷ ಸಂರಕ್ಷಣ ಅಭಿಯಾನವನ್ನು ಕಾಲೇಜಿನ ಪ್ರಾಚಾರ್ಯರಾದ ವೀರಣ್ಣ ತುಪ್ಪದ ಸಾಮಾಜಿಕ ವಲಯ ಅರಣ್ಯ ಅಧಿಕಾರಿ ಪ್ರಕಾಶ್ ನಿಪ್ಪಾಣಿ ಇವರ ಮಾರ್ಗದರ್ಶನದ ಮೆರೆಗೆ ವಿದ್ಯಾರ್ಥಿಗಳು ಈ ಅಭಿಯಾನದಲ್ಲಿ ನೀರು ಹಾಕುವ ಶ್ರಮಾಧಾನ ಮಾಡಿದರು. ಪ್ರಾಧ್ಯಾಪಕರಾದ ಅರುಣ ಕುಮಾರ್ ಚಂದನ, ಮತ್ತು ಅಮರ ಗಿರಿ ಉಪಸ್ಥಿತರಿದ್ದರು.ಈ ಅಭಿಯಾನದ ಅಂಗವಾಗಿ ವಿದ್ಯಾರ್ಥಿಗಳಿಗೆ ಸಸಿಗಳನ್ನು ವಿತರಿಸಲಾಯಿತು. ಶಿಬಿರಾರ್ಥಿ ಕಾಶಿನಾಥರೆಡ್ಡಿ ಸ್ವಾಗತಿಸಿದರು. ರಾಜಶೇಖರ್ ಮಠಪತಿ ಕೊನೆಯಲ್ಲಿ ವಂದಿಸಿದರು.

# ಸಾಂಸ್ಕೃತಿಕ ನಾಯಕ ಬಸವಣ್ಣ ಹೆಸರಿನ ಭಾವಚಿತ್ರ ಅಳವಡಿಸಿ




ಭಾಲ್ಕಿಯ ತಹಸೀಲ್ ಕಚೇರಿಯಲ್ಲಿ ಎಲ್ಲ ಕಡೆಗಳಲ್ಲಿ ಸಾಂಸ್ಕೃತಿಕ ನಾಯಕ ಬಸವಣ್ಣ ಹೆಸರಿನ ಭಾವಚಿತ್ರ ಅಳವಡಿಸುವಂತೆ ನಮ್ಮ ಕರ್ನಾಟಕ ಸೇನೆಯ ಗೌರವಾಧ್ಯಕ್ಷ ರಮೇಶ ಚಿದ್ರಿ, ಜಿಲ್ಲಾಧ್ಯಕ್ಷ ಗಣೇಶ ಪಾಟೀಲ್ ಜ್ಯಾಂತಿ ನೇತೃತ್ವದಲ್ಲಿ ತಹಸೀಲ್ದಾರ ಮೂಲಕ ಸಿಎಂಗೆ ಮನವಿ ಸಲ್ಲಿಸಿದರು.

• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ**

ಜಿಲ್ಲೆ ಸೇರಿ ಎಲ್ಲ ಸರಕಾರಿ, ಅರೆ ಸರಕಾರಿ, ಬ್ಯಾಂಕ್, ಕಚೇರಿ ಸೇರಿದಂತೆ ಎಲ್ಲ ಖಾಸಗಿ ಶಾಲಾ–ಕಾಲೇಜು, ಸಾರ್ವಜನಿಕವಲಯಗಳಲ್ಲಿ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣ ಹೆಸರಿನ ಭಾವಚಿತ್ರ ಕಡ್ಡಾಯವಾಗಿ ಅಳವಡಿಸಿ ಬಸವ ಜಯಂತಿ ದಿನದಂದು ಪೂಜೆ ಸಲ್ಲಿಸಬೇಕು ಎಂದು ನಮ್ಮ ಕರ್ನಾಟಕ ಸೇನೆಯ ಜಿಲ್ಲಾ ಘಟಕದ ಪದಾಧಿಕಾರಿಗಳು ಮನವಿ ಮಾಡಿದ್ದಾರೆ.

ಈ ಕುರಿತು ಪಟ್ಟಣದ ತಹಸೀಲ್ ಕಚೇರಿಯಲ್ಲಿ ನಮ್ಮ ಕರ್ನಾಟಕ ಸೇನೆ ಜಿಲ್ಲಾ ಘಟಕದ ಗೌರವಾಧ್ಯಕ್ಷ ರಮೇಶ ಚಿದ್ರಿ ಮತ್ತು ಜಿಲ್ಲಾಧ್ಯಕ್ಷ ಗಣೇಶ ಪಾಟೀಲ್ ನೇತೃತ್ವದಲ್ಲಿ ತಹಸೀಲ್ದಾರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ವಿಶ್ವಗುರು ಬಸವಣ್ಣನವರ ಬಗ್ಗೆ ತಮಗೆ ಅಪಾರ ಅಭಿಮಾನವಿದೆ. ಬಸವ ಜಯಂತಿ ದಿನದಂತೆ ತಾವುಗಳು ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸಿದ್ದೀರಿ.

ಎಲ್ಲ ಸರಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರ ಅಳವಡಿಸುವಂತೆ ಆದೇಶ ಹೊರಡಿಸಿ ಬಸವಣ್ಣನವರಿಗೆ ನಿಜವಾದ ಗೌರವ ಸಲ್ಲಿಸಿದ್ದೀರಿ.

ಅದರಂತೆ ಎಲ್ಲ ಸರಕಾರಿ ಕಚೇರಿ, ಅರೆ ಸರಕಾರಿ, ಬ್ಯಾಂಕ್ ಮತ್ತು ಖಾಸಗಿ ಶಾಲಾ–ಕಾಲೇಜುಗಳಲ್ಲಿ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣ ಎಂಬ ಮುದ್ರಿತ ಬಸವಣ್ಣನವರ ಭಾವಚಿತ್ರ ಅಳವಡಿಸಲು ಆದೇಶ ಹೊರಡಿಸಬೇಕು ಎಂದು ಸಿಎಂ ಸಿದ್ದರಾಮಯ್ಯನವರಿಗೆ ಬರೆದ ಮನವಿ ಪತ್ರದಲ್ಲಿ ಮನವಿ ಮಾಡಲಾಗಿದೆ.

ಈ ಸಂದರ್ಭದಲ್ಲಿ ಸಂಘಟನೆಯ ಜಿಲ್ಲಾ ಯುವ ಘಟಕದ ಅಧ್ಯಕ್ಷ ಸುದೀಪ ತುಗಾಂವೆ, ಪ್ರಧಾನ ಕಾರ್ಯದರ್ಶಿ ಭದ್ರಯ್ಯ ಸ್ವಾಮಿ, ತಾಲೂಕು ಅಧ್ಯಕ್ಷ ಬಸವರಾಜ ಕಾರಬಾರಿ, ಉಪಾಧ್ಯಕ್ಷ ಜಗನ್ನಾಥ ಪಾಟೀಲ್, ಮಹೇಶ ರಾಚೋಟೆ, ತಾಲೂಕು ಯುವ ಘಟಕದ ಅಧ್ಯಕ್ಷ ಕಾಶಿನಾಥ ಚಳಕಾಪೂರೆ, ಸಂಘಟನಾ ಕಾರ್ಯದರ್ಶಿ ಸಂಗಮೇಶ ಮಾರ್ಗೆ, ಉಪಾಧ್ಯಕ್ಷ ರಾಜು ಕುಂಬಾರ, ಲೋಕೇಶ ಪಾಟೀಲ್ ಸೇರಿದಂತೆ ಹಲವರು ಇದ್ದರು.

# 22 ಕ್ಕೆ ಖರ್ಗೆ ಅವರ ಬೀದರ ಜಿಲ್ಲಾ ಪ್ರವಾಸ

• **ಮಲ್ಲಮ್ಮ ನುಡಿ ವಾರ್ತೆ ಬೀದರ**



ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾದ ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರು ಏಪ್ರಿಲ್.22 ರಂದು ಬೀದರ ಜಿಲ್ಲೆಯಲ್ಲಿ ಪ್ರವಾಸ ಕಾರ್ಯಕ್ರಮದ ಕೈಗೊಂಡಿರುತ್ತಾರೆ.

ಏಪ್ರಿಲ್.22 ರಂದು ಬೆಳಿಗ್ಗೆ 8 ಗಂಟೆಗೆ ಬೆಂಗಳೂರಿನಿಂದ (ವಿಶೇಷ ವಿಮಾನ) ಹೊರಟು 9.10ಕ್ಕೆ ಬೀದರಗೆ ಆಗಮಿಸಲಿದ್ದಾರೆ. ನಂತರ ಬೀದರ ರಸ್ತೆ ಮೂಲಕ ಭಾಲ್ಕಿಗೆ ಪ್ರಯಾಣಿಸಿ ಬೆಳಿಗ್ಗೆ 10 ಗಂಟೆಗೆ ನಾಡೋಜ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದೇವರ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ನಂತರ ಭಾಲ್ಕಿ ರಸ್ತೆ ಮೂಲಕ ಹೊರಟು ಬೀದರಗೆ ಆಗಮಿಸಿ ವಿಶೇಷ ವಿಮಾನದ ಮೂಲಕ ಬೆಂಗಳೂರಿಗೆ ತಲುಪಲಿದ್ದಾರೆಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಲಾಖೆಯ ಮಾಹಿತಿ ಸಾರ್ವಜನಿಕ ಪ್ರಕಟಿಸುವಂತೆ ವೆಂಕಟ್ ಸಿಂಗ್ ಸೂಚನೆ



• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ

ಮಾಹಿತಿ ಹಕ್ಕು ಕಾಯ್ದೆಯ ಸೆಕ್ಷನ್ 4(1)ಎ, 4(1)ಬಿ ರಂತೆ ಇಲಾಖೆಯ ಮಾಹಿತಿಯನ್ನು ಸಾರ್ವಜನಿಕವಾಗಿ ಪ್ರಕಟಿಸುವಂತೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ಆಯೋಗದ ಕಲಬುರಗಿ ಪೀಠದ ಆಯುಕ್ತ ಬಿ.ವೆಂಕಟ್ ಸಿಂಗ್ ಹೇಳಿದರು.

ಶನಿವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಇಂದಿಲ್ಲಿ ಜಿಲ್ಲೆಯ ಎಲ್ಲಾ ಜಿಲ್ಲಾ, ತಾಲೂಕು, ಗ್ರಾಮೀಣ ಹಂತದ ಅಧಿಕಾರಿಗಳಿಗೆ ಮಾಹಿತಿ ಹಕ್ಕು ಕಾಯ್ದೆ ಕುರಿತು ಕಾರ್ಯಾಗರ ನಡೆಸಲಾಗಿದ್ದು, ಮಾಹಿತಿ ಹಕ್ಕು ಕಾಯ್ದೆಯ ಮೂಲ ಆಶಯವೇ ಉತ್ತರದಾಯಿತ್ವ ಮತ್ತು ಸಾರ್ವಜನಿಕರಿಗೆ ಮಾಹಿತಿ ಒದಗಿಸುವುದಾಗಿದೆ. ಹೀಗಾಗಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ತಮ್ಮ ಕಚೇರಿ ಮಾಹಿತಿಯನ್ನು ಸ್ವಯಂ ಪ್ರೇರಿತರಾಗಿ ಕಾಯ್ದೆಯ ಸೆಕ್ಷನ್ 4(1)ಎ, 4(1)ಬಿ ರಂತೆ ಇಲಾಖೆಯ ಮಾಹಿತಿಯನ್ನು ಸಾರ್ವಜನಿಕವಾಗಿ ಪ್ರಕಟಿಸಿದಲ್ಲಿ ಕಚೇರಿಗೆ ಬರುವ ಅರ್ಜಿ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಲಿದೆ ಎಂದು ತಿಳಿಸಲಾಗಿದೆ ಎಂದರು.

ಕಲಬುರಗಿ ವಿಭಾಗದ ಪ್ರತಿ ಜಿಲ್ಲೆಯಲ್ಲಿ ಈ ರೀತಿಯ ಕಾರ್ಯಾಗಾರ ಆಯೋಜಿಸಿ ಅಧಿಕಾರಿಗಳಲ್ಲಿ ಕಾಯ್ದೆ ಮಹತ್ವ ಮತ್ತು ಉದ್ದೇಶ ಹಾಗೂ ತ್ವರಿತ ವಿಲೇವಾರಿ ಕುರಿತು ಅರಿವು ಮೂಡಿಸಲಾಗುತ್ತಿದೆ. ಇಂದಿನ ಕಾರ್ಯಾಗರದಲ್ಲಿ ನೂರಾರು ಸಂಖ್ಯೆಯಲ್ಲಿ ಅಧಿಕಾರಿಗಳು ಭಾಗವಹಿಸಿದ್ದು, ಅವರಲ್ಲಿ ಕಾಯ್ದೆ ಕುರಿತು, ಅರ್ಜಿ ವಿಲೇವಾರಿಯಲ್ಲಿರುವ ಹಲವು ಗೊಂದಲಗಳಿಗೆ ಇಂದಿಲ್ಲಿ ಸಂವಾದ ನಡೆಸಿ ಪರಿಹಾರ ನೀಡಲಾಗಿದೆ ಎಂದರಲ್ಲದೆ ಗೈರಾದ ಅಧಿಕಾರಿಗಳಿಗೆ ನೋಟಿಸ್ ನೀಡಲು ಸೂಚಿಸಿದೆ ಎಂದರು.

ಅಡಳಿತದಲ್ಲಿ ಪಾರದರ್ಶಕತೆ, ಜನರಿಗೆ ಉತ್ತರದಾಯಿತ್ವ ಇರಬೇಕೆಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಹಿತಿ ಹಕ್ಕು ಕಾಯ್ದೆ ತರಲಾಗಿದೆ. ಆದರೆ ಕೆಲವರು ಯಾವುದೇ ಸಾರ್ವಜನಿಕ ಹಿತದೃಷ್ಟಿ ಇಲ್ಲದೆ ಆರ್.ಟಿ.ಐ ಹೆಸರಿನಲ್ಲಿ ಅನಗತ್ಯ ಅಧಿಕಾರಿಗಳಿಗೆ ತೊಂದರೆ ಮಾಡುತ್ತಿದ್ದು ಅಯೋಗದ ಗಮನಕ್ಕೆ ಬಂದಿದೆ. ಇಂತಹ ಪ್ರಕರಣಗಳಲ್ಲಿ ರಾಜ್ಯದಾದ್ಯಂತ ಸುಮಾರು 26 ಜನರನ್ನು ಆರ್.ಟಿ.ಐ ನಡಿ ಅರ್ಜಿ ಸಲ್ಲಿಸದಂತೆ ನಿರ್ಬಂಧಿಸಲಾಗಿದೆ. ಇದರಲ್ಲಿ ಕಲಬುರಗಿ ವಿಭಾಗದಲ್ಲಿ ಸುಮಾರು 8–10 ಜನ ಅರ್ಜಿದಾರರು ಇದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ಮಾಹಿತಿ ಆಯೋಗದ ಆಯುಕ್ತ ಡಾ. ರಿಚರ್ಡ ವಿನ್ಸೆಂಟ್ ಡಿಸೋಜಾ, ಡಾ. ಮಹೇಶ ವಾಲ್ವೇಕರ ಇದ್ದರು.

# 20ರಿಂದ 22ವರೆಗೆ ಮಹಾತ್ಮ ಬಸವೇಶ್ವರ ಜಾತ್ರಾ ಮಹೋತ್ಸವ

• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ

ಇಲ್ಲಿನ ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿಯ ಹಾಗೂ ವಿಶ್ವಸ್ಥ ಸಮಿತಿಯಿಂದ ಹಮ್ಮಿಕೊಂಡಿರುವ ಮಹಾತ್ಮಾ ಬಸವೇಶ್ವರರ ಜಾತ್ರಾ ಮಹೋತ್ಸವ ದಿನಾಂಕ 20. 21. ಮತ್ತು 22. ರಂದು ಮೂರು ದಿನಗಳವರೆಗೆ ವಿವಿಧ ಧಾರ್ಮಿಕ ಚಟುವಟಿಕೆಗಳು ನಡೆಯಲಿವೆ. ಅದಕ್ಕಾಗಿ ಭರದ ಸಿದ್ಧತೆ ಕೈಗೊಳ್ಳಲಾಗಿದೆ.

ಎಪ್ರಿಲ್ 20.ರಂದು ಮುಂಜಾನೆ 5. ಗಂಟೆಗೆ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಬಸವಣ್ಣನವರ ಮೂರ್ತಿಗೆ ಅಷ್ಟಗಂಧ ಪೂಜೆ ನಂತರ ಅಕ್ಕನ ಬಳಗ. ವೈರಾಗ್ಯನಿಧಿ ಅಕ್ಕಮಹಾದೇವಿ ಮಂಟಪ ಹೊಸಪೇಟೆ ಓಣೆ ಇವರಿಂದ ವಚನ ಪಠಣ. ಬೆಳಿಗ್ಗೆ 7. ಗಂಟೆಗೆ ಮಹಾತ್ಮ ಬಸವಣ್ಣನವರ ಬೆಳ್ಳಿ ತೊಟ್ಟಿಲು ಮೆರವಣಿಗೆ ವಿವಿಧ ಕಲಾ ತಂಡಗಳಿಂದ ವೈಭವದೊಂದಿಗೆ ಶ್ರೀ ಬಸವೇಶ್ವರ ದೇವಸ್ಥಾನದಿಂದ ಹೊರಡಿ. ಪರುಷಕಟೆ. ಕೋಟೆ ಮುಖಾಂತರ ಶಿವಶರಣ ಹರಳಯ್ಯ ವೃತ್ತದವರೆಗೆ ತಲುಪಿ ಮರಳಿ ದೇವಸ್ಥಾನಕ್ಕೆ ಬರುವುದು. ಸಹಾಯಕ ಆಯುಕ್ತರಾದ ಪ್ರಕಾಶ ಕುದರೆ ಬೆಳ್ಳಿ ತೊಟ್ಟಿಲು ಪೂಜೆಯನ್ನು ನೆರವೇರಿಸಲಿದ್ದಾರೆ.

ಶಾಸಕರಾದ ಶರಣು ಸಲಗರ್ ಮೆರವಣಿಗೆಗೆ ಚಾಲನೆ ನೀಡುವವರು. ಸಂಜೆ 5 ಗಂಟೆಗೆ ಬಸವೇಶ್ವರ ದೇವಸ್ಥಾನದಲ್ಲಿ ತೊಟ್ಟಿಲು ಕಾರ್ಯಕ್ರಮದಲ್ಲಿ ಬಿಡಿಪಿಸಿ ನಿರ್ದೇಶಕಿ ಪುಷ್ಪಾವತಿ ಮಾಮ. ಶಾಮ ರಗಟೆ. ರಂಜನಾ ದುರ್ಗೆ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಬೀದರಿನ ಶಿವಕುಮಾರ ಪಂಚಾಳ ಅವರಿಂದ ವಚನ ಗಾಯನ. ರಾಣಿ ಸತ್ಯಮೂರ್ತಿ ಅವರಿಂದ ವಚನ ನೃತ್ಯ ಕಾರ್ಯಕ್ರಮ ಜರುಗಲಿದೆ. ದಿನಾಂಕ 21 ರಂದು ಸಾಯಂಕಾಲ 5 ಗಂಟೆಗೆ ಪಲ್ಲಕಿ ಪೂಜೆ ಮತ್ತು ನಂದಿಧ್ವಜ ಪೂಜೆಯನ್ನು ಹಾರಕೂಡ ಸಂಸ್ಥಾನ ಹಿರೇಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ನೆರವೇರಿಸಲಿದ್ದಾರೆ. ಬಿಡಿಪಿಸಿ ನಿರ್ದೇಶಕರಾದ ಇರಣ್ಣಾಹಲಶೆಟ್ಟೆ ಅಧ್ಯಕ್ಷತೆ ವಹಿಸುವರು. ಉಪಾಧ್ಯಕ್ಷರಾದ ಮಲ್ಲಿಕಾರ್ಜುನ ಕುರ–ಕೋಟೆ. ಕಾರ್ಯದರ್ಶಿಗಳಾದ ಅಶೋಕ ನಾಗರಳೆ. ನಿರ್ದೇಶಕರಾದ ರಾಜಕುಮಾರ ಹೊಳಕುಂದೆ. ಬಸವರಾಜ ತೊಂಡಾರೆ. ಭದ್ರಿನಾಥ ಪಾಟೀಲ.

ವಿವೇಕಾನಂದ ಹೊದಲೂರೆ. ಸುನೀಲ ಕುಮಾರ್ ಹೊಳಕುಂದೆ. ವಿಶ್ವಸ್ಥ ಸಮಿತಿಯ ಕಾರ್ಯದರ್ಶಿ ನಾಗಯ್ಯ ಸ್ವಾಮಿ. ವಿಶ್ವಸ್ಥ ಗದಗೆಪ್ಪ ಹಲಶೆಟ್ಟೆ. ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ರಾತ್ರಿ 8 ಗಂಟೆಗೆ ರಥ ಮೈದಾನದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ವಚನ ನೃತ್ಯ. ಸುಗಮ ಸಂಗೀತ. ವಚನ ಗಾಯನ ಕಾರ್ಯಕ್ರಮಗಳು ನಡೆಯಲಿವೆ.

ಶ್ರೀ ಬಸವೇಶ್ವರ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ಮಕ್ಕಳಿಂದ ವಚನ ನೃತ್ಯ. ಮಂಜುಳಾ ಮಲ್ಲಯ್ಯಾ ಸಂಭಾಲಮಠ ಲೋಕಾಪುರ ಅವರಿಂದ ಸುಗಮ ಸಂಗೀತ ಹಾಗೂ ಶಿವಕುಮಾರ್ ಪಾಂಚಳ ಇವರಿಂದ ವಚನ ಗಾಯನ ನಡೆಯಲಿದೆ. ಬಿಡಿಪಿಸಿ ನಿರ್ದೇಶಕರಾದ ಮಲ್ಲಿಕಾರ್ಜುನ ಚಿರಡೆ ಉದ್ಘಾಟಿಸಲಿದ್ದಾರೆ. ಕೋಶಾಧ್ಯಕ್ಷರಾದ ಜಗನ್ನಾಥ ಖುಬಾ ಅಧ್ಯಕ್ಷತೆ ವಹಿಸುವರು.

ಏ ದಿನಾಂಕ 22 ರಂದು ಬೆಳಿಗ್ಗೆ 7–30 ಗಂಟೆಗೆ ಶ್ರೀ ಬಸವೇಶ್ವರ ರಥ ಮೈದಾನದಲ್ಲಿ ಜಂಗಿ ಕುಸ್ತಿ ಸ್ಪರ್ಧೆ ನಡೆಯಲಿದೆ. ಎಪಿಎಂಸಿ ಮಾಜಿ ಅಧ್ಯಕ್ಷರಾದ ಸಿದ್ರಾಮಪ್ಪ ಗುದಗೆ ಉದ್ಘಾಟಿಸುವರು.

ಬಿಡಿಪಿಸಿ ನಿರ್ದೇಶಕರಾದ ಇರಣ್ಣಾಹಲಶೆಟ್ಟೆ ಅಧ್ಯಕ್ಷತೆ ವಹಿಸುವರು. ಸಾಯಂಕಾಲ 5– 30 ಗಂಟೆಗೆ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ನಂದಿಧ್ವಜ ಪೂಜೆ ಜರಗಲಿದೆ. ಸಾಯಂಕಾಲ 7 ಗಂಟೆಗೆ ರಥ ಮೈದಾನದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಶಿವಾನಿ ಸ್ವಾಮಿ ಅವರ ಸರಿಗಮಪ ಕಾರ್ಯಕ್ರಮ ಹಾಗೂ ಬತಗುಣಕಿಯ ಶ್ರೀ ಜಗಜ್ಯೋತಿ ಬಸವೇಶ್ವರ ನಾಟ್ಯ ಸಂಘ ಅವರಿಂದ ನಾಟಕ ಪ್ರದರ್ಶನ ನಡೆಯಲಿದೆ. ರಾತ್ರಿ 8–30 ಗಂಟೆಗೆ ಇಲ್ಲಿನ ಕೋಟೆ ಹತ್ತಿರ ನಂದಿಧ್ವಜ ವಿಶೇಷ ಪೂಜೆ ಮಾಜಿ ಶಾಸಕರಾದ ಮಲ್ಲಿಕಾರ್ಜುನ ಎಸ್ ಖೂಬಾ ನೆರವೇರಿಸಲಿದ್ದಾರೆ.

ರಾತ್ರಿ 12–30 ಗಂಟೆಗೆ ಶ್ರೀ ಬಸವೇಶ್ವರ ರಥ ಮೈದಾನದಲ್ಲಿ ಮಹಾತ್ಮಾ ಬಸವೇಶ್ವರರ ರಥೋತ್ಸವ ಹಾಗೂ ಸಮಾರೋಪ ಸಮಾರಂಭ ಜರುಗಲಿದೆ. ಬಿಡಿಪಿಸಿ ಅಧ್ಯಕ್ಷರಾದ ಅನೀಲ ಕುಮಾರ ರಗಟೆ. ಹಾಗೂ ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿಯ ಹಾಗೂ ವಿಶ್ವಸ್ಥ ಸಮಿತಿಯಿಂದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



# ಹಿರೇಮಠ ಸಂಸ್ಥಾನ ಬಸವತತ್ವದ ನಿಜಾಚರಣೆಯ ಮಠ



• ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ

ಭಾಲ್ಕಿ, ಹಿರೇಮಠ ಸಂಸ್ಥಾನ ಸಂಪೂರ್ಣವಾಗಿ ಬಸವತತ್ವದ ನಿಜಾಚರಣೆಯ ಮಠವಾಗಿದೆ. ಶತಾಯುಷಿ ಡಾ.ಚನ್ನಬಸವ ಪಟ್ಟದ್ದೇವರು ಹಾಕಿಕೊಟ್ಟ ಮಾರ್ಗದಲ್ಲಿ ಡಾ.ಬಸವಲಿಂಗ ಪಟ್ಟದ್ದೇವರು ನಿಷ್ಠೆಯಿಂದ ನಡೆ–ಯುತ್ತಿದ್ದಾರೆ ಎಂದು ಜಗದ್ಗುರು ಡಾ.ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ವಿಶ್ವಗುರು ಬಸವಣ್ಣನವರ ಜಯಂತಿ, ವಚನ ಜಾತ್ರೆ–2026, ಡಾ.ಚನ್ನಬಸವ ಪಟ್ಟದ್ದೇವರ 27ನೆಯ ಸ್ಮರಣೋತ್ಸವ ಮತ್ತು ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ನಿಮಿತ್ತ ಹಿರೇಮಠ ಸಂಸ್ಥಾನ ಮತ್ತು ಅಮೃತ ಮಹೋತ್ಸವ ಸಮಿತಿ ವತಿಯಿಂದ ಶುಕ್ರವಾರ ಆಯೋಜಿಸಿದ್ದ 75 ಸಾಧಕರ ಸನ್ಮಾನ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಪರಮ ಪೂಜ್ಯರು ತಮ್ಮ ಕಾರ್ಯದ ಮೂಲಕ ಬಸವತತ್ವದ ಸುಗಂಧ ಜಗತ್ತಿನಾದ್ಯಂತ ಪಸರಿಸುತ್ತಿದ್ದಾರೆ. ನಮ್ಮ ನಾಡಿನಲ್ಲಿ ಅಷ್ಟೇ ಅಲ್ಲ ದೇಶದಲ್ಲಿಯೇ ಹಿರೇಮಠ ಸಂಸ್ಥಾನ ಪ್ರಸಿದ್ಧಿ ಪಡೆದಿರುವುದು ಪೂಜ್ಯರ ಅವಿಶ್ರಾಂತ ಪರಿಶ್ರಮವೇ ಕಾರಣ. ಧರ್ಮಪ್ರಸಾರ ಮತ್ತು ಶಿಕ್ಷಣ ರಂಗದಲ್ಲಿ ಹಿರೇಮಠ ಸಂಸ್ಥಾನ ಮಹೋನ್ನತ ಕಾರ್ಯ ಮಾಡುತ್ತಿದೆ.

ಡಾ.ಬಸವಲಿಂಗ ಪಟ್ಟದ್ದೇವರಿಗೆ ಗುರುಬಸವ ಪಟ್ಟದ್ದೇವರಂತಹ ಸಮರ್ಥ ಉತ್ತರಾಧಿಕಾರಿ ದೊರೆತಿ–ದ್ದಾರೆ. ತಮ್ಮ ಗುರುವಿನ ಅಮೃತ ಮಹೋತ್ಸವ ಸಂಭ್ರಮದಿಂದ ಮಾಡುತ್ತಿರುವುದನ್ನು ನೋಡಿದರೆ ಅವರ ಗುರುನಿಷ್ಠೆ ಅನ್ಯ ಮಠಗಳಿಗೆ ಮಾದರಿಯಾಗಿದೆ ಎಂದು ತಿಳಿಸಿದರು.

ಇಮ್ಮಡಿ ಮುರುಘರಾಜೇಂದ್ರ ಮಹಾಸ್ವಾಮಿಗಳು, .ಶಿವಕುಮಾರ ಮಹಾಸ್ವಾಮಿಗಳು, ಶಿವಲಿಂಗ ಶಿವಾಚಾರ್ಯರು, ದಾರುಕಲಿಂಗ ಶಿವಾಚಾರ್ಯರು ಸಮ್ಮುಖ ವಹಿಸಿದ್ದರು.

ನಾಗನಾಥ ಮಾಶೆಟ್ಟೆ ಬಸವಣ್ಣನವರ ಮತ್ತು ಶ್ರೀಮಠದ ಗುರುಗಳ ಮೂರ್ತಿ ಪೂಜ್ಯರಿಗೆ ಸಮರ್ಪಿಸಿದರು. ಡಾ.ರಾಜೇಂದ್ರ ಜಾಧವ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ವೈಜಿನಾಥ ಬಿರಾದಾರ್, ಶಂಕರರಾವ ಪಾಟೀಲ, ರಾಜಶೇಖರ ಶಟಕಾರ, ಅಶ್ವಿನ್ ಭೋಸ್ಲೆ, ಬಸವರಾಜ ಚಪಟೆ, ಅಶೋಕ ಚಂದ್ರೆ, ಸಂಗಮೇಶ ಅಣದೂರೆ, ಸೂರ್ಯಕಾಂತ ಅಲ್ಮಾಜೆ, ನಾಗಶೆಟ್ಟಿಗಡ್ಡೆ, ಶಿವರಾಜ ಮಲ್ಲೇಶಿ ಸೇರಿದಂತೆ ಮುಂತಾದವರು ಇದ್ದರು. ಜಯಲಕ್ಷ್ಮಿ ದತ್ತುಕುಮಾರ ಕರಕಾಳೆ ನಿರೂಪಿಸಿದರು. ಪಾರ್ವತಿ ಧೂಮ್ಮನಸೂರೆ ವಂದಿಸಿದರು.

# ಭ್ರಷ್ಟಾಚಾರ ಮುಕ್ತ ಸಮಾಜಕ್ಕೆ ಮಾಹಿತಿ ಹಕ್ಕು ಕಾಯ್ದೆ ಪ್ರಮುಖ

ಕಲಬುರಗಿ: ಮಾಹಿತಿ ಹಕ್ಕು ಕಾಯ್ದೆಯು ನಾಗರಿಕರಿಗೆ ಅಧಿಕಾರ ನೀಡುವ, ಪಾರದರ್ಶಕ ಆಡಳಿತವನ್ನು ಉತ್ತೇಜಿಸುವ ಮತ್ತು ಭ್ರಷ್ಟಾಚಾರ ಮುಕ್ತ ಸಮಾಜವನ್ನು ನಿರ್ಮಿಸುವ ಒಂದು ಪ್ರಮುಖ ಸಾಧನವಾಗಿದ್ದು, ಸಾರ್ವಜನಿಕರು ಈ ಕಾಯ್ದೆಯನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಕರ್ನಾಟಕ ರಾಜ್ಯ ಮಾಹಿತಿ ಆಯುಕ್ತ ಡಾ.ಮಹೇಶ ವಾಲ್ವೇಕರ್ ಮನವಿ ಮಾಡಿದರು.

ಶನಿವಾರ ಕರ್ನಾಟಕ ಮಾಹಿತಿ ಹಕ್ಕು ಆಯೋಗ ಕಲಬುರಗಿ ಪೀಠ ಹಾಗೂ ಕಲಬುರಗಿ ಜಿಲ್ಲಾಡಳಿತ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಿ.ಸಿ. ಕಚೇರಿ ಸಭಾಂಗಣದಲ್ಲಿ ಜಿಲ್ಲಾ, ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಹಾಗೂ ಗ್ರಾಮ ಪಂಚಾಯತಿ ಪಿ.ಡಿ.ಓ. ಗಳಿಗೆ ಆಯೋಜಿಸಲಾಗಿದ್ದ ಮಾಹಿತಿ ಹಕ್ಕು ಅಧಿನಿಯಮ–2005 ಕುರಿತ ಜಾಗೃತಿ ಕಾರ್ಯಾಗಾರ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿ ಮಾತನಾಡಿದರು.

# ಬಸವ ಜಯಂತಿ: ಭವ್ಯ ಬೈಕ್ ಕಾರ್ ರ್‍ಯಾಲಿ



• ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ

ಪಟ್ಟಣದ ಚನ್ನಬಸವಾಶ್ರಮದಲ್ಲಿ ಎ.18 ರಂದು ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಜಯಂತಿ, ವಚನ ಜಾತ್ರೆ–2026, ಡಾ.ಚನ್ನಬಸವ ಪಟ್ಟದ್ದೇವರ 27ನೇ ಸ್ಮರಣೋತ್ಸವ ಮತ್ತು ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಅಂಗವಾಗಿ ನಡೆದ ಬೈಕ್ ಮತ್ತು ಕಾರ್ ರ್‍ಯಾಲಿಗೆ ಶ್ರೀ ಗುರುಬಸವ ಪಟ್ಟದ್ದೇವರ ನೇತೃತ್ವದಲ್ಲಿ ಯುವಮುಖಂಡ ಪ್ರಸನ್ ಖಂಡ್ರೆ ಬಸವ ಧ್ವಜ ಹಾರಿಸುವ ಮೂಲಕ ರ್‍ಯಾಲಿಗೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಪೀಠಾಧಿಪತಿ ಶ್ರೀ ಗುರುಬಸವ ಪಟ್ಟದ್ದೇವರು ರ್‍ಯಾಲಿಯಲ್ಲಿ ಅಸಂಖ್ಯಾತ ಮಹಿಳಾ, ಪುರುಷರು ಸ್ವಯಂ ಪ್ರೇರಣೆಯಿಂದ, ಉತ್ಸಾಹದಿಂದ, ಜೋಷನಿಂದ ಪಾಲ್ಗೊಂಡಿದನ್ನು ನೋಡಿ ಬಹಳ ಖುಷಿಯಾಗಿದೆ. ಇದೇ ಮೊದಲ ಬಾರಿಗೆ ಅಷ್ಟೊಂದು ಕಾರ್, ಬೈಕ್ ರ್‍ಯಾಲಿಯಲ್ಲಿ ಭಾಗವಹಿಸಿ ಶೋಬೆ ತಂದಿದ್ದಾರೆ ಎಂದರು. ಅದೆ ತರಹ ಎ.20,21 ಮತ್ತು 22 ರಂದು ನಡೆಯುವ ಎಲ್ಲ ಕಾರ್ಯಕ್ರಮಗಳಲ್ಲಿ ತಾವೆಲ್ಲರೂ ಭಾಗವಹಿಸಬೇಕು ಎಂದು ಮನವಿ ಮಾಡಿದರು. ಬೈಕ್ ಮತ್ತು ಕಾರ್ ರ್‍ಯಾಲಿ ಮೆರವಣಿಗೆಯು ಚನ್ನಬಸವಾಶ್ರಮದಿಂದ ಆರಂಭಗೊಂಡು

ಅಂಬೇಡ್ಕರ್ ವೃತ್, ಬೊಮ್ಮಗೊಂಡೇಶ್ವರ ವೃತ್, ಹಿರೆಮಠ ಗಲ್ಲಿ, ಚೌವಡಿ, ಗಡಿ ಮೂಲಕ, ಲೆಕ್ಚರ ಕಾಲೋನಿ, ಭೀಮ ನಗರ, ಸುಬಾಷ ಚೌಕ್, ಸರಾಫ್ ಬಜಾರ, ಗಾಂಧಿ ಚೌಕ್, ಬಸವೇಶ್ವರ ವೃತ್ತ ಹಾದು ಚನ್ನಬಸವಾಶ್ರಮದಲ್ಲಿ ಸಮಾವೇಶ ಗೊಂಡಿತ್ತು. ಮೆರವಣಿಗೆಯುದ್ದಕ್ಕೂ ಯುವಕ, ಯುವತಿಯರು ಸ್ವತ: ಬೈಕ್, ಕಾರ್ ನಡೆಸಿ ರ್‍ಯಾಲಿಗೆ ಮತ್ತಷ್ಟು ಹುರುಪು ನೀಡಿದರು. ಬಸವೇಶ್ವರ ಮಹಾರಾಜ ಕೀ ಜೈ, ಚನ್ನಬಸವ ಪಟ್ಟದ್ದೇವರಿಗೆ, ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರಿಗೆ, ಗುರುಬಸವ ಪಟ್ಟದ್ದೇವರಿಗೆ ಜಯವಾಗಲಿ ಎಂಬ ಘೋಷಣೆಗಳು ಮುಗಿಲು ಮುಟ್ಟುವಂತಿದ್ದವು ರ್‍ಯಾಲಿಯು ಅತ್ಯಂತ ಶಾಂತ ಮತ್ತು ಸುಗವಾಗಿ ನಡೆದು ಬಂತು. ಮೆರವಣಿಯಲ್ಲಿ ಅಂದಾಜು 105 ಕಾರ್ ಮತ್ತು 205 ಬೈಕ್‌ಗಳು ಭಾಗವಹಿಸಿದ್ದು ವಿಶೇಷವಾಗಿತ್ತು.

ಈ ಸಂದರ್ಭದಲ್ಲಿ ಸಮಿತಿ ಅಧ್ಯಕ್ಷ ಯೋಗೇಶ ಅಷ್ಟೂರೆ, ಪ್ರಮುಖರಾದ ಚನ್ನಬಸವಣ್ಣ ಬಳತೆ, ಶಿವು ಲೋಖಂಡೆ, ವಿಲಾಸ ಬಕ್ಕಾ, ಜಗದೀಶ ಖಂಡ್ರೆ, ಜೈರಾಜ ಪಾತ್ರೆ, ಪ್ರಕಾಶ ಮಾಶಟ್ಟೆ, ಡಾ.ಅಮೀತ ಅಷ್ಟೂರೆ, ಚಂದ್ರಶೇಖರ ವಂಕೆ, ಉಮಾಕಾಂತ ವಾರದ, ಚಂದ್ರಶೇಖರ ಎಮ್ಮೆ, ಚಂದ್ರಕಾಂತ ಬಿರಾದಾರ, ಕಿರಣಕುಮಾರ ಖಂಡ್ರೆ, ಓಂಕಾರ ಕನಶೆಟ್ಟೆ, ಕಪಿಲ ಕಲ್ಯಾಣೆ, ಸಂಗಮೇಶವಾಲೆ, ಡಾ.ಶಶಿಕಾಂತ ಭೂರೆ, ಡಾ.ಸಜ್ಜಲ ಬಳತೆ, ಅಮರ ಜಲ್ದೆ, ಅನೀಲ ಲೋಖಂಡೆ, ಡಾ.ವಸಂತ ಪವಾರ, ಡಾ.ನಿತೀನ ಪಾಟೀಲ್, ಕೈಲಾಸ ಮಡ್ಡೆ, ನಾಗೇಶ ತಮಾಸಂಗೆ, ಟಿಂಕು ರಾಜಭವನ, ಮಹಾಂತೇಶ ದಶಮುಖೆ, ಪ್ರಭು ಡಿಗ್ಗೆ, ಪ್ರಸಣ್ಣೆ, ಪ್ರಶಾಂತ ಕಾಕನಾಳೆ, ಸಂದೀಪ ಅಷ್ಟೂರೆ, ಸಂಗಮೇಶ ಕೊಡಗೆ, ಸಂತೋಷ ಮುದಾಳೆ, ಶುಬಾಂಗಿ ಬಳತೆ, ಸುನೀತಾ ಮೆನಕೆರಿ, ದೀಪಾ ಅಷ್ಟೂರೆ, ಮಲ್ಲಮ್ಮ ಪಾಟೀಲ್, ಪಾರ್ವತಿ ಧುಮನಸೂರೆ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಬಸವಣ್ಣ ನವರು ಸಮಾಜಕ್ಕೆ ನೀಡಿರುವ ಕೊಡುಗೆ ಅಪಾರ ಅವರ ಬದುಕೆ ಆದರ್ಶ ಪ್ರಾಯ

ಕಾರ್ತಿಕದ ಕತ್ತಲಲ್ಲಿ,
ಆಕಾಶ ದೀಪವಾಗಿ ನಿ ಬಂದೆ,
ಬಟ್ಟೆ ಗೆಟ್ಟವರಿಗೊಂದು ದೊಂದು ದಿಕ್ಕಾಗಿ ಎಂಟು ಶತಮಾನಗಳ ಹಿಂದೆ,
ಅಗ್ನಿ ಖಡ್ಗವನಾಂತು,
ಓ ಆದ್ಯತ್ಮ ಕಾಂತಿ ವೀರ,
ದೇವ ದಯಯೊಂದೆ ಹೇ,
ಧೀರಾವತಾರ ಶ್ರೀ ಗುರು ಬಸವೇಶ್ವರ.

12 ನೇ ಶತಮಾನದ ಮಹಾನ ಚೇತನ ಶಕ್ತಿ, ಭಕ್ತಿ ಭಂಡಾರಿ, ತತ್ವಜ್ಞಾನಿ, ಸಮಾಜ ಸುಧಾರಕ, ವಚನಕಾರ ದಾರ್ಶನಿಕ, ವಿಶ್ವ ಗುರು ಬಸವಣ್ಣನವರ 893 ನೇ ಜಯಂತಿಯ ಶುಭಾಶಯಗಳು ಸಲ್ಲಿಸುತ್ತಾ ಬಸವಣ್ಣನವರು ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ ಜನಿಸಿ ತಮ್ಮ ಕಾಯಕ ಕಲ್ಯಾಣದ ಬಿಜ್ಜಳ ರಾಜನ ಆಸ್ತಾನದಲ್ಲಿ ಮಹಾಮಂತ್ರಿಯಾಗಿ ಕಾರ್ಯನಿರ್ವಸಿದರು.

ಬಸವಣ್ಣನವರು "ಕಾಯಕ" "ದಾಸೋಹ" ಎಂಬ ಎರಡು ತತ್ವಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು ಅವರು ತಮ್ಮ ಅನುಭಾವದ ನುಡಿಗಳನ್ನು ವಚನಗಳ ಮುಖಾಂತರ ಸಮಾಜ ಸುಧಾರಿಸುವಲ್ಲಿ, ಜಾತೀಯತೆ ಹಾಗೂ ಮೊಡನಂಬಿಕೆ ವಿರುದ್ಧ ಹೋರಾಡಿ ಜನರಲ್ಲಿ ಜಾಗ್ರತಿ ಮೂಡಿಸುವ ಕೆಲಸ ಮಾಡಿದ್ದಾರೆ, ಅವರು ಅಲ್ಲಮಪ್ರಭು ಅಧ್ಯಕ್ಷತೆಯಲ್ಲಿ 770 ಅಮರಗಣಂಗಳು ಒಟ್ಟಿಗೆ ವಚನ ರಚಿಸುವದು ಅನುಭವ ಹಂಚಿಕೊಳ್ಳಲು ಮುಕ್ತವಾದ ವೇದಿಕೆ ಅನುಭವ ಮಂಟಪ ಸ್ಥಾಪಿಸಿದರು ಬಸವಣ್ಣ, ಲಿಂಗ, ಜಾತಿ, ತಾರತಮ್ಯ, ಮಹಿಳಾ ಸ್ವಾತಂತ್ರ್ಯ ಸಮಾಜ ನಿರ್ಮಾಣಕ್ಕೆ ಅಡಿಪಾಯ ಹಾಕಿದವರೆ ಬಸವಣ್ಣ ಧಾರ್ಮಿಕ ಚಟುವಟಿಕೆಯಲ್ಲಿ ಸ್ತ್ರೀಯರಿಗೆ ಪುರುಷರಷ್ಟೆ ಸರಿ ಸಮಾನ ಸ್ವಾತಂತ್ರ್ಯ ನೀಡಿದವರು ಬಸವಣ್ಣ ಮಹಾಂಟಪದಲ್ಲಿ ಅಕ್ಕಮಹಾದೇವಿ, ನೀಲಾಂಬಿಕ, ಅಕ್ಕನಾಗಮ್ಮ, ಸತ್ಯಕ್ಕ, ಆದ್ದಕ್ಕಿಲಕ್ಕಮ್ಮ, ಸಂಕವ್ವ ಹೀಗೆ ಹಲವಾರು ಶರಣೆಯರು ತಮ್ಮ ವಚನ ರಚಿಸಿ ಅನುಭವ ಹಂಚಿಕೊಳ್ಳುತ್ತಿದ್ದರು,

ಬಸವಣ್ಣನವರು ಕಾಯಕಕ್ಕೆ ಅತ್ಯಂತ ಮಹತ್ವ ನೀಡಿದ್ದರು ಅವರೆ ಒಂದು ವಚನದಲ್ಲಿ ಹೇಳಿದಂತೆ, ಅಸಿಯಾಗಲಿ ಮಸಿಯಾಗಲಿ,

ಕೃಷಿಯಾಗಲಿ ವಾಣಿಜ್ಯವಾಗಲಿ, ಸ್ವ ಕಾಯಕ ಮಾಡಿ ಗುರು–ಲಿಂಗ–ಜಂಗಮದ ಮುಂದಿಟ್ಟು...

ಕಾಯಕ ಮಾಡು ಎಂದು ಹೇಳುತ್ತಾರೆ, ಆಯ್ದಕ್ಕಿ ಲಕ್ಕಮ್ಮ ಅವರ ವಚನದಲ್ಲಿ "ಕಾಯಕವಿಲ್ಲದವರು ಭಕ್ತನಲ್ಲ, ಸತ್ಯಶುದ್ಧವಿಲ್ಲದುದು ಕಾಯಕವಲ್ಲ"

ಒಟ್ಟರೆ ಹೇಳುವಹಾಗೆ ಕಾಯಕ ಅತ್ಯಂತ ಪ್ರಮಾಣಿಕವಾಗಿರಲಿ ಅನ್ವಯ ಮೋಸದಿಂದ ಆಗಿರಲ್ಲಿ ಉಳಿದಿದ್ದಲಿ ಹಂಚಿಕೊಂಡ ಬದುಕುವ ಗುಣವಿರಲಿ ಎಂದು ಹೇಳಿದವರು, ಜೊತೆಯಲ್ಲಿ ಸಮಾಜಕ ಕ್ರಾಂತಿಯ ಹರಿಕಾರ ಬಸವಣ್ಣ ಅಂತರಜಾತಿ ವಿವಾಹ ಮಾಡಿಸಿ ಜಾತ್ಯಾತೀತ ಸಮಾಜ ನಿರ್ಮಾಣ ಮಾಡಿದ ಬಸವಣ್ಣ ಅದಕ್ಕೆ ಹೆಳುವದು ಊಣಲು ಕಲಿಸಿದ ಬಸವ, ಉಡಲು ಕಲಿಸಿದ ಬಸವ, ನಡೆಯಲು ಕಲಿಸಿದ ಬಸವ, ನುಡಿಯು ಕಲಿಸಿದ ಬಸವ, ಎಂದು ಅಂ–ದು ಮಹತ್ಮಾ ಗಾಂಧಿಯವರ ಮೂರು ಸಿದ್ಧಾಂತ ಕೆಟ್ಟದನ್ನು ನೊಡಬೆಡ, ಕೆಟ್ಟದನ್ನು ಕೇಳಬೇಡ ಕೆಟ್ಟದನ್ನು ಮಾತನಾಡಬೇಡ. ಅದಕ್ಕೆ ಬಸವಣ್ಣನವರು ಅಂದೇ ತಮ್ಮ ವಚನದ ಮುಖಾಂತರ ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ,

ಮತ್ತೊಂದು ಕೇಳದಂತೆ ಕಿವುಡನ ಮಾಡಯ್ಯ ತಂದೆ,

ಅನ್ಯವಿಷಯ ಕ್ಕೆಳಿಸದಂತೆ ಇರಿಸು ಕೂಡಲಸಂಗಮದೇವ ಎಂದು ಉತ್ತರಿಸಿದವರು ಬಸವಣ್ಣ.

ಹೀಗೆ ಅನೇಕ ವಿಚಾರಗಳು ಅವರು ತಮ್ಮ ವಚನಗಳ ಮುಖಾಂತರ ಸಮಾಜ ತಿದ್ದುವಲ್ಲಿ ಅವರ ಪಾತ್ರ ಪ್ರಮುಖ್ಯವಾಗಿದೆ ಬಸವಣ್ಣ ಒಬ್ಬ ವ್ಯಕ್ತಿ ಅಲ್ಲಾ ಆತ ಮನುಕುಲದ ಉದ್ಧಾರಕ

ಸ್ತ್ರೀ ಸಮಾನತೆ: ಶತಶತಮಾನಗಳಿಂದ ಶೋಷಣೆಗೆ ಒಳಪಟ್ಟಿದ್ದ ಸ್ತ್ರೀಸಮುದಾಯದ ಧ್ವನಿಯಾದವರು ಬಸವಾದಿ ಶರಣರು. ಹೆಣ್ಣು ಮಾಯೆಯಲ್ಲ ಎಂದು ಪ್ರತಿಪಾದಿಸುತ್ತಾ ಲಿಂಗಬೇಧದ ವಿರುದ್ಧ ಸಿಡಿದೇಳುವ ಮೂಲಕ ಸ್ತ್ರೀ ಸ್ವಾತಂತ್ರ್ಯ ಪ್ರತಿಪಾದನೆ ಮಾಡಿದವರು ಬಸವಣ್ಣನವರು. ಹೆಣ್ಣು ಗಂಡು ಎನ್ನುವ ಕಲ್ಪನೆ ಕೇವಲ ದೇಹಕ್ಕೆ ಮಾತ್ರವೇ ವಿನಃ ಆತ್ಮಕ್ಕೆ ಅಲ್ಲ ಎಂಬ ವಿಶಿಷ್ಟ ಕಲ್ಪನೆ ನೀಡಿದ ಹಿರಿಮೆ ಬಸವಾದಿ ಶರಣರಿಗೆ ಸಲ್ಲುತ್ತದೆ.

ಬಸವಣ್ಣನವರ ದಿವ್ಯನೇತೃತ್ವದಲ್ಲಿ ನಡೆದ ಸಮಗ್ರ ಕ್ರಾಂತಿಯ ಸ್ವರೂಪವನ್ನು ಅರ್ಥೈಸಬೇಕಾದರೆ ಅವರು ಹಾಗೂ ಅವರ ಸಮಕಾಲೀನ ಶರಣರು ರಚಿಸಿದ ವಚನ ಸಾಹಿತ್ಯಕ್ಕೆ ನಾವು ಮೊರೆ ಹೋಗಬೇಕಾಗುತ್ತದೆ. ಏಕೆಂದರೆ ಶರಣ–ರು ನಡೆಸಿದ ಕ್ರಾಂತಿಗೆ ವಚನಸಾಹಿತ್ಯವೇ ನೀತಿಸಂಹಿತೆ. ಅದೇ ಅವರ ಹೋರಾಟದ ಸಂವಿಧಾನ. ವಚನ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಹೊಸ ರೂಪ ತಂದು ಕೊಟ್ಟಂತಹ ಅನುಭಾವ ಸಾಹಿತ್ಯ. ವಚನ ಸಾಹಿತ್ಯದ ರಚನೆ, ಶರಣರ ಮೂಲ ಉದ್ದೇಶವಾಗಿರಲಿಲ್ಲ. ಅದು ಅವರ ನಿರಂತರ ಜೀವನಾನುಭವದಿಂದ ಹುಟ್ಟಿಕೊಂಡ ಅಂತರಂಗದ ಸಹಜ ಅಭಿವ್ಯಕ್ತಿ. ಶರಣರ ಬದುಕಿನ ಅನುಸಂಧಾನದ ಹಾದಿಯಲ್ಲಿ ಅವರ ಅನುಭಾವದ ಮೂಸೆಯಲ್ಲಿ ಅರಳಿದ ಅನನ್ಯ ಜ್ಞಾನರತ್ನವೇ ವಚನಗಳು. ವಚನ ಸಾಹಿತ್ಯದ ಮೂಲ ಆಶಯ ವ್ಯಕ್ತಿಯ ಕಲ್ಯಾಣದೊಂದಿಗೆ ಲೋಕಕಲ್ಯಾಣದ ಸಾಧನೆ. ವಚನ ಸಾಹಿತ್ಯದ ಉಗಮಸ್ಥಾನವೇ ಅನುಭವ ಮಂಟಪ. ವಿಶ್ವದ ಪ್ರಪ್ರಥಮ ಪಾರ್ಲಿಮೆಂಟ್ ಎಂಬ ಹೆಗ್ಗಳಿಕೆಗೆ ಪಾತ್ರವಾದ ಅನುಭವ ಮಂಟಪ ಶರಣರ ತತ್ವಚಿಂತನೆಗೆ ಒಂದು ವೇದಿಕೆಯಾಯಿತು. ಲಿಂಗಬೇಧವಿಲ್ಲದೆ, ವರ್ಣಬೇಧವಿಲ್ಲದೆ ಎಲ್ಲ ಶರಣರು ಒಂದೆಡೆ ಸೇರಿ ತಮ್ಮ ವಿಚಾರಗಳನ್ನು ಅಭಿವ್ಯಕ್ತಿಗೊಳಿಸುವ ಇತರರ ವಿಚಾರಗಳನ್ನು ಹಂಚಿಕೊಳ್ಳುವ ಒಂದು ವಿಚಾರ ದಾಸೋಹದ ಕೇಂದ್ರವಾಯಿತು ಅನುಭವಮಂಟಪ.


ದಯೆಯೆ ಧರ್ಮದ ಮೂಲವಯ್ಯ
ದಯೆಯಿಲ್ಲದ ಧರ್ಮ ಯಾವುದಯ್ಯ
ದಯೆ ಬೇಕು ಸಕಲ ಪ್ರಾಣಿಗಳೆಲ್ಲರಲಿ
ದಯೆಯೆ ಧರ್ಮದ ಮೂಲವಯ್ಯ
ಕೂಡಲಸಂಗಮದೇವನಂತಲ್ಲದೊಲ್ಲನಯ್ಯಾ.

ಎಂಬ ಬಸವಣ್ಣನವರ ವಾಣಿಯಂತೆ ಶರಣ ಧರ್ಮದ ಮೂಲ ಆಧಾರವೇ ದಯೆ. ಶರಣ ಧರ್ಮದ ಮೂಲ ತಳಹದಿಯೇ ದಯೆ. ಪರಸ್ಪರ ಪ್ರೀತಿ, ಪ್ರೇಮ, ದಯೆಯಂತಹ ಮಾನವೀಯ ಗುಣಗಳಿಂದಾಗಿ ಶರಣರು ಪ್ರತಿಪಾದಿಸಿದ ಧರ್ಮ ಮಾನವ ಧರ್ಮವಾಯಿತು. ಶರಣರು ಕೇವಲ ಮಾನವರಲ್ಲಿ ಮಾತ್ರ ದಯೆ ತೋರಿದವರಲ್ಲ. ಇಡೀ ಜೀವರಾಶಿಗೆ ದಯೆಯ ಮಳೆಯನ್ನು ಸುರಿಸಿದವರು.

ಶರಣರು ಧಾರ್ಮಿಕ ಚಿಂತನೆ ಉಳ್ಳವರಾಗಿದ್ದರೂ, ಎಂದೂ ಸಹ ಮೂಢನಂಬಿಕೆಗಳನ್ನು ಧರ್ಮದ ಹೆಸರಿನಲ್ಲಿ ಪ್ರೋತ್ಸಾಹಿಸಿದವರಲ್ಲ. ಬದಲಿಗೆ ಮೂಢನಂಬಿಕೆಗಳ ವಿರುದ್ಧ ಸಮರ ಸಾರಿದವರು.

ಶಿಕ್ಷಣ ಕಲಿಸಿ, ವಚನಗಳನ್ನು ರಚನೆ ಮಾಡುವಂತೆ ಪ್ರೋತ್ಸಾಹ ಮಾಡಿರುವುದು ಸಣ್ಣ ಕೆಲಸವಲ್ಲ. ಅದಕ್ಕಾಗಿಯೇ ಬಸವಾದಿ ಶರಣರ ವಚನ ಸಾಹಿತ್ಯವು ವಿಶ್ವ ಶ್ರೇಷ್ಠ ಸಾಹಿತ್ಯವಾಗಿದೆ ಎಂದು ಹೇಳಲು ಹೆಮ್ಮೆ ಎನಿಸುತ್ತದೆ. ಈ ಕಾರಣಕ್ಕಾಗಿ ವಚನ ಸಾಹಿತ್ಯವೂ ಸರ್ವರಿಗೂ ಸಮಬಾಳು, ಸಮಪಾಲು ತತ್ವ ನೀಡುತ್ತದೆ. ಸರ್ವರ ಬಾಳು ಬೆಳಗಿಸುವುದು ಸಮಾನತೆಯ ಸಮಾಜ ನಿರ್ಮಾಣವೇ ವಚನ ಸಾಹಿತ್ಯದ ಪ್ರಮುಖ ಉದ್ದೇಶ ತತ್ವವಾಗಿದೆ. ಹೀಗೆ ವಚನ ಸಾಹಿತ್ಯ ಅಂದಿನ ಸಮಾಜದ ಜನಮಾನಸದಲ್ಲಿ ಬೇರೂರಿದ್ದ ಮೂಢನಂಬಿಕೆ, ಕಂದಾಚಾರಗಳನ್ನು ಖಂಡಿಸಿ ಸುಜ್ಞಾನವನ್ನು ಬಿತ್ತಿ ಸದಾಚಾರದ ಬೆಳೆತೆಗೆಯುವ ಸ್ವಭಾವದವು ಆಗಿದ್ದವು. ವಚನಗಳು ಓದುಗರಿಗೆ ಬೇವಿನಂತೆ ಕಹಿಯೆನಿಸಿದರೂ ಅವುಗಳನ್ನು ಆಚರಣೆಗೆ ತಂದಾಗ ಬೆಲ್ಲದಂತೆ ಸಿಹಿಯಾಗುವುದನ್ನು ಕಾಣುತ್ತೇವೆ. ಇನ್ನು ಕೆಲವು ವಚನಗಳು ಶರಣರು ಸಾಧಿಸಿದ ಆಧ್ಯಾತ್ಮಿಕ ಸಾಧನೆಯ ಶಿಖರದ ಕನ್ನಡಿಗಳಾಗಿವೆ, ವಚನಗಳನ್ನು ಓದುತ್ತಿದ್ದರೆ ಶರಣರು ನಿಂತ ನೆಲೆ ಏರಿದ ಎತ್ತರ ಅನುಭಾವದ ಆಳ ನಮ್ಮ ಅರಿವಿಗೆ ಬರುತ್ತಾ ಹೋಗುತ್ತದೆ. ಬಸವಣ್ಣನವರು ವಿಶ್ವಗುರುವಾಗಿ, ತನ್ನ ಅನುಭವ ಮಂಟಪದ ಮೂಲಕ ಸಮಾನ ಮನಸ್ಕ ಚಿಂತಕರನ್ನು ಕಲ್ಯಾಣ ನಾಡಿಗೆ ಬರಮಾಡಿಕೊಂಡಿರುವುದು. ಆ ಮೂಲಕ ಕಲ್ಯಾಣ ಪ್ರಾಂತ್ಯವು ವೈಚಾರಿಕ ಕ್ರಾಂತಿಯ ಕೇಂದ್ರಬಿಂದುವಾಯಿತು.

ಬಸವನ ಬೆಳಕೆ ಎಲ್ಲಾಡಿ ಬಂದೆ,
ಭಾರತವೆಲ್ಲಾ ಸುತ್ತಾಡಿ ಬಂದೆ,
ನಿಟ್ಟುಸಿರೆದೆಯನ್ನು ಬೆಳಗಿಸಿ ಬಂದೆ,
ನಿರಾಶೆಯದೆಯನ್ನು ತೊಳಗಿಸಿ ಬಂದೆ,
ಹೆಣ್ಣಿನ ಕಂಬನ್ನಿ ಬತ್ತಿಸಿ ಬಂದೆ,
ಆಶಾಜೋತಿಯ ಹೊತ್ತಿಸಿ ಬಂದೆ,
ದೀನರ ಬಾಳನು ಮುಸುಕಿದ ಕಾಲವ,
ಕಬಳಿಸಿ ಬಂದೆ,ಧವಳಿಸಿ ಬಂದೆ,
ಕನ್ನಡ ವನದಲ್ಲಿ ಕುಣಿದಾಡಿ ಬಂದೆ.
ಹೀಗೆ ಬಸವನ ಬೆಳಕು ಜಗವೆಲ್ಲ ಬೆಳಗಲಿ .



ಡಾ. ಸಿದ್ಧಲಿಂಗ ವಿ.ನಿರ್ಣಾ
ಅಧ್ಯಕ್ಷರು ಕನ್ನಡ ಸಾಹಿತ್ಯ ಪರಿಷತ್ತು
ಹುಮನಾಬಾದ
+919743761000

# ಪುಸ್ತಕ ಪ್ರೇಮ ಬೆಳಸಿಕೊಳ್ಳಿ: ಪ್ರಭುಲಿಂಗ ಶ್ರೀ

ಮಲ್ಲಮ್ಮನುಡಿ ವಾರ್ತೆ ಯಾದಗಿರಿ

ಪುಸ್ತಕಗಳನ್ನ ಓದುವ ಸಂಸ್ಕೃತಿ ಬೆಳೆಸಬೇಕು ಜೊತೆಗೆ ಇಂದಿನ ವಿದ್ಯಾರ್ಥಿಗಳು ಮತ್ತು ಯುವ ಜನರು ಸಾಹಿತ್ತಿಕ ಪುಸ್ತಕಗಳನ್ನ ಅಧ್ಯಾಯನ ಮಾಡಬೇಕು ಎಂದು ಸುರಪುರ ನಿಷ್ಠಿ ಕಡ್ಲೆಪ್ಪನವರ ವೀರಕ್ತ ಮಠದ ಪೂಜ್ಯ ಶ್ರೀ ಪ್ರಭುಲಿಂಗ ಸ್ವಾಮಿಗಳು ಹೇಳಿದರು,ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರ ಮನೆಗೊಂದು ಗ್ರಂಥಾಲಯ ಜಿಲ್ಲಾ ಜಾಗೃತಸಮಿತಿಯಾದಗಿರಿವತಿಯಿಂದ ಶ್ರೀ ಮಠದಲ್ಲಿ ನಡೆದ ಗ್ರಂಥಾಲಯ ಅನುಷ್ಠಾನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು, ಗ್ರಂಥಾಲಯ ಉದ್ಘಾಟಿಸಿದ ಪುಸ್ತಕ ಪ್ರಾಧಿಕಾರ ಅಧ್ಯಕ್ಷರಾದ ಡಾ. ಮಾನಸ ಮಾತನಾಡಿ ಪ್ರತಿಯೊಬ್ಬರು ಮನೆಯಲ್ಲಿ ಗ್ರಂಥಾಲಯಕ್ಕೆ ಒಂದು ಕೋಣೆಯನ್ನ ಮೀಸಲಿರಿಸಬೇಕು,



ಅಡುಗೆ ಕೋಣೆ, ದೇವರ ಕೋಣೆ-ಯಂತೆ ಪುಸ್ತಕ ಕೋಣೆ ಆಗಬೇಕು ಅಂದಾಗ ಮಾತ್ರ ಪುಸ್ತಕ ಸಂಸ್ಕೃತಿ ಬೆಳೆಯಲು ಸಾಧ್ಯವಾಗುತ್ತದೆ ಎಂದು ಹೇಳಿದರು, ಮನೆಗೊಂದು ಗ್ರಂಥಾಲಯ ಜಿಲ್ಲಾ ಜಾಗೃತ ಸಮಿತಿ ಸಂಚಾಲಕ ಪ್ರಕಾಶ ಅಂಗಡಿ ಕನ್ನಳ್ಳಿ ಮಾತನಾಡಿ ಸುರಪುರ ತಾಲೂಕಿನ ಒಟ್ಟು 15 ಮನೆಗಳಲ್ಲಿ ಮನೆಗೊಂದು ಗ್ರಂಥಾಲಯಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಶ್ರೀಮಠದಲ್ಲಿಯೂ ಕೂಡ ಗ್ರಂಥಾಲಯ ಪ್ರಾರಂಭವಾಗಿ ಅತ್ಯಂತ ಅರ್ಥಪೂರ್ಣವಾಗಿ ಉದ್ಘಾಟನೆಯಾಗಿದೆ, ಬರುವ ದಿನಗಳಲ್ಲಿ ಸುರಪುರದ ಶಿಕ್ಷಕರು, ಜನಪ್ರತಿನಿಧಿಗಳು, ಪತ್ರಕರ್ತರು ಹಾಗೂ ಗಣ್ಯರ ನಿವಾಸಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸುವ ಯೋಚನೆ ಹೊಂದಿದ್ದೇವೆ ಎಂದು ಹೇಳಿದರು, ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಸುರೇಶ ಸಜ್ಜನ ಮಾತನಾಡಿ ಮಠದ ಪೂಜ್ಯರು ಸಾವಿರಾರು ಪುಸ್ತಕಗಳನ್ನ ಸಂಗ್ರಹಿಸುವ ಮೂಲಕ ಮಠದ ಆವರಣದಲ್ಲಿಯೂ ಪುಸ್ತಕಾಲಯವನ್ನು ಪ್ರಾರಂಭಿಸುವುದು ಇತರರಿಗೂ ಪ್ರೇರಣೆಯಾಗಿದೆ ಎಂದು ಹೇಳಿದರು, ಜಿಲ್ಲಾ ಗ್ರಂಥಾಲಯ ಸಮಿತಿ ಸದಸ್ಯ ಕನಕಪ್ಪ ವಾಗಣಗೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಶರಣಬಸಪ್ಪ ಯಾಳವಾರ, ಪ್ರಮುಖರಾದ ಶರಣಯ್ಯ ಸ್ವಾಮಿ ಮಠಪತಿ, ಸಿದ್ದಲಿಂಗಯ್ಯ ಸ್ವಾಮಿ ಕಡ್ಲೆಪ್ಪಮಠ ಮಲ್ಲಿಕಾರ್ಜುನ ಜಾಲಹಳ್ಳಿ, ಶರಣಪ್ಪ ಹಳ್ಳದ, ಶಿವಶರಣಬಸವ ಪುರಾಣಿಕಮಠ, ಸಜ್ಜನಕುಮಾರ್ ಕಲ್ಯಾಣಶೆಟ್ಟಿ, ಶ್ರೀಶೈಲ ನಿಂಬಾಳ, ಎಚ್.ರಾಠೋಡ್, ವೆಂಕಟೇಶ ಪಾಟೀಲ, ಮಹಾಂತೇಶ ಗೋನಾಲ , ಜಾವಿದ್ ಹುಸೇನ್ ಹವಲ್ದಾರ್, ಶ್ರೀಶೈಲ್ ಯಂಕಂಚಿ, ರಾಘವೇಂದ್ರ ಭಕ್ರಿ, ಮಹೇಶ ಹಳ್ಳದ, ಲಂಕೇಶ್ ದೇವತಕಲ್, ಭೀಮಣ್ಣದೊರೆ, ಸೇರಿದಂತೆ ಇತರರು ಪಾಲ್ಗೊಂಡಿದ್ದರು, ಕಾರ್ಯಕ್ರಮವನ್ನು ದೇವು ಹೆಬ್ಬಾಳ ನಿರೂಪಿಸಿ ವಂದಿಸಿದರು.

# ನಾರಿಶಕ್ತಿ ನಾಯಕತ್ವ ನಿರಾಕರಿಸಿದ ಕಾಂಗ್ರೆಸ್: ಸಾಹುಕಾರ ಆಕ್ರೋಶ

- ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.



ಭಾರತದ ನಾರಿಶಕ್ತಿ ಪ್ರಜಾಪ್ರಭುತ್ವದ ನಾಯಕತ್ವವಹಿಸುವುದನ್ನು ತಡೆಯುವ ಮೂಲಕ ಕಾಂಗ್ರೆಸ್ ಪಕ್ಷ ಮತ್ತೊಮ್ಮೆ ದೇಶಕ್ಕೆ ದ್ರೋಹ ಬಗೆದಿರುವುದಲ್ಲೇ ಇತಿಹಾಸವನ್ನು ಮರುಕಳಿಸುವಂತೆ ಮಾಡಿದೆ ಎಂದು ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಶ್ರೀಧರ ಸಾಹುಕಾರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ದೇಶದ ಆಡಳಿತ ಹಾಗೂ ಶಾಸನ ರಚನಾ ಸಭೆಗಳಲ್ಲಿ ಮಹಿಳೆಯರಿಗೆ ಶೇ. 33 ರಷ್ಟು ಮೀಸಲಾತಿ ಕಲ್ಪಿಸುವ 'ನಾರಿ ಶಕ್ತಿ ವಂದನಾ' ಐತಿಹಾಸಿಕ ಮಸೂದೆಯನ್ನು ಕಾಂಗ್ರೆಸ್ ನೇತೃತ್ವದ ಇಂಡಿ ಮೈತ್ರಿಕೂಟ ಸೋಲಿಸಿದೆ. ದೇಶ ಈ ದಿನವನ್ನೆಂದೂ ಮರೆಯದು. ಭವ್ಯ ಭಾರತದ ಇತಿಹಾಸಕ್ಕೆ ಇದೊಂದು ಕರಾಳ ದಿನವಾಗಿ ಉಳಿಯಲಿದೆ. ಮಹಿಳೆಯರ ಉನ್ನತಿಗೆ ಅಡ್ಡಗಾಲು ಹಾಕಿದ ವಿಪಕ್ಷಗಳನ್ನು ದೇಶದ 70 ಕೋಟಿ ನಾರಿಶಕ್ತಿ ಎಂದಿಗೂ ಕ್ಷಮಿಸದು. ನಾರಿ ಶಕ್ತಿಯ ಸಬಲೀಕರಣಕ್ಕೆ ಬಿಜೆಪಿಯ ದೃಢ ಸಂಕಲ್ಪ ಒಂದೆಡೆಯಾದರೆ, ಮಹಿಳಾ ಮೀಸಲಾತಿ ಮಸೂದೆಗೆ ತಡೆಯೊಡ್ಡುವ ಹಾಗೂ ಕಾಂಗ್ರೆಸ್ ನೇತೃತ್ವದ ಇಂಡಿ ಮೈತ್ರಿಕೂಟದ ವಿರೋಧ ಪಕ್ಷಗಳ ರಾಜಕೀಯ ಮತ್ತೊಂದೆಡೆಯಾಗಿದೆ. ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಜಿ ಅವರು ಯಾರ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾರೋ, ಆ 'ನಾರಿ ಶಕ್ತಿ'ಯ ಮುಂದೆ ಇಂದು ಕಾಂಗ್ರೆಸ್ ಮತ್ತು ಅದರ ಮೈತ್ರಿಕೂಟದ ಮಹಿಳಾ ವಿರೋಧಿ ಧೋರಣೆಯ ಮುಖವಾಡ ಬಯಲಾಗಿದೆ. ಈ ಮೂಲಕ ಹೆಣ್ಣುಮಕ್ಕಳ ಭವಿಷ್ಯದ ಪರವಾಗಿ ನಿಂತವರು ಯಾರು ಮತ್ತು ತಮ್ಮ ಸ್ವಂತ ರಾಜಕೀಯ ಲಾಭಕ್ಕಾಗಿ ಮಹಿಳೆಯರ ಬೆನ್ನಿಗೆ ಚೂರಿ ಹಾಕಿದವರು ಯಾರು ಎಂಬುದನ್ನು ಇಡೀ ದೇಶವೇ ಗಮನಿಸುತ್ತಿದೆ.

# ಪ್ರತ್ಯೇಕ ಮಹಿಳಾ ಮೀಸಲಾತಿ ಮಸೂದೆ ತನ್ನಿ : ಸಂಸದ ಸಾಗರ ಖಂಡ್ರೆ ಆಗ್ರಹ



- ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಕೇಂದ್ರಸರಕಾರ ತಂದದ್ದು ಮಹಿಳಾ ಮೀಸಲಾತಿ ಮಸೂದೆ ಅಲ್ಲ, ಅದು ಕ್ಷೇತ್ರ ಮರುಹಂಚಿಕೆ (ಡಿಲಿಮಿಟೇಶನ್) ಮಸೂದೆ ಭಾಲ್ಕಿ, ಕೇಂದ್ರಸರಕಾರ ಮಂಡಿಸಿದ ಸಂವಿಧಾನ ತಿದ್ದುಪಡಿ ಮಸೂದೆ ವಿರೋಧ ಪಕ್ಷಗಳ ಇಂಡಿಯಾ ಮೈತ್ರಿ ಈ ಮಸೂದೆಯನ್ನು ತಿರಸ್ಕರಿಸಿದೆ ಎಂದು ಸಂಸದ ಸಾಗರ ಖಂಡ್ರೆ ತಿಳಿಸಿದ್ದಾರೆ. ಮಹಿಳಾ ಮೀಸಲಾತಿಯ ಹೆಸರಿನಲ್ಲಿ ಸರಕಾರ ತನ್ನ ರಾಜಕೀಯ ಅಜೆಂಡಾದ ಭಾಗವಾಗಿ ಕ್ಷೇತ್ರ ಮರುಹಂಚಿಕೆ (ಡಿಲಿಮಿಟೇಶನ್) ಮಸೂದೆಯನ್ನು ತರಲು ಪ್ರಯತ್ನಿಸಿದೆ ಎಂದು ಅವರು ಆರೋಪಿಸಿದ್ದಾರೆ. ಈ ಮಸೂದೆ ನಿಜವಾಗಿ ಮಹಿಳಾ ಮೀಸಲಾತಿಗೆ ಸಂಬಂಧಿಸಿದದ್ದಲ್ಲ, ಕ್ಷೇತ್ರ ಮರುಹಂಚಿಕೆಗೆ ಸಂಬಂಧಿಸಿದದ್ದಾಗಿದೆ ಎಂದು ಅವರು ಸ್ಪಷ್ಟಪಡಿಸಿದರು. ಕ್ಷೇತ್ರ ಮರುಹಂಚಿಕೆಯ ಮೂಲಕ ವಿಶೇಷವಾಗಿ ದಕ್ಷಿಣ ರಾಜ್ಯಗಳಿಗೆ ಅನ್ಯಾಯವಾಗುವ ಸಾಧ್ಯತೆ ಇದೆ. ಇದಲ್ಲದೆ, ಕೇಂದ್ರ ಸರಕಾರ ತನ್ನ ಇಚ್ಛೆಯಂತೆ ಕ್ಷೇತ್ರಗಳ ಗಡಿಗಳನ್ನು ಮರುರಚನೆ ಮಾಡುವ ಮೂಲಕ ರಾಜಕೀಯ ಹಾಗೂ ಚುನಾವಣಾ ಲಾಭ ಪಡೆಯುವ ಉದ್ದೇಶ ಹೊಂದಿದೆ.ಇಂತಹ ಮರು ರಚನೆ ಕ್ರಮಗಳು ಈಗಾಗಲೇ ಅಸ್ಸಾಂ ಮತ್ತು ಜಮ್ಮು-ಕಾಶ್ಮೀರ ರಾಜ್ಯಗಳಲ್ಲಿಯೂ ಕಂಡುಬಂದಿವೆ. ಈ ಕಾರಣದಿಂದಲೇ ವಿರೋಧ ಪಕ್ಷಗಳ ಇಂಡಿಂ-ಯಾ ಮೈತ್ರಿಯು ಈ ಮಸೂದೆಯನ್ನು ಬೆಂಬಲಿಸಿಲ್ಲ ಎಂದು ತಿಳಿಸಿದ್ದಾರೆ.ಸರಕಾರ ನಿಜವಾಗಿಯೂ ಮಹಿಳಾ ಮೀಸಲಾತಿಯನ್ನು ಜಾರಿಗೆ ತರಲು ಬಯಸಿದರೆ, ಅದನ್ನು ಕ್ಷೇತ್ರ ಮರು ಹಂಚಿಕೆಯಿಂದ ಸಂಪೂರ್ಣವಾಗಿ ಬೇರ್ಪಡಿಸಿ, ಪ್ರತ್ಯೇಕ ಮಹಿಳಾ ಮೀಸಲಾತಿ ಮಸೂದೆಯನ್ನು ತರಬೇಕು ಎಂದು ಒತ್ತಾಯಿಸಿದ್ದಾರೆ. ಇಂತಹ ಮಸೂದೆಗೆ ಎಲ್ಲ ವಿರೋಧ ಪಕ್ಷಗಳಿಂದ ಏಕಮತ ಬೆಂಬಲ ದೊರೆಯಲಿದ್ದು, ಅದು ಸಂಸತ್ತಿನಲ್ಲಿ ಸುಗಮವಾಗಿ ಅಂಗೀಕರಿಸಲಾಗುತ್ತದೆ ಎಂದು ಪ್ರಕಟಣೆ ಮೂಲಕ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

# ಮುಂಬೈ ಬೆಂಗಳೂರು ವಂದೇಭಾರತ ರೈಲು ತ್ವರಿತ ಆರಂಭಿಸಿ: ಭೀಮುನಾಯಕ

ಮಲ್ಲಮ್ಮನುಡಿ ವಾರ್ತೆ ಯಾದಗಿರಿ

ಬೆಂಗಳೂರು ಮುಂಬೈ ವಂದೇ ಭಾರತ್ ಶಯನಯಾತ್ರೆ(ಸ್ಲೀಪರ್) ರೈಲು ಶೀಘ್ರ ಆರಂಭವಾಗಲಿದೆ ಎಂದು ಹೇಳಿಕೆ ನೀಡಿದ್ದರೂ ಇದುವರೆಗೆ ರೈಲು ಓಡಾಡದ ಆರಂಭವಾಗಿಲ್ಲದಿರುವುದು ಅನುಮಾನಗಳಿಗೆಡೆಮಾಡಿಕೊಡುತ್ತಿದ್ದು, ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಟಿಎನ್ ಭೀಮನಾಯಕ್ ಆಗ್ರಹಿಸಿದ್ದಾರೆ. ಈ ಕುರಿತು ಹೇಳಿಕೆ ನೀಡಿರುವ ಅವರು, ಬೆಂಗಳೂರು ಮುಂಬೈ ವಂದೇ ಭಾರತ್ ಶಯನ ಪ್ರವಾಸ ವ್ಯವಸ್ಥೆಯ ರೈಲು ಗಂಟೆಗೆ 160 ಕಿಲೋಮೀಟರ್ ವೇಗದಲ್ಲಿ ಸಂಚರಿಸುತ್ತದೆ ಎಂದು ಹೇಳಲಾಗಿದ್ದು, ಯಾದಗಿರಿ-ಬೆಂಗಳೂರು ಮಧ್ಯೆ ಕೇವಲ ಐದುವರೆ ತಾಸು ತೆಗೆದುಕೊಳ್ಳಲಿದ್ದು, ಯಾದಗಿರಯಿಂದ ಮುಂಬೈಗೆ ಕೇವಲ ಏಳು ತಾಸಿನಲ್ಲಿ ತಲುಪಲಿದೆ. ಈ ರೈಲು ಆರಂಭವಾದಲ್ಲಿ ನಮ್ಮ ಭಾಗದ ಆರ್ಥಿಕತೆಗೆ ವೇಗ ಸಿಗಲಿದ್ದು, ವೇಗದ ಸಾರಿಗೆಯಲ್ಲಿ ದೊಡ್ಡ ಒಂದು ಬಲ ನೀಡಲಿದೆ ಇಂಥ ರೈಲನ್ನ ತಕ್ಷಣ ಆರಂಭಿಸಬೇಕು ಇದನ್ನು ಬಿಟ್ಟು ಹುಬ್ಬಳ್ಳಿ ಬೆಳಗಾವಿ ಮಾರ್ಗದಲ್ಲಿ ರೈಲು ಓಡಿಸಿದರೆ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ, ಬೇಕಿದ್ದರೆ ಆ ಮಾರ್ಗವಾಗಿ ಒಂದು ರೈಲು ಹಾಕಿಕೊಳ್ಳಲಿ ಆದರೆ ಕಲ್ಯಾಣ ಕರ್ನಾಟಕದ



ನಮ್ಮ ಭಾಗಕ್ಕೆ ಲಭ್ಯವಾಗಬೇಕಿರುವ ರೈಲು ಯಾವುದೇ ಕಾರಣಕ್ಕೂ ವಿಳಂಬ ಮಾಡದೇ ತ್ವರಿತವಾಗಿ ಆರಂಭಿಸಬೇಕುಎಂದು ಒತ್ತಾಯಿಸಿದ್ದಾರೆ. ಈಗಾಗಲೇ ಕೇಂದ್ರಸಚಿವ ಪ್ರಹ್ಲಾದ್ ಜೋಶಿ ಅವರು ಹೇಳಿಕೆ ನೀಡಿ ಈಗ ಒಂದು ವಾರ ಆಗುತ್ತಾ ಬಂದಿದ್ದರು ಇದುವರೆಗೂ ಅದರ ವೇಳಾಪಟ್ಟಿ ಬಂದಿರುವುದಿಲ್ಲ ಈ ಹಿಂದೆ ನಮ್ಮ ಭಾಗಕ್ಕೆ ಸಿಗಬೇಕಾಗಿದ್ದ ಐಐಐಟಿ ಧಾರವಾಡಕ್ಕೆ ತೆಗೆದು-ಕೊಂಡು ಹೋಗಿದ್ದಂತೆ ಇದಕ್ಕೂ ಕೈ ಹಾಕಿದರೆ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.ಹೀಗಾಗುವ ಮೊದಲು ನಮ್ಮ ಭಾಗದ ರಾಯಚೂರು ಮತ್ತು ಕಲ್ಬುರ್ಗಿ ಸಂಸದರು ಎಚ್ಚೆತ್ತುಕೊಂಡು ಸರ್ಕಾರದ ಮೇಲೆ ಒತ್ತಡ ಹೇರುವ ಕೆಲಸ ಮಾಡಬೇಕು ರೈಲು ಓಡಾಟ ಆರಂಭಿಸುವವರೆಗೆ ವಿರಮಿಸಬಾರದು ಎಂದು ಅವರು ಆಗ್ರಹಿಸಿದ್ದಾರೆ.

# ಶೆಟಿಗೇರದ ಶ್ರೀ ಸಿದ್ಧಾರೂಢ ಮಠದ ಮಹಾರಥೋತ್ಸವ

- ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಯಾದಗಿರಿ ತಾಲೂಕಿನ ಶೆಟ್ಟಿಗೇರಾ ಗ್ರಾಮದಲ್ಲಿ ಶ್ರೀ ಸಿದ್ಧಾರೂಢ ಮಠದ ಪ್ರತಿವರ್ಷದಂತೆ ಈ ವರ್ಷ ಕೂಡ ಬಹಳ ವಿಜೃಂಭಣೆಯಿಂದ ನಡೆಯುತ್ತದೆ, ಇಂದು ಮುಂಜಾನೆ ಪರಮಪೂಜ್ಯ ಲಿಂಗೈಕ್ಯ ಶ್ರೀ ಅದ್ವೈತಾನಂದ ಮಹಾಸ್ವಾಮಿಗಳ ಭಾವಚಿತ್ರವನ್ನು ಗ್ರಾಮದ ಪ್ರಮುಖ ಹಾದಿಯಲ್ಲಿ ಭವ್ಯ ಮೆರವಣಿಗೆಯನ್ನು ಶೆಟ್ಟಿಗೇರಾ ಗ್ರಾಮದ ಶ್ರೀ ಆಂಜನೇಯ ದೇವಸ್ಥಾನ ದಿಂದ ಪ್ರಾರಂಭಗೊಂಡು ಸಕಲ ಡೊಳ್ಳು ಕುಣಿತ ಮತ್ತು ಕಳಸದ ಮೆರವಣಿಯನ್ನು ಶ್ರೀ ಮಠದವರೆಗೂ ನಡೆಯುತ್ತದೆ. ನಂತರ ಶ್ರೀ ಸಿದ್ಧಾರೂಢ ಮಠದ



ಕಿರಿಯ ಸ್ವಾಮಿ ಅಭಿಷೇಕ್ ಸ್ವಾಮಿಗಳ ನೇತೃತ್ವದಲ್ಲಿ ಸಾಯಂಕಾಲ 5:00 ಗಂಟೆಗೆ ಶ್ರೀ ಸಿದ್ಧಾರೂಢ ಅಜ್ಜನವರ ಮಹಾ ರಥೋತ್ಸವ ಜರಗುವುದು, ಆದ್ದರಿಂದ ಸುತ್ತಮುತ್ತಲಿನ ಗ್ರಾಮಸ್ಥರು ಹಾಗೂ ಶ್ರೀಮಠದ ಸದ್ಭಕ್ತರು ಆಗಮಿಸಿ ಶ್ರೀ ಸಿದ್ಧಾರೂಢರ ಆಶೀರ್ವಾದ ಪಡೆಯಬೇಕು ಎಂದು ಶ್ರೀ ಮಠದ ಅಧ್ಯಕ್ಷರಾದ ಮಹಾದೇವಮ್ಮ ಮುಕಪ್ಪನೋರ್ ರವರು ಪ್ರಕಟಣೆಗೆ ತಿಳಿಸಿದ್ದಾರೆ.

# ಪುಸ್ತಕ ಸಂಸ್ಕೃತಿ ಬೆಳೆಸಬೇಕು: ಮಾನಸ

ಮಲ್ಲಮ್ಮನುಡಿ ವಾರ್ತೆ ಯಾದಗಿರಿ.

ಪುಸ್ತಕಗಳನ್ನ ಕೊಂಡು ಓದುವ ಸಂಸ್ಕೃತಿ ಬೆಳೆಯಬೇಕು ಮತ್ತು ಬೆಳೆಸಬೇಕು ಜೊತೆಗೆ ಇಂದಿನ ವಿದ್ಯಾರ್ಥಿಗಳು ಮತ್ತು ಯುವ ಜನರು ಸಾಹಿತ್ತಿಕ ಪುಸ್ತಕಗಳನ್ನ ಅಭ್ಯಾಶಿಸಬೇಕು ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ಹೇಳಿದರು, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರ ಮನೆಗೊಂದು ಗ್ರಂಥಾಲಯ ಜಿಲ್ಲಾ ಜಾಗೃತ ಸಮಿತಿ ಯಾದಗಿರಿ ವತಿಯಿಂದ ರಾಜನಕೋಳೂರು ಗ್ರಾಮದ ಹಿರಿಯ ಕಲಾವಿದರಾದ ಆಮಯ್ಯಸ್ವಾಮಿ ಅವರ ನಿವಾಸದಲ್ಲಿ ನಡೆದ ಗ್ರಂಥಾಲಯ ಅನುಷ್ಠಾನ



ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಪ್ರತಿಯೊಬ್ಬರು ಮನೆಯಲ್ಲಿ ಗ್ರಂಥಾಲಯಕ್ಕೆ ಒಂದು ಕೋಣೆಯನ್ನ ಮೀಸಲಿರಿಸಬೇಕು, ಅಡುಗೆ ಕೋಣೆ, ದೇವರ ಕೋಣೆಯಂತೆ ಪುಸ್ತಕ ಕೋಣೆ ಆಗಬೇಕು ಅಂದಾಗ ಮಾತ್ರ ಪುಸ್ತಕ ಸಂಸ್ಕೃತಿ ಬೆಳೆಯಲು ಸಾಧ್ಯವಾಗುತ್ತದೆ ಎಂದು ಡಾ. ಮಾನಸ ಹೇಳಿದರು, ಮನೆಗೊಂದು ಗ್ರಂಥಾಲಯ ಜಿಲ್ಲಾ ಜಾಗೃತ ಸಮಿತಿ ಸಂಚಾಲಕ ಪ್ರಕಾಶ ಅಂಗಡಿ ಕನ್ನಳ್ಳಿ ಮಾತನಾಡಿ ಹುಣಸಿಗಿ ತಾಲೂಕಿನ ಒಟ್ಟು 15 ಮನೆಗಳಲ್ಲಿ ಮನೆಗೊಂದು ಗ್ರಂಥಾಲಯಗಳನ್ನು ಅನುಷ್ಠಾನಗೊಳಿಸುತ್ತಿದ್ದು, ರಾಜನಕೋಳೂರಿನ ಆಮಯ್ಯ ಸ್ವಾಮಿಯವರ ನಿವಾಸದಲ್ಲಿ ಅತ್ಯಂತ ಅರ್ಥಪೂರ್ಣವಾಗಿ ಉದ್ಘಾಟನೆಯಾಗಿದೆ ಬರುವ ದಿನಗಳಲ್ಲಿ ಈ ಗ್ರಾಮದ ಶಿಕ್ಷಕರು, ಜನಪ್ರತಿನಿಧಿಗಳು ಗಣ್ಯರ ನಿವಾಸಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸುವ ಯೋಚನೆ ಹೊಂದಿದ್ದೇವೆ ಎಂದು ಹೇಳಿದರು, ಜಿಲ್ಲಾ ಗ್ರಂಥಾಲಯ ಸಮಿತಿ ಸದಸ್ಯ ನೀಲಕಂಠ ಹೊನಕಲ್ ಹುಣಸಗಿ ಪ್ರಾಸ್ತಾವಿಕವಾಗಿ ಮಾತನಾಡಿದರು, ಪ್ರಮುಖರಾದ ಕೆ.ಎಂ.ಎಫ್ ಮಾಜಿ ನಿರ್ದೇಶಕರಾದ ಸಂಗನಗೌಡ ಮಾಗನೂರ, ಮುಖಂಡರಾದ ಬಿ.ಸಿ.ಪಾಟೀಲ, ಮಲ್ಲಿಕಾರ್ಜುನಗೌಡ ಮುರಾಳ, ತಿರುಪತಿ ಸಾಹುಕಾರ್ ವಡಿಗೇರಿ, ವಂದೇ ಮಾತರಂ ಸ್ವಯಂ ಸೇವಾ ಸಂಸ್ಥೆಯ ಅಧ್ಯಕ್ಷರಾದ ಸೋಮನಗೌಡ ಗುಳಬಾಳ, ಶ್ರೀಶೈಲ್ ಬಬಲೇಶ್ವರ ಸಾಹುಕಾರ್, ಹಾಗೂ ಶ್ರೀ ಮತಿ ಉಮಾದೇವಿ ಉಳ್ಳೇಸೂರ, ಶ್ರೀ ಮತಿ ಸುವರ್ಣ ಹಿರೇಮಠ, ಶ್ರೀ ಮತಿ ಸುಮಾ ಬಬಲೇಶ್ವರ, ಸೇರಿದಂತೆ ಇತರರಿದ್ದರು, ಆಮಲಿಂಗೇಶ್ವರ ಉಚಿತ ಸಂಗೀತ ಪಾಠ ಶಾಲೆಯ ಮಕ್ಕಳು ಪ್ರಾರ್ಥಿಸಿದರು, ಸಂಗನಗೌಡ ಧನರಡ್ಡಿ ನಿರೂಪಿಸಿದರು ಲಂಕೇಶ ದೇವತ್ಕಲ್ ಸ್ವಾಗತಿಸಿ ವಂದಿಸಿದರು.

# ಜನಗಣತಿ ಜೋರು ಮನೆ ಮನೆಗೆ ತೆರಳಿ ಮಾಹಿತಿ ಸಂಗ್ರಹ



ಮಲ್ಲಮ್ಮನುಡಿ ವಾರ್ತೆ ಗುರುಮಠಕಲ್

ಗುರುಮಠಕಲ್: ಪಟ್ಟಣದಲ್ಲಿ ಜನಗಣತಿ ಕಾರ್ಯ ಭರದಿಂದ ನಡೆಯುತ್ತಿದ್ದು, ಗಣತಿದಾರರು ಮನೆ ಮನೆಗೆ ತೆರಳಿ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಏಪ್ರಿಲ್ 16ರಿಂದ ಆರಂಭವಾದ ಈ ಜನಗಣತಿ ಕಾರ್ಯ ಮೇ 15ರವರೆಗೆ ನಡೆಯಲಿದ್ದು, ಮೊದಲ ಹಂತದಲ್ಲಿ ಮನೆಪಟ್ಟಿ ಹಾಗೂ ಕುಟುಂಬದ ಮೂಲಭೂತ ವಿವರಗಳನ್ನು ದಾಖಲಿಸಲಾಗುತ್ತಿದೆ. ಗುರುಮಠಕಲ್ ಪಟ್ಟಣಕ್ಕೆ ಒಟ್ಟು 39 ಜನ ಗಣತಿದಾರರು ಹಾಗೂ 7 ಜನ ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದೆ. ಪಟ್ಟಣ ಭಾಗದ ಚಾರ್ಜ್ ಆಫಿಸರ್ ಆಗಿ ಶರಣಪ್ಪ ಮಾಡಿವಾಳ ಅವರು ಕಾರ್ಯನಿರ್ವಹಿಸುತ್ತಿದ್ದು, ಮುಖ್ಯಾಧಿಕಾರಿಗಳ ಮಾರ್ಗದರ್ಶನದಲ್ಲಿ ಜನಗಣತಿ ಕಾರ್ಯಕ್ರಮ ನಡೆಯುತ್ತಿದೆ.ಇನ್ನು ಗುರುಮಠಕಲ್ ಗ್ರಾಮೀಣ ಭಾಗಕ್ಕೆ ತಹಸೀಲ್ದಾರ್ ಚನ್ನಮಲ್ಲಪ್ಪ ಘಂಟಿ ಅವರನ್ನು ಚಾರ್ಜ್ ಆಫಿಸರ್ ಕಾರ್ಯ ನಿರ್ವಹಿಸುತ್ತಿದ್ದಾರೆ, ಗ್ರಾಮೀಣ ಪ್ರದೇಶಗಳಲ್ಲಿಯೂ ಗಣತಿದಾರರು ಮನೆ ಮನೆಗೆ ತೆರಳಿ ಮಾಹಿತಿ ಪಡೆಯುತ್ತಿದ್ದಾರೆ.

ಪ್ರತಿ ಹತ್ತು ವರ್ಷಗಳಿಗೊಮ್ಮೆ ನಡೆಯುವ ಜನಗಣತಿ ಕಾರ್ಯ ಕಳೆದ ಬಾರಿ ಕೋವಿಡ್ ಕಾರಣದಿಂದ ವಿಳಂಬಗೊಂಡಿದ್ದು, 2011ರ ನಂತರ ಇದೀಗ ಮತ್ತೆ ನಡೆಯುತ್ತಿದೆ. ಮೊದಲ ಹಂತದಲ್ಲಿ ಮನೆಗಳ ಸಂಖ್ಯೆ, ಕುಟುಂಬ ಸದಸ್ಯರ ವಿವರ, ವಾಸಸ್ಥಳದ ಮಾಹಿತಿ ಸೇರಿದಂತೆ ಹಲವು ಮೂಲಭೂತ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತಿದೆ. ಸಾರ್ವಜನಿಕರು ಸರಿಯಾದ ಮತ್ತು ಸಂಪೂರ್ಣ ಮಾಹಿತಿಯನ್ನು ನೀಡಿ ಗಣತಿದಾರರಿಗೆ ಸಹಕರಿಸಬೇಕು.

**ಬಾಲಪ್ಪ ಸಿರಿಗೆಂ,**
**ಗುರುಮಠಕಲ್ ಪಟ್ಟಣದ ಜನಗಣತಿ ಮೇಲ್ವಿಚಾರಕರು.**

# ಹಾವು ಕಂಡರೆ ಕೊಲ್ಲದಿರಿ ಉರಗ ರಕ್ಷಕ ಅಂಜಪ್ಪ



- ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಪಟ್ಟಣದ ಹೊರವಲಯದಲ್ಲಿರುವ ಐಟಿಐ ಕಾಲೇಜಿನ ತರಗತಿಗೆ ಭಾರಿ ಗಾತ್ರದ ನಾಗರ ಹಾವು ಪ್ರವೇಶಿಸಿದ ಘಟನೆ ವಿದ್ಯಾರ್ಥಿಗಳಲ್ಲಿ ಆತಂಕ ಮೂಡಿಸಿತು. ಮಾಹಿತಿ ತಿಳಿದ ಕೂಡಲೇ ಸ್ಥಳಕ್ಕೆ ಧಾವಿಸಿದ ಸ್ಥಳೀಯ ನಿವಾಸಿ ಅಂಜಪ್ಪ, ಯಾವುದೇ ಆತಂಕವಿಲ್ಲದೆ ಹಾವನ್ನು ಸುರಕ್ಷಿತವಾಗಿ ಹಿಡಿದು ಅರಣ್ಯ ಪ್ರದೇಶದಲ್ಲಿ ಬಿಟ್ಟಿದ್ದಾರೆ. ಉರಗ ಕಂಡಲ್ಲಿ ಕೊಲ್ಲದಿರಿ ಅವುಗಳ ರಕ್ಷಣೆ ಅಗತ್ಯ ಎಂದು ಹೇಳಿದರು. ಗುರುಮಠಕಲ್ ಪಟ್ಟಣದ ಯುವಕ ಅಂಜಪ್ಪ ಕಳೆದ ನಾಲ್ಕು ವರ್ಷಗಳಿಂದ ಹಾವುಗಳನ್ನು ರಕ್ಷಿಸಿ ಕಾಡಿಗೆ ಬಿಡುವ ಮಾನವೀಯ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದು, ಸಾರ್ವಜನಿಕರಿಂದ ಪ್ರಶಂಸೆಗೆ ಪಾತ್ರರಾಗಿದ್ದಾರೆ.ಸಾಮಾನ್ಯವಾಗಿ ಹಾವು ಕಂಡರೆ ಭಯಪಡುವವರೇ ಹೆಚ್ಚು. ಆದರೆ ಇದಕ್ಕೆ ಅಪವಾದವೆಂಬಂತೆ ಅಂಜಪ್ಪ ಯಾವುದೇ ಭಯವಿಲ್ಲದೆ ನಾಗರ ಹಾವು, ಕೇರೆ ಹಾವು, ಹಸಿರು ಹಾವು, ಕೊಳಕು ಮಂಡಲ, ನೀರ ಹಾವು ಸೇರಿದಂತೆ ವಿವಿಧ ಜಾತಿಯ ಮೂರು ಸಾವಿರಕ್ಕೂ ಹೆಚ್ಚು ಹಾವುಗಳನ್ನು ಹಿಡಿದು ಸುರಕ್ಷಿತ ಸ್ಥಳಕ್ಕೆ ಬಿಡುವ ಮೂಲಕ ಗಮನ ಸೆಳೆದಿದ್ದಾರೆ.

ಹಾವುಗಳಿಗೆ ಯಾವುದೇ ರೀತಿಯ ಗಾಯವಾಗದಂತೆ ಪ್ಲಾಸ್ಟಿಕ್ ಚೀಲ ಅಥವಾ ಡಬ್ಬಗಳಲ್ಲಿ ಸುರಕ್ಷಿತವಾಗಿ ಇರಿಸಿ ನಂತರ ಕಾಡಿಗೆ ಬಿಡುತ್ತಾರೆ. ಹಾವುಗಳನ್ನು ಕೊಲ್ಲದೇ, ಅವುಗಳಿಗೂ ಬದುಕುವ ಹಕ್ಕು ಇದೆ ಎಂಬ ಸಂದೇಶವನ್ನು ಜನರಿಗೆ ನೀಡುತ್ತಿರುವುದು ಅವರ ಸೇವೆಯ ವಿಶೇಷವಾಗಿದೆ.ವಿಶೇಷ ಸಂದರ್ಶನದಲ್ಲಿ ಮಾತನಾಡಿದ ಅಂಜಪ್ಪ, "ಯಾ-ರೇ ಹಾವು ಬಂದಿದೆ ಎಂದು ಕರೆ ಮಾಡಿದರೂ ತಕ್ಷಣ ಸ್ಥಳಕ್ಕೆ ತೆರಳುತ್ತೇನೆ. ಹಾವನ್ನು ಹಿಡಿದು ಸುರಕ್ಷಿತವಾಗಿ ಊರಿನ ಹೊರವಲಯ ಅಥವಾ ಕಾಡಿನಲ್ಲಿ ಬಿಡುತ್ತೇನೆ. ಹಾವುಗಳನ್ನು ಸಾಯಿಸದೇ ರಕ್ಷಿಸುವ ಕೆಲಸ ಮಾಡುತ್ತಿರುವುದು ನನಗೆ ತುಂಬಾ ಖುಷಿ ಕೊಡುತ್ತದೆ," ಎಂದು ತಿಳಿಸಿದ್ದಾರೆ.

ಅಂಜಪ್ಪ ಅವರ ಈ ಸೇವೆಗೆ ನಾಗರಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದು, ನಿಮ್ಮ ಸೇವೆ ಹೀಗೆ ಮುಂದುವರೆಯಲಿ ಎಂದು ಗುರುಮಠಕಲ್ ಸುದ್ದಿ ಮುಖಾಂತರ ಆಶಿಸುವೆವು.

# ಒಂದು ಲಕ್ಷ ಮನೆಗಳಲ್ಲಿ ಗ್ರಂಥಾಲಯ ಸ್ಥಾಪಿಸುವ ಗುರಿ ಇದೆ: ಮಾನಸ

- ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಪುಸ್ತಕ ಸಂಸ್ಕೃತಿ ಉಳಿಸಿ ಬೆಳೆಸುವ ಜೊತೆಗೆ ಪುಸ್ತಕ ಓದುವ ಸದಾಭಿರುಚಿಯನ್ನ ಹೆಚ್ಚಿಸಲು ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ರಾಜ್ಯಾದ್ಯಂತ ಸಂಚಾರ ಮಾಡಿ ನಮ್ಮ ಅವಧಿಯಲ್ಲಿ ಒಂದು ಲಕ್ಷ ಮನೆಗಳಲ್ಲಿ ಗ್ರಂಥಾಲಯ ಸ್ಥಾಪಿಸುವ ಮಹತ್ವದ ಗುರಿ ಹೊಂದಲಾಗಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ಹೇಳಿದರು, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ಮನೆಗೊಂದು ಗ್ರಂಥಾಲಯ ಜಿಲ್ಲಾ ಜಾಗೃತ ಸಮಿತಿ ಯಾದಗಿರಿ ವತಿಯಿಂದ ಎಂದು ಸುರಪುರದ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶರಣಬಸಪ್ಪ ಯಾಳವಾರ ರವರ ನಿವಾಸದಲ್ಲಿ ಆಯೋಜಿಸಿದ ಮನೆಗೊಂದು ಗ್ರಂಥಾಲಯ ಅನುಷ್ಠಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಡಾ. ಮಾನಸ ಅವರು ಪುಸ್ತಕಗಳು ಸಹಕಾರಿಯಾಗುತ್ತದೆ, ಪುಸ್ತಕವಿಲ್ಲದ ಮನೆ ಆತ್ಮವಿಲ್ಲದ ದೇಹವಿದ್ದಂತೆ ಪ್ರತಿಯೊಂದು ಮನೆಯಲ್ಲೂ ಗ್ರಂಥಾಲಯಕ್ಕಾಗಿ ಒಂದು ಕೋಣೆಯನ್ನ ಮೀಸಲಿರಿಸಿ ಪುಸ್ತಕ ಸಂಗ್ರಹಿಸಬೇಕು ಆಗ ನಮ್ಮ ಮುಂದಿನ ಪೀಳಿಗೆ ಮೊಬೈಲ್ ಟಿವಿಗಳನ್ನು ಬಿಟ್ಟು ಪುಸ್ತಕ ಓದುವ ಕಡೆ ವಾಲುತ್ತಾರೆ ಎಂದು ಹೇಳಿದರು, ಮನೆಗೊಂದು ಗ್ರಂಥಾಲಯ ಜಾಗೃತ ಸಮಿತಿ ಜಿಲ್ಲಾ ಸಂಚಾಲಕ ಪ್ರಕಾಶ ಅಂಗಡಿ ಕನ್ನಳ್ಳಿ ಮಾತನಾಡಿ ಸುರಪುರ ತಾಲೂಕಿನಲ್ಲಿ ಅತಿ ಹೆಚ್ಚು ಜನ ಬರಹಗಾರರಿದ್ದು, ಹೆಚ್ಚು ಹೆಚ್ಚು ಪುಸ್ತಕಗಳು ಪ್ರಕಟಣೆಯಾಗಿವೆ ಜೊತೆಗೆ ಈ ಭಾಗದ ಎಲ್ಲಾ ಸಾಹಿತಿಗಳ ಮನೆಯಲ್ಲೂ ಕೂಡ ಗ್ರಂಥಾಲಯಗಳನ್ನು ಹಾಗೂ ಪುಸ್ತಕಗಳನ್ನು ನೋಡಲು ಸಾಧ್ಯವಾಗುತ್ತದೆ ಆ ದಿಶೆಯಲ್ಲಿ ಎಂದು ಸುರಪುರ ನಗರದ 15 ಮನೆಗಳಲ್ಲಿ ಗ್ರಂಥಾಲಯಗಳನ್ನು ಅನುಷ್ಠಾನಗೊಳಿಸುತ್ತಿದ್ದೇವೆ ಎಂದು ಹೇಳಿದರು, ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕೆ.ವೈ.ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕ ಸುರೇಶ ಸಜನ್, ಮಾತನಾಡಿ ನಮ್ಮ ಸಂಗಾತಿಗಳಿದ್ದಂತೆ ಹೆಚ್ಚು ಜ್ಞಾನ ಪಡೆಯುವ ಮೂಲಕ ಹೆಚ್ಚು ಮೌಲ್ಯಯುತ ವ್ಯಕ್ತಿಯಾಗಿ ಬದುಕಲು ಕನ್ನಡ ಪುಸ್ತಕ ಪ್ರಾಧಿಕಾರ ಒಂದು ಮಹತ್ವದ ಹೆಜ್ಜೆಯನ್ನು ಇರಿಸಿರುವುದು ಅತ್ಯಂತ ಸಂತಸದ ಸಂಧರ್ಭವಾಗಿದೆ ಮುಂದಿನ ದಿನಗಳಲ್ಲಿ ಪ್ರತಿಯೊಂದು ಮನೆಯಲ್ಲೂ ಕೂಡ ಒಂದೊಂದು ಗ್ರಂಥಾಲಯವನ್ನು ಪ್ರಾರಂಭಿಸಬೇಕು ಉತ್ತಮ ಗ್ರಂಥಾಲಯ ಪ್ರಾರಂಭಿಸಿದವರಿಗೆ ಪ್ರಾಧಿಕಾರದಿಂದ ಗೌರವಿಸಬೇಕು ಎಂದು ಸಲಹೆ ನೀಡಿದರು, ಇದೇ ಸಂದರ್ಭದಲ್ಲಿ ಜಾನಪದ ಶ್ರೀ ಪ್ರಶಸ್ತಿಗೆ ಭಾಜನರಾದ ಶ್ರೀ ಲಕ್ಷ್ಮಣ ಗುತ್ತೇದಾರ್ ಅವರನ್ನು ಕಾರ್ಯಕ್ರಮದಲ್ಲಿ ವಿಶೇಷವಾಗಿ ಸನ್ಮಾನಿಸಲಾಯಿತು, ಜಾಗೃತ ಸಮಿತಿಯ ಸದಸ್ಯ ಕನಕಪ್ಪ ವಾಗನಗೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು, ಕಾರ್ಯಕ್ರಮದ ವೇದಿಕೆ ಮೇಲೆ ಶರಣಯ್ಯ ಸ್ವಾಮಿ ಮಠಪತಿ , ಶರಣಬಸಪ್ಪ ಯಾಳವಾರ ಭಾಗವಹಿಸಿದ್ದರು, ಕಾರ್ಯಕ್ರಮವನ್ನು ದೇವು ಹೆಬ್ಬಾಳ ನಿರೂಪಿಸಿ ವಂದಿಸಿದರು, ಪ್ರಮುಖರಾದ ಮಲ್ಲಿಕಾರ್ಜುನ ಜಾಲಹಳ್ಳಿ, ಶರಣಪ್ಪ ಹಳ್ಳದ, ಶಿವಶರಣಬಸವ ಪುರಾಣಿಕಮಠ, ಸಜ್ಜನಕುಮಾರ್ ಕಲ್ಯಾಣಶೆಟ್ಟಿ, ಶ್ರೀಶೈಲ ನಿಂಬಾಳ, ಎಚ್.ರಾಠೋಡ್, ವೆಂಕಟೇಶ ಪಾಟೀಲ, ಮಹಾಂತೇಶ ಗೋನಾಲ , ಜಾವಿದ್ ಹುಸೇನ್ ಹವಲ್ದಾರ್, ಶ್ರೀಶೈಲ್ ಯಂಕಂಚಿ, ರಾಘವೇಂದ ಭಕ್ರಿ, ಮಹೇಶ ಹಳ್ಳದ, ಲಂಕೇಶ್ ದೇವತಕಲ್, ಭೀಮಣ್ಣದೊರೆ, ಸೇರಿದಂತೆ ಇತರರು ಪಾಲ್ಗೊಂಡಿದ್ದರು.



# ಯೋಗದಿಂದ ಉತ್ತಮ ಆರೋಗ್ಯ: ಅಲ್ಲಮಪ್ರಭು ಗುಡ್ಡಾ

## ಏಶಿಯಾ ಬುಕ್ ಆಫ್ ರೇಕಾಡನಲ್ಲಿ ಯೋಗ ಮಹೋತ್ಸವ



“ ಗುರುನಾನಕ್ ಗ್ರೂಪ್ ಆಫ್ ಇನ್ಸಿಟ್ಯೂಟ್ ಉಪಾಧ್ಯಕ್ಷರಾದ ಡಾ.ರೇಶ್ಮಾ ಕೌರ್ ಅವರು ಮಾತನಾಡಿ ಯೋಗವು ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸಲು ನೆರವಾಗುತ್ತದೆ ನಮಲ್ಲಿ ಕಾಣಿಸಿಕೊಳ್ಳುವ ಅನೇಕ ರೋಗಗಳಿಗೆ ಪರಿಹಾರವನ್ನೂ ಯೋಗ ಹಾಗೂ ಪ್ರಾಕೃತಿಕ ಚಿಕಿತ್ಸೆಯಿಂದ ಕಂಡುಕೊಳ್ಳಬಹುದು ಆಧುನಿಕ ಒತ್ತಡದ ಬದುಕಿನಲ್ಲಿ ಬಹುತೇಕರಿಗೆ ಜೀವನವೇ ಸಾಕು ಎಂಬ ಭಾವ ಮೂಡುತ್ತಿದೆ ಆದರೆ ಯೋಗ ಹಾಗೂ ಪ್ರಾಕೃತಿಕ ಚಿಕಿತ್ಸೆಯು ಈ ಎಲ್ಲ ಒತ್ತಡಗಳನ್ನು ತಡೆದು ಮನಸ್ಸನ್ನು ಪ್ರಶಾಂತಗೊಳಿಸುತ್ತದೆ ಈ ನಿಟ್ಟಿನಲ್ಲಿ ನಮ್ಮ ಶಿಕ್ಷಣ ಸಂಸ್ಥೆಯು ಇದಕ್ಕೆ ಬಹಳ ಮಹತ್ವ ನೀಡುವುದು ಜೊತೆಗೆ ಈ ತರಹದ ಸಮಾಜಮುಖಿ ಕೆಲಸಗಳಿಗೆ ಸದಾಕಾಲ ಬೆನ್ನೆಲುಬಾಗಿ ನಿಲ್ಲುವುದರ ಜೊತೆಗೆ ಕ್ಯೂಬಿಕ್ಸ್ ಸ್ಪರ್ದೆಯಲ್ಲಿ ಗಿನ್ನಿಸ್ ರೇಕಾರ್ಡ ದಾಖಲೆಯನ್ನು ತನ್ನದಾಗಿಸಿಕೊಂಡಿದೆ ಈಗ ಭವ್ಯವಾದ ಯೋಗ ಮಹೋತ್ಸವ ಕಾರ್ಯಕ್ರಮ ಮಾಡುವುದರ ಮೂಲಕ ಏಶಿಯಾ ಬುಕ್ ಆಫ್ ರೇಕಾರ್ಡ್ ಕೂಡ ತನ್ನದಾಗಿಸಿಕೊಂಡಿದೆ ಇದು ಸಂಸ್ಥೆಗೆ ಹಾಗೂ ಜಿಲ್ಲೆಗೆ ಹೆಮ್ಮೆಯ ವಿಷಯವಾಗಿದೆ ಎಂದರು.

ಡಾ.ರೇಶ್ಮಾ ಕೌರ್ ಗುರುನಾನಕ್ ಗ್ರೂಪ್ ಆಫ್ ಇನ್ಸಿಟ್ಯೂಟನಉಪಾಧ್ಯಕ್ಷರು

“ ಪದ್ಮಶ್ರೀ ಜಯಪ್ರಕಾಶ ಅಗ್ರವಾಲ್ ಅವರ ಮಾರ್ಗದರ್ಶನದಲ್ಲಿ ಐ.ಎನ್.ಓ ಹಾಗೂ ಸೂರ್ಯ ಫೌಂಡೇಶನ್ ವತಿಯಿಂದ ದೇಶಾದ್ಯಂತ ಆರೋಗ್ಯ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಚಟುವಟಿಕೆಗಳನ್ನ ನಿರಂತರವಾಗಿ ಮಾಡುವುದರ ಜೊತೆಗೆ ವಿಶೇಷವಾಗಿ ಯೋಗ ಹಾಗೂ ಪ್ರಾಕೃತಿಕ ಚಿಕಿತ್ಸಾ ಪದ್ದತಿ ಬಗ್ಗೆ ಜನರಿಗೆ ಆರೋಗ್ಯಕರ ಜೀವನ ನಡೆಸಲು ಅನೇಕ ಜಾಗೃತಿ ಕಾರ್ಯಗಳನ್ನು ಮಾಡುತ್ತಿದೆ ಅದರಲ್ಲಿ ಈ ಯೋಗ ಮಹೋತ್ಸವ ಕಾರ್ಯಕ್ರಮ ಕೂಡ ಒಂದಾಗಿದೆ ಎಂದರು.

ಅನಂತ ಬಿರಾದಾರ ಯೋಗ ಸರ್ಟಿಫಿಕೇಶನ್ ಬೋರ್ಡ್ ಸದಸ್ಯರು ಹಾಗೂ ಐ.ಎನ್.ಓ ಅಧ್ಯಕ್ಷರು

“ ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ ರೋಗ ಮುಕ್ತ, ಸ್ವಸ್ಥ-ಸುಸ್ಥಿರ ಹಾಗೂ ಸಶಕ್ತ ಸಮಾಜ ನಿರ್ಮಾಣಕ್ಕೆ ಯೋಗ ಪ್ರತಿಯೊಬ್ಬರಿಗು ಅತ್ಯವಶ್ಯಕವಾಗಿದೆ, ವಿಶ್ವದ ಅನೇಕ ರಾಷ್ಟ್ರಗಳು ಈಗ ಯೋಗದ ಮೊರೆ ಹೋಗಿವೆ ವಿದೇಶಗಳಿಂದ ಅನೇಕ ದಿನಗಳನ್ನು ನಾವು ಅಳವಡಿಸಿಕೊಂಡಿದ್ದೆವೆ ಆದರೆ ಭಾರತ ದೇಶವು ಯೋಗವನ್ನು ಜಗತ್ತಿಗೆ ನೀಡಿದೆ ಮತ್ತು ಇದು ಬಹುದೊಡ್ಡ ಕೊಡುಗೆಯಾಗಿದೆ ಹೀಗಾಗಿ ಎಲ್ಲರು ಕಾಯಕದ ಜೊತೆಗೆ ಯೋಗ ಅಳವಡಿಸಿಕೊಂಡಾಗ ಬದುಕು ಸಾರ್ಥಕವಾಗುತ್ತದೆ ಎಂದರು.

ಡಾ.ಶೈಲೇಂದ್ರ ಬೆಲ್ದಾಳೆ
ಬೀದರ ದಕ್ಷಿಣ ಕ್ಷೇತ್ರದ ಶಾಸಕರು

• ಮಲ್ಲಮ್ಮ ನುಡಿ ವಾರ್ತೆ, ಬೀದರ

ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಯೋಗ ಅತ್ಯಂತ ಸಹಕಾರಿಯಾಗಿದ್ದು, ಪ್ರತಿಯೊಬ್ಬರು ಯೋಗವನ್ನು ದೈನಂದಿನ ಜೀವನದ ಭಾಗವನ್ನಾಗಿಸಿಕೊಂಡು ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಭಾರತ ಸರ್ಕಾರದ ಆಯುರ್ವೇದ ಬೋರ್ಡ್ ಅಧ್ಯಕ್ಷರಾದ ಡಾ.ಅಲ್ಲಮಪ್ರಭು ಗುಡ್ಡಾ ಹೇಳಿದರು.

ನಗರದ ಗುರುನಾನಕ್ ದೇವ ಇಂಜಿನಿಯರಿಂಗ್ ಕಾಲೇಜಿನ ಮೈದಾನದಲ್ಲಿ ಭಾರತ ಸರ್ಕಾರದ ಆಯುಶ್ ಇಲಾಖೆಯ ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆ, ಇಂಟರ್ನ್ಯಾಷನಲ್ ನ್ಯಾಚುರೋಪತಿ ಆರ್ಗನೈಜೆಶನ್, ಸೂರ್ಯ ಫೌಂಡೇಷನ್ ನೇತೃತ್ವದಲ್ಲಿ ಹಾಗೂ ಗುರುನಾನಕ ಗ್ರೂಪ್ ಆಫ್ ಇನ್ಸಿಟ್ಯೂಟ್ ಸಹಯೋಗದಲ್ಲಿ ಹಾಗೂ ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳ ಸಹಭಾಗಿತ್ವದಲ್ಲಿ ವಿಶ್ವ ಯೋಗ ದಿನಾಚರಣೆಯ ಪ್ರಯುಕ್ತ ಹಮ್ಮಿಕೊಂಡ ಯೋಗ ಮಹೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಆಯುಶ್ ಇಲಾಖೆಗೆ ಹೆಚ್ಚಿನ ಒತ್ತು ನೀಡುತಿ-ದ್ದು ಜನರು ಇದರ ಸದುಪಯೋಗ ಪಡೆದುಕೊಳ್ಳಬೇಕಿದೆ ಈ ನಿಟ್ಟಿನಲ್ಲಿಯೆ ಈ ತರಹದ ಜಾಗೃತಿ ಕಾರ್ಯಕ್ರಮಗಳು ನಡೆಯುತ್ತಿವೆ ಎಂದರು. ವಿಶ್ವಯೋಗ ದಿನಾಚರಣೆಗು ಮುನ್ನ ದೇಶಾದ್ಯಂತ ನೂರು ಕಡೆ ಯೋಗ ಮಹೋತ್ಸವ ಕಾರ್ಯಕ್ರಮಗಳು ನಡೆಯುತ್ತಿವೆ ಕರ್ನಾಟಕ ರಾಜ್ಯದ ಬೀದರನಲ್ಲಿ ಮಾತ್ರ ಈ ಕಾರ್ಯಕ್ರಮ ನಡೆದಿದೆ ಮತ್ತು ಒಂದು ನಿಮಿಷಗಳ ಕಾಲ 5326 ಜನ ಏಕಕಾಲಕ್ಕೆ ತಾಡಾಸನ ಮಾಡುವುದರ ಮೂಲಕ ಏಶಿಯಾ ಬುಕ್ ಆಫ್ ರೇಕಾರ್ಡನಲ್ಲಿ ದಾಖಲಾಗಿಸಿದೆ ಈ ಪ್ರಯುಕ್ತ ಐ.ಎನ್.ಓ., ಸೂರ್ಯ ಫೌಂಡೇಶನ್ ಹಾಗೂ ಗುರುನಾನಕ್ ಗ್ರೂಪ್ ಆಫ್ ಇನ್ಸಿಟ್ಯೂಟ್ ಸಂಸ್ಥೆಗಳಿಗೆ ಪ್ರಶಸ್ತಿ ಪತ್ರ, ಮೇಡಲ್ ಹಾಗೂ ವಿಶೇಷ ಪೇನ್ ನೀಡಿ ರೇಕಾರ್ಡ್ ಸಮಿತಿಯ ಸದಸ್ಯರು ಹಾಗೂ ಅನಂತ ಬಿರಾದಾರ ಅವರು ಗೌರವಿಸಿದರು.

ಭಾರತ ಸರ್ಕಾರದ ಆಯುಶ್ ಇಲಾಖೆಯ ಮಾರ್ಗಸೂಚಿಯನ್ವಯ ಯೋಗವನ್ನ ಪತಂಜಲಿಯ ಕರ್ನಾಟಕದ ಪ್ರಭಾರಿಗಳಾದ ಭವರಲಾಲ್ ಆರ್ಯ ಅವರು ಅರ್ಥಪೂರ್ಣವಾಗಿ ನಡೆಸಿಕೊಟ್ಟರು. ಶ್ರೀ ಸಿದ್ದರಾಮೇಶ್ವರ ಆಯುರ್ವೇದ ಮೇಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಯೋಗಪಟು ಆನಂದ ಅವರ ಯೋಗ ಪ್ರದರ್ಶನ ಎಲ್ಲರ ಗಮನ ಸೆಳೆಯಿತು. ಯೋಗ ದಿನಾಚರಣೆಯ ಪ್ರಚಾರ ಹಾಗೂ ಪ್ರಸಾರಕ್ಕಾಗಿ 63 ದಿನ ಮಂಚಿತವಾಗಿ ಜಿಲ್ಲೆಯಲ್ಲಿ ಐ.ಎನ್.ಓ ಹಾಗೂ ಸೂರ್ಯ ಫೌಂಡೇಶನ್ ಹಮ್ಮಿಕೊಂಡ ಯೋಗ ಮಹೋತ್ಸವದಲ್ಲಿ ನಗರದ ವಿವಿಧ ಕಾಲೇಜಿನ ವಿದ್ಯಾರ್ಥಿಗಳು, ಜಿಲ್ಲೆಯ ವಿವಿಧ ತಾಲ್ಲೂಕಿನ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಮಹಿಳೆಯರು, ರಾಜಕೀಯ ನಾಯಕರು, ಹಾಗೂ ಸಾರ್ವಜನಿಕರು ಸ್ವಯಂಪ್ರೇರಣೆಯಿಂದ ಪಾಲ್ಗೊಂಡಿದ್ದರು. ಆಯುಶ್ ಇಲಾಖೆ ಸಚಿವರಾದ ಪ್ರತಾಪರಾವ ಜಾಧವ ಅವರು ವಿಡಿಯೋ ಸಂದೇಶದ ಮೂಲಕ ಐ.ಎನ್.ಓ ಸಂಸ್ಥೆಯ ಕಾರ್ಯ ಶ್ಲಾಘಿಸಿ ಎಲ್ಲರು ಯೋಗವನ್ನು ದೈನಂದಿನ ಜೀವನದ ಭಾಗವನ್ನಾಗಿಸಿಕೊಳ್ಳಬೇಕೆಂದರು. ಈ ಸಂದರ್ಭದಲ್ಲಿ ಬ್ರಹ್ಮಕುಮಾರಿ ಆಶ್ರಮದ ಪ್ರತಿಮಾ ಬೆಹೆನಜಿ, ಗುರುನಾನಕ ಸಂಸ್ಥೆಯ ಅಧ್ಯಕ್ಷರಾದ ಡಾ.ಸರ್ದಾರ್ ಬಲಬೀರಸಿಂಗ್, ನಿರ್ದೇಶಕರಾದ ಸರ್ದಾರ್ ಪವಿತ್ ಸಿಂಗ್, ಬಿಜೆಪಿ ಜಿಲ್ಲಾದ್ಯಕ್ಷರಾದ ಸೋಮನಾಥ ಪಾಟೀಲ, ಬಾಬುರಾವ ಕಾರಬಾರಿ, ಗುರುನಾಥ ಜ್ಯಾಂತಿಕರ್, ರಾಜಶೇಖರ ನಾಗಮೂರ್ತಿ, ಐ.ಎನ್.ಓ ರಾಜ್ಯ ಪ್ರಧಾನ ಕಾರ್ಯದರ್ಶಿ ಮಂಜುನಾಥ ಸ್ವಾಮಿ, ರಾಜ್ಯ ಸಂಚಾಲಕ ಗುರುನಾಥ ರಾಜಗೀರಾ, ರಾಜ್ಯ ಕಾರ್ಯದರ್ಶಿ ಯೋಗೆಂದ್ರ ಯದಲಾಪುರೆ, ಹಾಗೂ ಸಾರ್ವಜನಿಕರಿದ್ದರು.

# ಅಧ್ಯಕ್ಷ ಸುನಿಲ ಪಾಟೀಲ್ ಉಪಾಧ್ಯಕ್ಷ ಗೀತಾರೋಡ್ಡ ಆಯ್ಕೆ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಗ್ರಾಮೀಣ ಕೃಷಿ ಸಹಕಾರ ಕ್ಷೇತ್ರದಲ್ಲಿ ಮಹತ್ವದ ಬೆಳವಣಿಗೆಯಾಗಿ, ಪಿಕೆಪಿಎಸ್ (ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ) ಅವಿರೋಧವಾಗಿ ಅಧ್ಯಕ್ಷರಾಗಿ ಸುನಿಲ್ ಪಾಟೀಲ್ ಹೊನ್ನಕೇರಿ ಅವರನ್ನು ಆಯ್ಕೆ ಮಾಡಲಾಗಿದ್ದೆ. ಉಪಾಧ್ಯಕ್ಷರಾಗಿ ಗೀತಾರೋಡ್ಡ ನೇಮಕ ಈ ಆಯ್ಕೆ ಪ್ರಕ್ರಿಯೆ ಸಂಘದ ಸದಸ್ಯರ ಸಮ್ಮುಖದಲ್ಲಿ ನಡೆದಿದ್ದು,

ಪಿಕೆಪಿಎಸ್ ಚುನಾವಣೆಯಲ್ಲಿ 12 ಸದಸ್ಯರ ಬಲ ಇರುವ ಪಿಕೆಪಿಎಸ್ ಚುನಾವಣೆಯಲ್ಲಿ ಹತ್ತು ಸದಸ್ಯರು ಗೆಲ್ಲುವ ಮುಖಾಂತರ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ, ಪಿಕೆಪಿಎಸ್ ಸದಸ್ಯರಾದ ಹನುಮಂತರ ಮೈಲಾರಿ, ಸುರೇಶ್ ಕೋಣೆ, ಶಿವರಾಜ ಪಾಟೀಲ,

ಶಂಕರ ಜ್ಯಾಂತೆ ಗ್ರಾಮಸ್ಥರಾದ ಅಮರ್ ಚಾಂಬಾಳೆ ಸುಧಾಕರ್ ಹಳೆಂಬುರೆ ಶಿವಕುಮಾರ್ ಕೊಳರೆ ಸಚಿನ್ ಕೋಣೆ ಮಲ್ಲಿಕಾರ್ಜುನ್ ಮಡಿವಾಳ್ ಅಶೋಕ್ ಕೋಳಿ, ಆನಂದ ಶಿಕೆನಪುರೇ, ಮಂಜುನಾಥ ಆಡಳಿತ ಅಧಿಕಾರಿ ಮಲ್ಲಿಕಾರ್ಜುನ್ ಮಠಪತಿ ಚುನಾವಣೆ ಅಧಿಕಾರಿ ನೇತೃತ್ವದಲ್ಲಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನು ಎಲ್ಲಾ ಪಿಕೆಪಿಎಸ್ ಸದಸ್ಯರನ್ನು ಆಯ್ಕೆ ಮಾಡಲಾಗಿದೆ.



# ವ್ಯವಸ್ಥೆಯ ನಿರ್ಲಕ್ಷ್ಯಕ್ಕೆ ಅಮಾಯಕರ ಬಲಿ

• ಮಲ್ಲಮ್ಮ ನುಡಿ ವಾರ್ತೆ, ಯಾದಗಿರಿ

ಸುರಪುರದಿಂದ ಮರಳುತ್ತಿದ್ದ ಸಿರವಾರದ ಒಂದೇ ಕುಟುಂಬದ 9 ಮಂದಿ ಶಾಂತಪುರ ಕ್ರಾಸ್ ಬಳಿ ಶುಕ್ರವಾರ ಸಂಭವಿಸಿದ ಭೀಕರ ಅಪಘಾತದಲ್ಲಿ ಬಲಿಯಾಗಿರುವುದು ಅತ್ಯಂತ ಶೋಚನೀಯ. ಮೂವರು ಮಕ್ಕಳು ಸೇರಿದಂತೆ 9 ಜನ ಅಮಾಯಕರ ಸಾವಿಗೆ ಕೇವಲ ವಿಧಿಬರಹವಲ್ಲದೆ ಸರ್ಕಾರದ ದಿವ್ಯ ನಿರ್ಲಕ್ಷ್ಯವೇ ನೇರ ಹೊಣೆಯಾಗಿದೆ.

ಹೆದ್ದಾರಿಗಳಲ್ಲಿ ವಾಹನ ದಟ್ಟಣೆ ಹೆಚ್ಚುತ್ತಿದ್ದರೂ ರಸ್ತೆ ಅಗಲೀಕರಣ ಮಾಡದಿರುವುದು ಮತ್ತು ಬಿಡುಗಡೆ-ಯಾದ ಅನುದಾನದ ಕಾಮಗಾರಿಗಳು ವಿಳಂಬವಾಗುತ್ತಿರುವುದು ಸರ್ಕಾರದ ವೈಫಲ್ಯವನ್ನು ಎತ್ತಿ ತೋರಿಸುತ್ತವೆ. ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ 'ಕಮಿಷನ್' ಆಸೆಯಿಂದಾಗಿ ರಸ್ತೆಗಳ ಗುಣಮಟ್ಟ ಕುಸಿಯುತ್ತಿದ್ದು, ರಸ್ತೆ ಕಾಮಗಾರಿ ಮಾಫಿಯಾ ಜನರ ಜೀವದ ಜೊತೆ ಚೆಲ್ಲಾಟವಾಡುತ್ತಿದೆ.

ಇನ್ನಾದರೂ ಸರ್ಕಾರ ಎಚ್ಚೆತ್ತು-ಕೊಂಡು ರಸ್ತೆ ಕಾಮಗಾರಿಯ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು. ರಾಜ್ಯದ ಪ್ರಮುಖ ರಸ್ತೆಗಳನ್ನು ಕೂಡಲೇ ಚತುಷ್ಪಥಗೊಳಿಸಿ ಮೇಲ್ದರ್ಜೆಗೇರಿಸಬೇಕು. ವ್ಯವಸ್ಥೆಯು ಜವಾಬ್ದಾರಿಯಿಂದ ವರ್ತಿಸಿದರೆ ಮಾತ್ರ ಇಂತಹ ದುರಂತಗಳನ್ನು ತಡೆಯಲು ಸಾಧ್ಯ.



ಡಾ. ಉಪೇಂದ್ರ ನಾಯಕ ಸುಬೇದಾರ್ (ಸಾಮಾಜಿಕ ಹೋರಾಟಗಾರರು)

# ಯುದ್ಧದಿಂದ ಮಕ್ಕಳ ಮಹಿಳೆಯರ ಮೇಲಾಗುತ್ತಿರುವ ಮನುಕುಲದ ಭೀಕರ ದಾಳಿ

• ಮಲ್ಲಮ್ಮ ನುಡಿ ವಾರ್ತೆ ಪಿರಿಯಾಪಟ್ಟಣ

ಮೈಸೂರಿನ ಒಡನಾಡಿ ಸೇವಾ ಸಂಸ್ಥೆಯು ಯುದ್ಧದಿಂದ ಮಕ್ಕಳ ಮೇಲಾಗುತ್ತಿರುವ ಮಹಿಳೆಯರ ಮನುಕುಲದ ಮೇಲಾಗುತ್ತಿರುವ ಭೀಕರ ದಾಳಿ ಮತ್ತು ಸಾವು ನೋವುಗಳು

ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಧರ್ಮ ಧರ್ಮಗಳ ನಡುವೆ ಯುದ್ಧವೋ ಅಥವಾ ಸಂಪತ್ತು ದೋಚವ ಯುದ್ಧವೋ ಅಂತೂ ಮಕ್ಕಳು ಬಲಿಯಾಗುತ್ತಿದ್ದಾರೆ ಮನುಕುಲ ಬಲಿಯಾಗುತ್ತಿದೆ ಯುದ್ಧದಲ್ಲಿ ಭಾರಿ ಮುಖ್ಯವಾಗಿ ನಾಗರಿಕರ ಮೇಲೆ ಹಲ್ಲೇ ಆಗಲಿ ಅವಮಾನವನ್ನಾಗಲಿ ಕೊಲ್ಲುವುದನ್ನಾಗಲಿ ಮಾಡಬಾರದು ಹಾಗಾಗಿ ಯುದ್ಧ ನೀತಿಯನ್ನಷ್ಟೇ ಎತ್ತಿ ಹಿಡಿಯಬೇಕೆಂದು ಈ ಪ್ರಗತಿಪರ ದೇಶಗಳಿಗೆ ಒಡನಾಡಿಯ ಮಕ್ಕಳು ನಾವು ಎಲ್ಲರೂ ಹೇಳುವಂಥದ್ದು.

ಹಾಗೆಯೆ ಅಲ್ಲಿ ಅರಳಬೇಕಾದ ಮಕ್ಕಳು ಮಾನವೀಯ ಮಮಕಾರದೊಡನೆ ಬದುಕಿ ಬಾಳಬೇಕಾದ ಮಕ್ಕಳು ಗೆಳೆಯರೊಡನೆ ಆಟವಾಡಿ ಬೆಳೆಯಬೇಕಾದ ಮಕ್ಕಳು ಕತ್ತರಿಸಿಕೊಂಡು ಛಿದ್ರಗೊಂಡ ದೇಹದೊಡನೆ ನೋಣಗಳನ್ನು ಓಡಿಸಲಾಗದೆ ಹಸಿವಿನ ಸ್ಥಿತಿಯಲ್ಲಿ ಬಿದ್ದ ದೇಹಗಳು ಚೆಲ್ಲಾಪಿಲ್ಲಿಯಾಗಿರುವುದು.

ಕಲಿಯಲಾಗದೆ ಗೋಡೆಗಳಿಲ್ಲದೆ ಬದುಕು ಬಯಲಾದದ್ದು ನೋಡುತ್ತಾ ಯುದ್ಧದಾಯಿಗಳ ದೇಶಗಳಿಗೆ ನಾವು ಧಿಕ್ಕಾರವನ್ನು ಕೂಗುತ್ತೇವೆ ಮನುಕುಲ ಬದುಕಬೇಕು, ಬಾಳಬೇಕು, ಸರ್ವೋದಯದೊಡನೆ ಎನ್ನುವ ತತ್ವವನ್ನು ಹೇಳುತ್ತಾ

ನೆನ್ನೆ ಅಷ್ಟೇ ಉಂಡ ಕೈಗಳು ಇಂದು ಬೇಡಿ ಹೊಟ್ಟೆ ತುಂಬಿಸಿಕೊಳ್ಳುವ, ಬೇಡುವ ಕೈಗಳಾಗಿ ಪರಿವರ್ತನೆಯದುದರ ಬಗ್ಗೆ ಕನಿಕರದೊಡನೆ ಆ ಮಕ್ಕಳ ಏಳಿಗೆಗೆ ಸಂಬಂಧಪಟ್ಟವರು ಯುದ್ಧವನ್ನು ನಿಲ್ಲಿಸುವಂತೆ ಒಡನಾಡಿಯ ಬಳಗ ಮತ್ತು ಮಕ್ಕಳ ಹಕ್ಕೊತ್ತಾಯವಾಗಿದೆ.



# ಕಲಾ ಕೌಶಲ ತರಬೇತಿ ಕಾರ್ಯಾಗಾರ ವೀಕ್ಷಣೆ: ಹುನೂರ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಸಮೀಪದ ಜನತಾಪುರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮೈಸೂರಿನ ಎಸ್ ಎಫ್ ಹುಸೇನಿಯವರಿಂದ ಕಲಾ ಕೌಶಲ್ಯ ತರಬೇತಿ ಕಾರ್ಯಗಾರವನ್ನು ಶನಿವಾರ ಕ್ಷೇತ್ರ ಶಿಕ್ಷಣಾಧಿಕಾರಿ ಸುಜಾತಾ ಹುನೂರ ಭೇಟಿ ನೀಡಿ ಪರಿಶೀಲನೆ ಮಾಡಿ ವೀಕ್ಷಣೆ ಮಾಡಿದರು.

ಶಾಲೆಯಲ್ಲಿ 15 ದಿನಗಳ ಕಾಲ ನಿರಂತರ ಉಚಿತ ಮಕ್ಕಳ ಮನೋಲ್ಲಾಸ ಬೇಸಿಗೆ ಶಿಬಿರ ಕಾರ್ಯಾಗಾರ ವೀಕ್ಷಣೆ ಮಾಡಿದ ಬಳಿಕ ಮಾತನಾಡಿದ ಅವರು ಜನತಾಪುರ ಗ್ರಾಮವು ತಾಲೂಕು ಕೇಂದ್ರದಿಂದ ಬಹುದೂರದಲ್ಲಿದ್ದು, ಬೇಸಿಗೆ ರಜೆಯಲ್ಲಿ ಶಿಬಿರ ಏರ್ಪಡಿಸಿರುವುದು ಇಲ್ಲಿನ ಶಿಕ್ಷಕರ ಕ್ರಿಯಾಶೀಲತೆಗೆ ಸಾಕ್ಷಿಯಾಗಿದೆ. ತರಬೇತಿಯಲ್ಲಿ ಮಕ್ಕಳು ಕಾಗದ ಮತ್ತು ಕತ್ತರಿ ಬಳಸಿ ಜನಪದ ಕಲಾ ಕೌಶ್ಯಲ್ಯದಲ್ಲಿ ಗಣೇಶನ ಚಿತ್ರ ಬಿಡಿಸುವಿಕೆ, ಚಿಟ್ಟೆ ಚಿತ್ರ ಬಿಡಿಸುವಿಕೆ, ಜನಪದ ರಂಗೋಲಿ ವಿನ್ಯಾಸ ಕಾಗದಗಳನ್ನು ಕತ್ತರಿಸುವದು, ಅನೇಕ ವಿಧದ ಆಕೃತಿಗಳ ಚಿತ್ರ ಬಿಡಿಸಿರುವುದನ್ನು ನೋಡಿ ನನ್ನ ಮನಸ್ಸಿಗೆ ಸಂತೋಷವಾಗಿದೆ. ಪ್ರತಿ ಶಾಲಾ ಮಗು ಕಲಾ ಕೌಶಲ್ಯ ಕಲಿಕೆಯಲ್ಲಿ ಭಾಗವಹಿಸುವುದರಿಂದ ಮಕ್ಕಳಲ್ಲಿ ಏಕಾಗ್ರತೆ, ಆಸಕ್ತಿ ಹೆಚ್ಚುಸುತ್ತದೆ. ಮಕ್ಕಳಿಗೆ ಕೌಶಲ್ಯಾಧಾರಿತ ವೃತ್ತಿ ಜೀವನದ ಕೌಶಲ್ಯಗಳನ್ನು ಕಲಿಸುವುದು ಈ ಕಲಿಕೆಯ ಮುಖ್ಯ ಉದ್ದೇಶವಾಗಿರುತ್ತದೆ ಎಂದು ತಿಳಿಸಿದರು.

ಶಾಲಾ ಶಿಕ್ಷಕ ಮೌನೇಶ್ ಎಂ. ವಿಶ್ವಕರ್ಮ ಮಾತನಾಡಿ ಮೈಸೂರಿನ ಎಸ್, ಎಫ್ ಹುಸೇನಿ ಯವರು ಕರ್ನಾಟಕ ದಲ್ಲಿ ಕಾಗದ ಮತ್ತು ಕತ್ತರಿ ಬಳಸಿ ಮಾಡುವ ಕೌಶಲ್ಯ ರೂಪದಲ್ಲಿ ಅಪಾರ ಅನುಭವ ಹೊಂದಿದ್ದು ನಮ್ಮ ಮಕ್ಕಳಿಗೆ ಅವರ ಜ್ಞಾನಧಾರೆಯನ್ನು ತಿಳಿಸುವುದು ಹಾಗೂ ನಮ್ಮ ಮಕ್ಕಳಲ್ಲಿ ಆ ಕಲೆ ಬೆಳಸಲು ಈ ಶಿಬಿರ ಸಹಾಯಕವಾಗಲಿದೆ ಎಂದು ತಿಳಿಸಿದರು.

ಶಾಲೆಯ ಸಹಶಿಕ್ಷಕ ರವಿಕುಮಾರ, ಅತಿಥಿ ಶಿಕ್ಷಕಿ ಜ್ಯೋತಿ, ಗ್ರಾಮದ ಶಾಲಾ ಪ್ರತಿ ಮಗು ಶಿಬಿರದಲ್ಲಿ ಭಾಗವಹಿಸಿ ಅತ್ಯಂತ ಸಂಭ್ರಮ ಪಟ್ಟು ಕ್ರಿಯೆಯಲ್ಲಿ ಉತ್ಸಾಹಕರಾಗಿದ್ದರು.

# ಬಸವ ತತ್ವ ಭವ್ಯ ಮಾರ್ಗ



ಆತ್ಮ ಸಾಕ್ಷಾತ್ಕಾರಕ್ಕೆ ಬಸವ ತತ್ವ
ಭವ್ಯ ಮಾರ್ಗ
ಮೂಢಾತ್ಮಂಗೆ ಸರ್ವಾಂಗ ಸ್ನಾನಗೈದು
ಅಂತರಾತ್ಮ ಬೆಳಗುವುದೇ
ಶರಣರ ವರ್ಗ!
ಜಾಲಿಯ ಮರದೊಳು ನೆರಳನ್ನು ಹೊದಿಸಿದ
ಜೇಡರ ಬಲೆಯೋ ಅದ್ಭುತ ಕಲೆಯೋ
ಕೆತ್ತನೆಗೈಯುವ ಶಿಲ್ಪಿಯ ಕಲ್ಪನೆ
ಶರಣರ ಜ್ಞಾನದ ಸಂಗಮ ಸಭೆಯಲ್ಲಿ
ದುರಾಚಾರದ ಅಜ್ಞಾನವೆದ್ದೋಡಿತು ಬೆತ್ತಲೆ!
ದಿಗಂಬರ ಕಾಯವ ಪೂಜಿಸಿದ ನಿಷ್ಕಲ್ಮಶ
ಮುಗ್ಧ ಶರಣನ ಭಾವವೇ ಭಕ್ತಿಯೊ
ಶರಣರ ನಾಡಿನ ತೊಟ್ಟಿಲ ಮನೆಯೋಳು
ಮರದ ಹೊಟ್ಟೆಯನು ಬಗಿದು ಬದುಕುವವಗೆ
ಕರೆದು ಕೊಡಲಿಯ ತಾ ಕೊಟ್ಟನೋ ಶಿವನು!
ಹಾಯುವ ಮನಕೆ ಆಯುವ ಕೆಲಸ
ಹುಚ್ಚರ ಗುಡಿಸಲಲಿ ಹಚ್ಚಿದ ನವ್ಯ ದೀಪ
ದೀಪದ ಬೆಳಕಲಿ ದೋಷ ಹುಡುಕಾಟ
ತನ್ನರಿವಿನ ಬಾಳುವೆಗೆ ಜನ್ಮ ಜನ್ಮದ ಕಾಟ
ಅರಿಯಲು ಬಿಟ್ಟನು ಶಿವನು ಶರಣರ ಕೂಟ!

ಲಕ್ಷ್ಮಿಕಾಂತ ಜೆ. ತಮ್ಮನೋರ್
ಯುವ ಸಾಹಿತಿ, ಉಡಬಾಳ.

# ಬಸವ ಪ್ರಭು ಪದವಿ ಮಹಾವಿದ್ಯಾಲಯದಲ್ಲಿ ಪ್ರವೇಶ ಆರಂಭ

• ಮಲ್ಲಮ್ಮ ನುಡಿ ವಾರ್ತೆ, ಹುಣಸಗಿ



ತಾಲೂಕಿನ ಕೊಡೇಕಲ್ ಬಸವ ಪ್ರಭು ಪದವಿ ಮಹಾವಿದ್ಯಾಲಯದಲ್ಲಿ 2026-27 ಶೈಕ್ಷಣಿಕ ಸಾಲಿನ ಬಿಎ ಹಾಗೂ ಬಿ.ಕಾಂ ಪದವಿ ಕೋರ್ಸ್‌ಗಳಿಗೆ ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಿದೆ ಎಂದು ಸಂಸ್ಥೆಯ ಅಧ್ಯಕ್ಷರಾದ ಸಂಗನಗೌಡ ಬಿರಾದಾರ ತಿಳಿಸಿದ್ದಾರೆ.

ಈ ಕುರಿತು ಪತ್ರಿಕೆಗೆ ಮಾಹಿತಿ ನೀಡಿದ ಅವರು, ನಮ್ಮ ಮಹಾವಿದ್ಯಾಲಯವು ರಾಯಚೂರ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಕಾಲೇಜಾಗಿದ್ದು, ಉತ್ತಮ ಶಿಕ್ಷಣವನ್ನು ನೀಡುವಲ್ಲಿ ಬದ್ಧವಾಗಿದೆ ಎಂದು ಹೇಳಿದರು.

ಗ್ರಾಮೀಣ ಭಾಗದ ಕೊಡೇಕಲ್ ಸುತ್ತಮುತ್ತಲಿನ ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಲಾಗಿದೆ ಎಂದು ತಿಳಿಸಿದ ಅವರು, ಕಲಾ ವಿಭಾಗದಲ್ಲಿ (ಬಿಎ) 100 ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶಾವಕಾಶವಿದ್ದು, ವಾಣಿಜ್ಯ ವಿಭಾಗದಲ್ಲಿ (ಬಿ.ಕಾಂ) 40 ಸೀಟುಗಳು ಮಾತ್ರ ಲಭ್ಯವಿವೆ ಎಂದರು. ಹೀಗಾಗಿ ಮೊದಲು ಬರುವ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುವುದು ಎಂದು ಹೇಳಿದರು.

ಈ ವರ್ಷ ವಿಶೇಷ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತಿದೆ ಎಂದು ತಿಳಿಸಿದ ಅವರು, ಮೊದಲು ಬಂದು ಪ್ರವೇಶ ಪಡೆಯುವ ಹತ್ತು ಮಹಿಳಾ ವಿದ್ಯಾರ್ಥಿನಿಯರಿಗೆ ಪ್ರವೇಶ ಶುಲ್ಕದಲ್ಲಿ ಶೇ.30 ರಷ್ಟು ರಿಯಾಯಿತಿ ನೀಡಲಾಗುವುದು ಎಂದರು. ಅದೇ ರೀತಿಯಾಗಿ, ಪಿಯುಸಿ ದ್ವಿತೀಯ ವರ್ಷದಲ್ಲಿ ಶೇ.75 ಮತ್ತು ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಮೊದಲ ಹತ್ತು ಪುರುಷ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕದಲ್ಲಿ ಶೇ.30 ರಷ್ಟು ರಿಯಾಯಿತಿ ಕಲ್ಪಿಸಲಾಗಿದೆ ಎಂದು ಹೇಳಿದರು.

ವಿದ್ಯಾರ್ಥಿಗಳ ಸ್ಪರ್ಧಾತ್ಮಕ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದಿಂದ, ಪ್ರತಿ ತಿಂಗಳಿಗೂ ಒಮ್ಮೆ ನುರಿತ ಉಪನ್ಯಾಸಕರಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಉಚಿತ ತರಬೇತಿ ಶಿಬಿರವನ್ನು ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಇದಲ್ಲದೆ, 2026-27ನೇ ಶೈಕ್ಷಣಿಕ ವರ್ಷದ ಶೈಕ್ಷಣಿಕ ಚಟುವಟಿಕೆಗಳನ್ನು ಸಮಗ್ರವಾಗಿ ರೂಪಿಸಲಾಗಿದ್ದು, ವಿದ್ಯಾರ್ಥಿಗಳು ಈ ಸೌಲಭ್ಯಗಳನ್ನು ಬಳಸಿಕೊಳ್ಳುವಂತೆ ಅವರು ಮನವಿ ಮಾಡಿದರು.

# ಬೇಸಿಗೆಯ ರೋಗಗಳ ತಡೆಗೆ ಆರೋಗ್ಯ ಇಲಾಖೆ ಸಿದ್ಧತೆ: ಮೇರಿ

• ಮಲ್ಲಮ್ಮ ನುಡಿ ವಾರ್ತೆ, ಸಿಂಧನೂರು



ಬೇಸಿಗೆ ಕಾಲದಲ್ಲಿ ವಿಪರೀತ ಶಾಖದಿಂದ ಮನುಷ್ಯನಿಗೆ ಅನೇಕ ರೋಗ ಬರುವುದು ಸಹಜ ಇದರ ಬಗ್ಗೆ ಜನರಿಗೆ ವ್ಯಾಪಕ ಪ್ರಚಾರ ಮಾಡಿ ಆರೋಗ್ಯ ಕಾಪಾಡಲು ಮೇಲ್ವಿಚಾರಣೆ ಮಾಡುವುದು ನಮ್ಮ ಜವಾಬ್ದಾರಿ ಎಂದು ನಗರ.ಆ.ಕೇಂದ್ರದಲ್ಲಿ ನಡೆದ ತಾಲೂಕಾ ಮಟ್ಟದ ಹೆಚ್.ಐ.ಓ ಸಿಬ್ಬಂದಿಗಳ ತುರ್ತು ಸಭೆಯಲ್ಲಿ ಡಾ.ಮೇರಿ ಭಂಡಾರಿ ಮಾತನಾಡಿ ನಿರ್ದೇಶಿಸಿದರು

ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಚೇರಿಯಿಂದ ಆಯೋಜಿಸಲಾದ ತುರ್ತು ಸಭೆಯಲ್ಲಿ, ಬೇಸಿಗೆಯ ವಿಪರೀತ ತಾಪಮಾನ ಹಾಗೂ ನೀರಿನಿಂದ ಹರಡುವ ರೋಗಗಳ ನಿಯಂತ್ರಣದ ಭಾಗವಾಗಿ ಮನೆ ಮನೆಗೆ ತೆರಳಿದಾಗ ಓ.ಆರ್.ಎಸ್ ದ್ರಾವಣ ಕುಡಿಯಲು ಹಾಗೂ ಹೆಚ್ಚಿನ ನೀರಿನ ತೇವಾಂಶದ ಕೊರತೆ ನೀಗಿಸಲು ಲವಣಾಂಶಗಳಿಂದ ಕೂಡಿದ ನೀರನ್ನು ಹೆಚ್ಚು ಹೊತ್ತು ಬಳಸಲು ಒಂದೆ ಸಾರಿಗೆ ನೀರು ಸೇವಿಸದೆ 2-3 ಸಿಪ್ ನಂತೆ ಸೇವನೆಗೆ ಆದ್ಯತೆ ನೀಡಲು ವ್ಯಾಪಕ ಪ್ರಚಾರ ಕೈಗೊಳ್ಳಲು ವ್ಯಾಪಕ ಪ್ರಚಾರ ಕೈಗೊಳ್ಳುವಂತೆ ಸಲಹೆ ನೀಡಿದರು ಮತ್ತು ಸೂರ್ಯನ ಶಾಖ ಹೆಚ್ಚಾದಂತೆ ದಣಿಯುವ ಹೆಚ್ಚಿನ ಕೆಲಸಗಳನ್ನು ಮಾಡಲು ಮುಂದಾಗದೆ ದೇಹದ ತೇವಾಂಶ ಉಳಿಸಿಕೊಳ್ಳಲು ಸೂಚಿಸಿದರು ಮತ್ತು ಕಾಳಜಿ ವಹಿಸಲುಬೇಕಾದ ಕುರಿತು ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲಾಯಿತು.

ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಹಿರಿಯ ಆರೋಗ್ಯ ಸಹಾಯಕ ಸಂಗನಗೌಡ ಮಾತನಾಡಿ ಪ್ರಮುಖವಾಗಿ ಸಾರ್ವಜನಿಕರ ಆರೋಗ್ಯ ರಕ್ಷಣೆ ಮತ್ತು ಅಧಿಕಾರಿಗಳ ಕರ್ತವ್ಯ ನಿರ್ವಹಣೆಯ ಬಗ್ಗೆ ಸುದೀರ್ಘ ಚರ್ಚೆ ನಡೆಸಲಾಯಿತು. ವಿಪರೀತ ಶಾಖದಿಂದ ಉಂಟಾಗುವ ಜ್ವರ, ವಾಂತಿ-ಬೇಧಿ ಹಾಗೂ ಟೈಫಾಯಿಡ್‌ನಂತಹ ಪ್ರಕರಣಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು ಮತ್ತು ಸರ್ಕಾರದ ನಿಯಮಗಳನ್ನು ಎಲ್ಲಾ ಹಂತಗಳಲ್ಲಿ ಪಾಲಿಸಲು ತಾಲೂಕಾ ಎಪಿಡೆಮಲಾಜಾಸ್ಟಿ ನಿಖಿಲ್ ಅಧಿಕಾರಿಗಳಿಗೆ ಸೂಚಿಸಿದರು ಮತ್ತು ಕುಡಿಯುವ ನೀರಿನ ಪರೀಕ್ಷಾ ವರದಿಯಲ್ಲಿ ಕುಡಿಯಲು ಯೋಗ್ಯವಲ್ಲ ಎಂದು ಕಂಡುಬಂದ ನೀರಿನ ಮೂಲಗಳ ಬಗ್ಗೆ ತಕ್ಷಣವೇ ಗಮನಹರಿಸಿ ಎಂದು ಹೇಳಿದರು.

ಸಂಬಂಧಪಟ್ಟ ಗ್ರಾಮ ಪಂಚಾಯತ ಅಧಿಕಾರಿಗಳ ಮುಖೇನ ಸಮರೋಪಾದಿಯಲ್ಲಿ ಕ್ಲೋರಿನೇಷನ್ ಕಾರ್ಯ ಕೈಗೊಳ್ಳಲು ಮತ್ತು ಸರಬರಾಗುವ ಬಗ್ಗೆ ಖಚಿತಪಡಿಸಲು ಆರೋಗ್ಯ ನಿರೀಕ್ಷಣಾಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು. ಬಿಸಿಲಿನ ತಾಪ ಹೆಚ್ಚಾಗಿರುವುದರಿಂದ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ, ರೋಗ ಲಕ್ಷಣಗಳು ಕಂಡುಬಂದ ತಕ್ಷಣವೇ ಸೂಕ್ತ ಚಿಕಿತ್ಸೆ ಮತ್ತು ಪ್ರಕರಣಗಳ ನಿರ್ವಹಣೆಯನ್ನು ನಿಯಮಾವಳಿಗಳಂತೆ ನಿರ್ವಹಿಸಬೇಕು ಎಂದು ತಿಳಿಸಲಾಯಿತು.

ಈ ಸಂದರ್ಭದಲ್ಲಿ. ತಾಲೂಕಾ ವಿ.ಬಿ.ಡಿ ಮೇಲ್ವಿಚಾರಕ ಎಫ್.ಎ.ಹಣಗಿ ಮಾತನಾಡಿ ಡೆಂಗ್ಯೂ ನಿಯಂತ್ರಣದ ಬಗ್ಗೆಯೂ ಚರ್ಚಿಸಲಾಗಿ ತಾಲೂಕಿನ ಸಮೀಪದ ಬೇರೆ ತಾಲೂಕಿನಿಂದ ಬರಬಹುದಾದ ವಲಸಿಗ ಪ್ರಕರಣಗಳ ಬಗ್ಗೆ ಚರ್ಚಿಸಿ ನಿರ್ದೇಶಿಸಲಾಯಿತು, ಖಾಸಗಿ ಪ್ರಯೋಗಾಲಯಗಳಿಂದ ಬರುವ ರಕ್ತ ಮಾದರಿ ಸಂಗ್ರಹಣೆ ಮತ್ತು ವರದಿಗಳನ್ನು ಸೂಕ್ತವಾಗಿ ವಿಶ್ಲೇಷಿಸಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಟ್ಟದಲ್ಲಿ ಕ್ರಮ ವಹಿಸಲು ಸೂಚಿಸಲಾಯಿತು. ನಗರ.ಆ.ಕೇಂದ್ರವ್ಯಾಪ್ತಿಯಲ್ಲಿ ಹೆಚ್ಚಿನ ಜನಸಂದಣಿ ಮತ್ತು ಹೆಚ್ಚಿನ ಅಪಾಯಕಾರಿ ಘೋಷಿಸಿದ ಏರಿಯಾಗಳಲ್ಲಿ ಲಾರ್ವಾ ಸಮೀಕ್ಷಾ ಕಾರ್ಯದ ಪ್ರಗತಿಯನ್ನು ಪ್ರಸ್ತುತ ಇರುವ ಕಡಿಮೆ ಸಾಧನೆಯನ್ನು ಶೇಕಡಾ 85-90 ಕ್ಕೆ ಹೆಚ್ಚಿಸಲು ಎಲ್ಲ ಸಿಬ್ಬಂದಿಗಳು ಶ್ರಮಿಸಬೇಕೆಂದು ಕಟ್ಟುನಿಟ್ಟಿನ ಸಲಹೆ ನೀಡಲಾಯಿತು.

ಸಾರ್ವಜನಿಕರು ಬಿಸಿಲಿನಿಂದ ರಕ್ಷಿಸಿಕೊಳ್ಳಲು ಹೆಚ್ಚು ನೀರು ಸೇವಿಸಬೇಕು ಮತ್ತು ಆಹಾರ ಹಾಗೂ ನೀರಿನ ಶುದ್ಧತೆಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಮನವಿ ಮಾಡಿದರು. ನಡೆದ ಸಭೆಯಲ್ಲಿ ತಾಲ್ಲೂಕು ಆರೋಗ್ಯ ಅಧಿಕಾರಿಗಳಾದ ಡಾ. ಅಯ್ಯನಗೌಡ ರವರ ನಿರ್ದೇಶನದಂತೆ, ತಾಲ್ಲೂಕು ವಿ.ಬಿ.ಡಿ ಮೇಲ್ವಿಚಾರಕರಾದ ಎಫ್.ಎ. ಹಣಗಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಸಂಗನಗೌಡ ಎಪಿಡೆಮಲಾಜಿಸ್ಟ ನಿಖಿಲ್ ತಾಲೂಕಿನ ಆರೋಗ್ಯ ನಿರೀಕ್ಷಣಾಧಿಕಾರಿಗಳು ಹಾಗೂ ಸ್ಥಳಿಯ ಸಿಬ್ಬಂದಿಗಳು, ಆಶಾ.ಕಾ.ಕರ್ತೆಯರು

# ಎಸ್ಟಿ ಮೀಸಲಾತಿ ಹೆಚ್ಚಳಕ್ಕೆ ಹೋರಾಡದಿದ್ದರೆ ನಿಮ್ಮ ನಾಟಕ ನಡೆಯಲ್ಲ: ಉಗ್ರಪ್ಪ ಎಚ್ಚರಿಕೆ



• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ಕೇಂದ್ರಮತ್ತುರಾಜ್ಯಸರ್ಕಾರಗಳೆರೆಡೂ ರಾಜ್ಯದಎಸ್ಸಿ,ಎಸ್ಟಿಗಳಿಗೆಮೀಸಲಾತಿಯನ್ನು ಹೆಚ್ಚಳ ಮಾಡುವಲ್ಲಿ ವಿಫಲವಾಗಿವೆ. ಈ ವಿಷಯದಲ್ಲಿ ಸಮುದಾಯದ ಹೆಸರೇಳಿಕೊಂಡು ಮತ ಪಡೆದ ಶಾಸಕರು, ಸಂಸದರು, ಸಚಿವರೂ ಸಮುದಾಯಕ್ಕೆ ಮೀಸಲಾತಿ ಸೌಲಭ್ಯ ಕೊಡಿಸುವಲ್ಲಿ ಅನ್ಯಾಯ ಮಾಡಿದ್ದಾರೆ ಎಂದು ವಾಲ್ಮೀಕಿ ಸಮುದಾಯದ ಮುಖಂಡ, ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಆರೋಪಿಸಿ ಉಗ್ರವಾಗಿ ಮಾತನಾಡಿದ್ದಾರೆ.ಅವರು ಇಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿದಗೋಷ್ಟಿನಡೆಸಿ. ರಾಜ್ಯದಲ್ಲಿ 50 ಲಕ್ಷ ಜನ ಎಸ್ಟಿಗಳಿದ್ದಾರೆ. ಒಂದು ಕಾಲು ಕೋಟಿ ಜನ ಎಸ್ಸಿಗಳಿದ್ದಾರೆ. ಎರೆಡು ಕಾಲು ಕೋಟಿ ಓಬಿಸಿಗಳಿದ್ದಾರೆ. ಜನಸಂಖ್ಯೆಗೆ ಅನುಗುಣವಾಗಿ ಕೇಂದ್ರದಲ್ಲಿ ಶಿಕ್ಷಣ ಮತ್ತು ಉದ್ಯೋಗಕ್ಕೆ ಮೀಸಲಾತಿ ನೀಡಿದ್ದಾರೆ. ಅದೇ ರೀತಿ ರಾಜಕೀಯವಾಗಿ ಮೀಸಲಾತಿ ದೊರೆತಿದೆ.ಜನಸಂಖ್ಯೆಗೆಅನುಗುಣವಾಗಿ 2013 ರಿಂದ ರಾಜ್ಯದಲ್ಲಿ ಎಸ್ಸಿಪಿ, ಟಿಎಸ್ಪಿ ಅಡಿ ಅನುದಾನ ನೀಡಲು ಕಾನೂನು ಮಾಡಿದೆ. ಜಸ್ಟೀಸ್ ನಾಗಮೋಹನದಾಸ್, ಆದಿ ಸಮಿತಿ ವರದಿಯನ್ವಯ ಜನಸಂಖ್ಯೆಗೆ ತಕ್ಕಂತೆ ಮೀಸಲಾತಿ ನೀಡಬಹುದು. ತಮಿಳುನಾಡು ಶೇ 69 ರಷ್ಟು ಮೀಸಲಾತಿ ನೀಡಿದೆ. ಅದೇ ರೀತಿ ರಾಜ್ಯದಲ್ಲಿ ಬಸವರಾಜ ಬೊಮ್ಮಾಯಿ ಅವರು ಸಿ.ಎಂ. ಇದ್ದಾಗ ಎಸ್ಸಿ ಗೆ 17, ಎಸ್ಟಿಗೆ 7 ಮತ್ತು ಓಬಿಸಿಗೆ 32 ರಷ್ಟು ಮೀಸಲು ಘೋಷಣೆ ಮಾಡಿದೆ. ಆದರೆ ಇದನ್ನು ಕೇಂದ್ರಕ್ಕೆ ಶಿಫಾರಸು ಮಾಡಿ ಶೆಡ್ಯೂಲ್ 9 ಗೆ ಸೇರಿಸಲು ಆಗಿಲ್ಲ. ಮೋದಿ ಅವರು ಕೋಲಿಗಳನ್ನು, ಕುರುಬರನ್ನು ಎಸ್ಟಿ ಮಾಡುವುದಾಗಿ ಹೇಳುತ್ತಾರೆ. ಅರ್ಹರಿದ್ದವರಿಗೆ ಯಾರನ್ನಾದರೂ ಮಾಡಿ, ಆದರೆ ಕುಲ ಶಾಸ್ತ್ರ ಅಧ್ಯಯನ ಆಗಬೇಕು. ಈ ಬಗ್ಗೆ ಪತ್ರ ಬರೆದರೆ ಮೋದಿ ಅವರು ಪರಿಶಿಷ್ಟ ವರ್ಗಕ್ಕೆ, ಓಬಿಸಿ ಇಲಾಖೆಗೆ ಬರುತ್ತದೆ ಅಲ್ಲಿಗೆ ಬರೆಯಿರಿ ಎಂದು ಹೇಳುತ್ತಿದ್ದಾರೆ. ರಾಜ್ಯದಲ್ಲಿನ ಶೇ.56 ರಷ್ಟು ಮೀಸಲಾತಿ ಜಾರಿಗೆ ತರಲು ನ್ಯಾಯಾಲಯ ಸ್ಟೇ ನೀಡಿದೆ.

ಅದನ್ನು ತೆಗೆಸಲು ಮುಂದಾಗಿಲ್ಲ. ಸೆಡ್ಯೂಲ್ 9 ಗೆ ಸೇರಿಸಲು ಕೇಂದ್ರದ ಮೇಲೆ ಒತ್ತಡ ತಂದಿಲ್ಲ ಎಂದು ಆರೋಪಿಸಿದರು. ಸಿಎಂ ಸಿದ್ದರಾಮಯ್ಯ ಸರ್ಕಾರ ಈ ವಿಷಯದಲ್ಲಿ ಕಾಲಹರಣ ಮಾಡುತ್ತಿದೆಂದು ಕಿಡಿಕಾರಿದರು.

ಇದರಿಂದಾಗಿ ಎಸ್ಸಿ ಎಸ್ಟಿ ಜನರ ಬದುಕಿನ ಮೇಲೆ ಚಪ್ಪಡಿ ಕಲ್ಲು ಎಳೆದಿದ್ದಾರೆ. ರಾಜ್ಯ ಸರ್ಕಾರ ಇದರಲ್ಲಿ ವಿಫಲವಾಗಿದೆಂದರು.

ಈ ವಿಷಯದಲ್ಲಿ ರಾಜ್ಯ ಸರ್ಕಾರವಷ್ಟೇ ವಿಫಲ ಅಲ್ಲ. ಈ ಸಮುದಾಯಕ್ಕೆ ಸೇರಿದ, ಸಮುದಾಯದ ಮೀಸಲಾತಿಯಿಂದ ಮತ ಪಡೆದು ಆಯ್ಕೆಯಾದ ಶಾಸಕರು, ಸಂಸದರು, ವಿಧಾನ ಪರಿಷತ್ ಸದಸ್ಯರು, ಸಚಿವರೂಸಹ ಮೌನವಾಗಿರುವುದು ಸರಿಯಲ್ಲ. ನಮ್ಮ ಓಟು ನಿಮಗೆ ಬೇಕೆಂದರೆ ಮೊದಲು ಮೀಸಲಾತಿ ವಿಷಯದಲ್ಲಿ ಬಾಯಿ ಬಿಡಿ. ಓಟಿಗೋಸ್ಕರ ನಿಮ್ಮ ನಾಟಕ ಇನ್ನು ನಮ್ಮ ಮುಂದೆ ನಡೆಯಲ್ಲ. ನಾವು ಜಾಗೃತರಾಗಿದ್ದೇವೆ. ಜಾಗೃತ ಮಾಡುತ್ತಿದ್ದೇವೆ. ಯಾವುದೇ ಪರಿಸ್ಥಿತಿ ಎದುರಿಸಲು ಸಿದ್ದರಾಗಿದ್ದೇವೆ.

ಸಮಾಜದ ಮೀಸಲಾತಿಯಲ್ಲಿ ಎಂ.ಎಲ್.ಎ, ಎಂಪಿ, ಸಚಿವರಾಗುವುದು ಜನತೆ ಮತ್ತು ಸರ್ಕಾರದ ಮಧ್ಯೆ ಸೇತುವೆಯಾಗಿ ಕೆಲಸ ಮಾಡಬೇಕು. ಬರೀ ಹಣ ಮಾಡುವುದು, ಮಜಾ ಮಾಡುವುದಕ್ಕೆ ಅಲ್ಲ ಎಂದು ಎಸ್ಟಿ ಸಮುದಾಯದ ಜನಪ್ರತಿನಿಧಿಗಳಿಗೆ ಕುಟುಕಿದರು. ವಾಲ್ಮೀಕಿಗಳಿಂದ ಓಟು ಹಾಕಿಸಿಕೊಂಡ ಎ ರೆಡ್ಡಿ, ಬಿ ರೆಡ್ಡಿಗಳು ವಾಲ್ಮೀಕಿ ಜನಾಂಗದ ಅಭಿವೃದ್ಧಿಗೆ ನಿಮ್ಮ ಹೋರಾಟ ಏನು ಎಂದು ಪ್ರಶ್ನಿಸಿ. ಏನು ನೀವು ಯಾರಿಗಾದರೂ, ಬೋರವೆಲ್, ಟ್ರಾಕ್ಟರ್, ಸ್ಕಾಲರ್ಶಿಪ್ ಕೊಡೊಸಿದ್ದೀರಾ ಎಂದರು.

ಎಸ್ಸಿಗಳು ಸಹ ಒಳ ಮೀಸಲಾತಿಗಾಗಿ ಕಿತ್ತಾಡುತ್ತಿದ್ದಾರೆ. ಅದು ಬಿಟ್ಟು ಇಲ್ಲಿ ಶೇ 2 ಮೀಸಲಾತಿ ಅನುಷ್ಟಾನಕ್ಕೆ ಬರದ ಬಗ್ಗೆ ಹೋರಾಟ ಮಾಡಬೇಕು ಎಂದರು. ಈ ಕುರಿತು ಸಮುದಾಯದೊಂದಿಗೆ ತಾವು. ಮೇ ನಲ್ಲಿ ಅಹಿಂಸಾತ್ಮಕ ಹೋರಾಟ ನಡೆಸಲಿದೆಂದು ಹೇಳಿದರು ಸುದ್ದಿಗೋಷ್ಟಿಯಲ್ಲಿ ಸಮುದಾಯದ ಮುಖಂಡರುಗಳಾದ ನರಸಿಂಹಯ್ಯ, ರಾಜಣ್ಣ, ವೆಂಕಟೇಶ್ ನಾಯ್ಕ, ಹಂವಂಬಾವಿ ಲೋಕೇಶ್ ನಾಯಕ್, ವೆಂಕೇಶ್ ಹೆಗಡೆ, ಜೋಳದರಾಶಿ ತಿಮ್ಮಪ್ಪ, ಶ್ರೀರಾಮುಲು, ಹನುಂಮತರಾಯಪ್ಪ, ಎರ್ರಿಸ್ವಾಮಿ ಮೊದಲಾದವರು ಇದ್ದರು.

# ಬಿಸಿಲಿನ ಧಗೇಯಲ್ಲಿ ಬಾರದ ಶುದ್ಧ ಕುಡಿಯುವ ನೀರಿನ ಘಟಕ



• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ಜಿಲ್ಲೆ ಸಂಡೂರು ತಾಲೂಕು ತೋರಣಗಲ್ಲು ಗ್ರಾಮದ ಒಂದನೇ ವಾರ್ಡ್ ಜನತಾ ಕಾಲೋನಿಯಲ್ಲಿ ಆಸ್ಪತ್ರೆಯಲ್ಲಿರುವ ಕುಡಿಯುವ ನೀರಿನ ಫಿಲ್ಟರ್ ನೀರು ಘಟಕ ಆರು ತಿಂಗಳ ಹಿಂದಗಡೆ ಕೆಟ್ಟು ಹೋಗಿದೆ ಎಂದು. ದಿನಾಂಕ 26.01.2026 ರಂದು ತೋರಣಗಲ್ಲು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಪೀಲ್ಟರ್ ನೀರು ಘಟಕ ಕೆಟ್ಟು ಹೋಗಿದೆ ಎಂದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಗ್ರಾಮ ಪಂಚಾಯಿತಿ ಮುಂದೆ ಪ್ರತಿಭಟನೆ ಮಾಡಿ ಮನವಿ ಪತ್ರ ಸಾರ್ವಜನಿಕರು ನೀಡಿದ್ದರು.

ಆದನಂತರ ಮೋಟಾರ್ ಗಳು ಕೆಟ್ಟು ಹೋಗಿದೆ ಎಂದು ಮೋಟರುಗಳನ್ನು ಅಳವಡಿಸಿ ಹೊಸ ಫಿಲ್ಟರ್ ಮತ್ತು ಸಾಮಾನುಗಳನ್ನು ಹಾಕಿದ್ದೇವೆ ಎಂದು ಲಕ್ಷಗಟ್ಟಲೆ ಬಿಲ್ ಪಾಸ್ ಮಾಡಿರುವ ವಂಚನೆಯಾಗಿತ್ತಿದ್ದು ಮತ್ತು ಸರಿಯಾಗಿ ಫಿಲ್ಟರ್ ಆಗದೆ ನೀರು ಬರುತ್ತಿದ್ದು. ಇದನ್ನು ಸಂಪೂರ್ಣವಾಗಿ ತನಿಖೆ ಒಳಪಡಿಸಬೇಕು.

ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು 15 ರಿಂದ 20 ದಿನಗಳು ಕಳೆದಿದೆ ಈಗಾಗಲೇ ಫಿಲ್ಟರ್ ಮಿಷನ್ ಕೆಟ್ಟು ಹೋಗಿದ್ದು.

ಸಾರ್ವಜನಿಕರು ಖಾಸಗಿ ಫಿಲ್ಟರ್ ನೀರಿಗೆ 10 ರೂ ತರಲಾರದೆ ಕೊಳಾಯಿ ನೀರಿನ ಅವಲಂಬಿಸಿದ್ದಾರೆ. ಕೊಳಯಿ ನೀರು ವಾಸನೆ ಬರುತ್ತಿದ್ದು ಆ ನೀರು ಕುಡಿದರೆ ಸಾರ್ವಜನಿಕರಿಗೆ ಏನಾದರೂ ತೊಂದರೆ– ಯಾದರೆ ಯಾರ ಹೊಣೆಗಾರರು? ಸಂಬಂಧಪಟ್ಟ ಅಧಿಕಾರಿಗಳು ಫಿಲ್ಟರ್ ನೀರನ್ನು ಸರಿಪಡಿಸಬೇಕು.

ತನಿಕೆ ನಡೆಸಬೇಕು ಇಲ್ಲದಿದ್ದರೆ ಪಂಚಾಯಿತಿ ಮುಂದೆ ಉಗ್ರವಾದ ಹೋರಾಟವನ್ನು ಹಮ್ಮಿಕೊಳ್ಳಲಾಗುವುದೆಂದು ಈ ಪತ್ರಿಕೆ ಹೇಳಿಕೆ ಮೂಲಕ ಸಂಬಂಧಟ್ಟ ಅಧಿಕಾರಿಗಳಿಗೆ ಡಿವೈಎಫ್ಐ ಜಿಲ್ಲಾ ಅಧ್ಯಕ್ಷರು ಯು.ಎರ್ರಿಸ್ವಾಮಿ

ಎ.ಸ್ವಾಮಿ ಸಂಡೂರು ತಾಲೂಕು ಸಿಪಿಐ (ಎಂ)ಪಕ್ಷದ ಕಾರ್ಯದರ್ಶಿ. ಯು.ಎರ್ರಿಸ್ವಾಮಿ ಡಿವೈಎಫ್ಐಜಿಲ್ಲಾ ಅಧ್ಯಕ್ಷರು ಸ್ವಾಮಿ ಜಿಲ್ಲಾ ಕಾರ್ಯದರ್ಶಿ ಬಿಪಿ ನವೀನ್ ಜಿಲ್ಲಾ ಖಜಾಂಚಿ ಜಿ ಎನ್ ಎರ್ರಿಸ್ವಾಮಿ ಜಿಲ್ಲಾ ಕ್ರೀಡಾ ಅಧ್ಯಕ್ಷರು ಎ.ತಿಪ್ಪರುದ್ರ ತಾ ಅಧ್ಯಕ್ಷರು ನಾಗಭೂಷಣ್ ಸೇರಿದಂತೆ ಸ್ಥಳೀಯ ನಿವಾಸಿಗಳಿಳು ಎಚ್ಚರಿಕೆ ನೀಡಿದ್ದಾರೆ

# ಬಸವಣ್ಣನ ಪುತ್ಥಳಿಗೆ ಬಣ್ಣ



• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ನಗರದ ಹೆಚ್.ಆರ್.ಗವಿಯಪ್ಪ ಸರ್ಕಲ್ ನಲ್ಲಿರುವ ಸಿಂಹಾಸನಾರೂಡ ಬಸವೇಶ್ವರ ಪುತ್ಥಳಿಗೆ ನಾಳೆ ಬಸವ ಜಯಂತಿ ಹಿನ್ನಲೆಯಲ್ಲಿ ಬಣ್ಣ ಬಳಿಯಲಾಗಿದೆ. ಪಾಲಿಕೆಯಿಂದ ಬಸವ ಜಯಂತಿಯನ್ನು ಆಚರಿಸಲು,

ನಗರದಲ್ಲಿ ಮಾಸಿದ್ದ ಬಸವಣ್ಣನ ಪುತ್ಥಳಿಗೆ ಮೆರಗು ನೀಡುವಂತೆ ಬಣ್ಣ ಬಳಿದಿರುವುದಲ್ಲದೆ. ಸುತ್ತಮುತ್ತಲ ಪ್ರದೇಶ ಸ್ವಚ್ಚಗೊಳಿಸಿ ಸುಂದರಗೊಳಿಸಲಾಗಿದೆ.

ನಾಳೆ ಇಲ್ಲಿ ಗಣ್ಯರು ಪುತ್ಥಳಿಗೆ ಮಾಲಾರ್ಪಣೆ ಮಾಡಿ ನ ಸಲ್ಲಿಸಲಿದ್ದಾರೆ.

# ಅಕ್ರಮವಾಗಿ ಕಾಟೆಚ್ಚು ಮರವನ್ನು ಸಂಗ್ರಹ

• ಮಲ್ಲಮ್ಮ ನುಡಿ ವಾರ್ತೆ, ಹೊಳೆನರಸೀಪುರ

ಪಟ್ಟಣದ ಚಿಟ್ಟನಹಳ್ಳಿ ಹೌಸಿಂಗ್ ಬೋರ್ಡ್ ನಲ್ಲಿರುವ ಗೋಡನ್ ಒಂದರಲ್ಲಿ ಅಕ್ರಮವಾಗಿ ಕಾಟೆಚ್ಚು ಮರವನ್ನು ಸಂಗ್ರಹ ಮಾಡಿ ಮರದ ತುಂಡುಗಳ ತೊಗಟೆ ತೆಗೆದು ಹೊರ ರಾಜ್ಯಗಳಿಗೆ ಸಾಗಣೆ ಮಾಡುವ ಪ್ರಕರಣದಲ್ಲಿ ಅರಣ್ಯ ಇಲಾಖೆಯ ಕೆಲವು ಅಧಿಕಾರಿಗಳು ಕೈಜೋಡಿಸಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರೆಂದು ಕಂಡು ಬಂದ ಅಧಿಕಾರಿಗಳನ್ನು ಅಮಾನತುಗೊಳಿಸಿ , ವರದಿ ನೀಡುವಂತೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಸಿ ಸಿ ಎಫ್ ಗೆ ಪತ್ರ ಬರೆದು ಸೂಚನೆ ನೀಡಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. ನಕಲಿ ಪಾಸ್ ಬಳಸಿ ಬೀದರ್ ನಿಂದ ಕಾಟೆಚ್ಚು ಮರದ ತುಂಡುಗಳನ್ನು ಹೊಳೆನರಸೀಪುರಕ್ಕೆ ತಂದು ಸಂಗ್ರಹಿಸಿ ಹೊರ ರಾಜ್ಯಗಳಿಗೆ ಸಾಗಾಟ ಮಾಡುತ್ತಿದ್ದ, ಇವರಿಗೆ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ನೇರವಾಗಿ ಭಾಗಿಯಾಗಿದ್ದಾರೆ ಎಂಬ ದೂರಿನ ಹಿನ್ನೆಲೆಯಲ್ಲಿ ಆರೋಪ ಕೇಳಿ ಬಂದಿದೆ. ಈ ಸಂಬಂಧ ಸಿಸಿಎಫ್ ತಂಡ ಸೂಕ್ತ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹಾಸನ ಜಿಲ್ಲಾ ಅರಣ್ಯ ಇಲಾಖೆಗೆ ಅರಣ್ಯ ಸಚಿವರು ಪತ್ರ ಬರೆದು ತಿಳಿಸಿದ್ದಾರೆ. ಪಟ್ಟಣದ ಖಾಸಗಿ ಸ್ಥಳದಲ್ಲಿ ಹೊರ ಜಿಲ್ಲೆಗಳಿಂದ ಅಕ್ರಮವಾಗಿ ಮರದ ತುಂಡು ಗಳನ್ನು ತಂದು ತೊಗಟೆ ತೆಗೆದು ಹೊರ ರಾಜ್ಯಗಳಿಗೆ ಮಾರಾಟ ಮಾಡುವ ಜಾಲ ಕಂಡು ಬಂದಿದೆ ಎಂಬ ಸಂಶಯದಿಂದ ಪರಿಶೀಲನೆ ಒಳಪಟ್ಟಾಗ ನಕಲಿ ಪಾಸ್ ಬಳಸಿ ಕಾಟ್ಟೆಚ್ಚು ಮರಗಳನ್ನು ಅಕ್ರಮವಾಗಿ ಸಾಗಾಟ ಮಾಡುವ ಪ್ರಕರಣ ಬಯಲಿಗೆ ಬಂದಿತು. ಔಷಧೀಯ ಗುಣ ಹೊಂದಿರುವ ಈ ಮರದ ಕ್ರಮ ಸಾಗಾಟದ ವಿರುದ್ಧ ಪತ್ರಿಕೆಗಳಲ್ಲಿ ವರದಿಯಾದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು ವಶಕ್ಕೆ ಪಡೆದು ಕೋಟ್ಯಂತರ ಬೆಲೆಬಾಳುವ ಮರವಾಗಿದೆ ಎಂದು ದೃಢೀಕರಿಸಿದ್ದರು. ಪ್ರಕರಣದ ಸೂಕ್ಷ್ಮತೆಯನ್ನ ಅರಿತ ಅರಣ್ಯ ಸಚಿವರು ಪತ್ರ ಬರೆಯುವ ಮೂಲಕ ಪ್ರಕರಣ ಹೊಸ ತಿರುವು ಪಡೆದುಕೊಳ್ಳುವ ಮೂಲಕ ತನಿಖೆ ವೇಗ ಪಡೆದುಕೊಂಡಿದೆ.

# ಬಸವಣ್ಣ ದೇವಸ್ಥಾನ ಮಹಿಳೆಯರಿಂದ ತನಾರತಿ ಮೆರವಣಿಗೆ

• ಮಲ್ಲಮ್ಮ ನುಡಿ ವಾರ್ತೆ , ಮುದಗಲ್

ನಂದವಾಡಗಿ ಡಾ!! ಚನ್ನಬಸವ ಶಿವಾಚಾರ್ಯ ಶಿವಯೋಗಿಗಳ ದಿವ್ಯಸಾನಿಧ್ಯದಲ್ಲಿ ನೀಲಕಂಠೇಶ್ವರ ದೇವಸ್ಥಾನದಿಂದ ಬಸವೇಶ್ವರ ದೇವಸ್ಥಾನದವರೆಗೆಮಹಿಳೆಯರಿಂದ ಶ್ರದ್ಧೆ ಭಕ್ತಿಯಿಂದ ತನಾರತಿ ಮೆರವಣಿಗೆ ಜರುಗಿತು.

ತನಾರತಿಯಮೆರವಣಿಗೆಪಟ್ಟಣದ ಪ್ರಮುಖ ಬೀದಿಗಳ ಮೂಲಕ ವಿವಿಧ ವಾದ್ಯ ಮೇಳಗಳೊಂದಿಗೆ ಸದ್ದು ಮಾಡುತ್ತಾ ಸಾಗಿತು. ನೂರಾರು ಮಹಿಳೆಯರು ತನಾರತಿಯನ್ನು ಹೊತ್ತು ಸಾಗಿದರು. ಇದೇ ಸಂದರ್ಭದಲ್ಲಿ ತನಾರತಿಯ ಮಹತ್ವ ಮತ್ತು ಅದರ ಆಚರಣೆಯ ಕುರಿತು ನೀಲಕಂಠೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ನಂದವಾಡಗಿಯ

ಪೂಜ್ಯರು ಮಾಹಿತಿ ನೀಡಿ ಆಶೀರ್ವದಿಸಿದರು. ಚನ್ನಬಸವ ಶಿವಾಚಾರ್ಯ ಹಾಗೂ ಬಸವಣ್ಣ ಭಕ್ತಾದಿಗಳು ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡುವ ಮೂಲಕ ಗೌರವ ಸಮರ್ಪಿಸಿದರು.

ದೇವಸ್ಥಾನದ ಅಧ್ಯಕ್ಷ ಮಲ್ಲಪ್ಪ ಮಾಟೂರು, ಶಿವಾನಂದಪ್ಪ ಸುಂಕದ, ಅಮರೇಶ ತಲೇಖಾನ್, ಲಿಂಗಪ್ಪ ಹಣಗಿ, ವೀರೇಶ ಖೇಣೇದ್, ಸಂಗಮೇಶ ಸರಗಣಾಚಾರಿ, ಮಹಾಂತೇಶ ಗದ್ದಿ, ಸಂತೋಷ ಸುರಪೂರ,

ರಾಚಪ್ಪಗಬ್ಬುರ್, ವೀರಭದ್ರಯ್ಯ ಸ್ವಾಮಿ, ವೀರೇಶ ಗದ್ದಿ, ಶಶಿಕಲಾ ಭೋವಿ, ಸುವರ್ಣ ಸುಂಕದ, ತೋಟಮ್ಮ ಹಳೇಪೇಟೆ, ವಿಜಯಲಕ್ಷ್ಮೀ, ಮಾಟೂರು, ಶಿವಮ್ಮ ಗದ್ದಿ ಸೇರಿದಂತೆ ಇತರರಿದ್ದರು.



# ಅಂಬೇಡ್ಕರ್ ಅವರು ಯುಗದ ಪ್ರಜ್ಞೆ: ಬಿರಾದಾರ



• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ

ಭಾರತ ರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರು ತಮ್ಮ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಚಿಂತನೆಗಳನ್ನು ಲೋಕಕ್ಕೆ ನೀಡುವ ಮೂಲಕ ಇಡೀ ಯುಗವನ್ನು ಮತ್ತು ಜಗತ್ತನ್ನು ಪ್ರಜ್ಞಾಪೂರ್ವಕವಾಗಿ ಇಟ್ಟಿದ್ದಾರೆ ಎಂದು ಶ್ರೀ ಬಸವೇಶ್ವರ ಪದವಿ ಕಾಲೇಜಿನ ಪ್ರಾಚಾರ್ಯರಾದ ಭೀಮಾಶಂಕರ ಬಿರಾದಾರ ಹೇಳಿದರು. ಇಲ್ಲಿನ ಶ್ರೀ ಬಸವೇಶ್ವರ ಪದವಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಸಂವಿಧಾನ ಶಿಲ್ಪಿ ಡಾ ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನ ಪ್ರಯುಕ್ತ ಅಂಬೇಡ್ಕರ್ ಚಿಂತನೆಯ ಆಯಾಮಗಳು ಕುರಿತ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಂಬೇಡ್ಕರ್ ಅವರ ಬರಹಗಳ ಅನುಸಂಧಾನ ಇಂದು ಹೆಚ್ಚು ಅಗತ್ಯವಾಗಿದೆ ಎಂದರು. ಈ ದೇಶದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಅರಿಯಲು ಅಂಬೇಡ್ಕರ್ ಅವರ ತತ್ವಸಿದ್ಧಾಂತಗಳನ್ನು ವೈಧಾನಿಕತೆಯಾಗಿ ಬೆಳೆಸಿಕೊಳ್ಳಬೇಕು.

ಅವರು ಸಂವಿಧಾನದ ಮೂಲಕ ಮಾತನಾಡುವ, ಸಮಾನತೆಯ, ಸ್ವಾತಂತ್ರ್ಯದ ಹಕ್ಕನ್ನು ನೀಡಿದ ದಾರ್ಶನಿಕ. ಅವರು ಪ್ರಬುದ್ಧ ಭಾರತ ರೂಪಿಸಿದ ಶಿಲ್ಪಿ ಎಂದರು. ಕಲಬುರ್ಗಿಯ ನೂತನ ವಿದ್ಯಾಲಯ ಪಿಯು ಕಾಲೇಜಿನ ಅಧ್ಯಾಪಕರಾದ ಡಾ ಶಿವಾಜಿ ಮೇತ್ರೆ ಮಾತನಾಡಿ ನಮ್ಮ ದೇಶದ ತಳ ಸಮುದಾಯಗಳ, ಸಮಾಜದ ಅಂಚಿನಲ್ಲಿರುವ ಜನರಿಗೆ ಅಸ್ಮಿತೆಯನ್ನು ತಂದು ಕೊಟ್ಟಿದ್ದು ಬಸವಣ್ಣನವರ ನಂತರ ಅಂಬೇಡ್ಕರ್ ಅವರು. ಶಿಕ್ಷಣಕ್ಕೆ ಮಹತ್ವ ನೀಡಿ, ಆರ್ಥಿಕ ಸ್ವಾವಲಂಬನೆಗೆ ಆದ್ಯತೆ ನೀಡಿ, ಮಾನವೀಯತೆಯ ಪಾಠ ಕಲಿಸಿದ ಪ್ರಖರ ಚಿಂತಕರು ಅಂಬೇಡ್ಕರ್ ಅವರು ಎಂದರು. ಶ್ರೀ ಬಸವೇಶ್ವರ ಪಿಜಿ ಕಾಲೇಜು ಪ್ರಾಚಾರ್ಯರಾದ ಡಾ. ಶಾಂತಲಾ ಪಾಟೀಲ ಮಾತನಾಡಿ, ಡಾ ಅಂಬೇಡ್ಕರ್ ಅವರು ಈ ಜಗದ ಬೆಳಕು. ಪ್ರಖರ ವೈಚಾರಿಕ ಚಿಂತಕರು. ಇಡೀ ಜಗತ್ತಿಗೆ ಮಾದರಿಯಾದವರು. ಅಸ್ಪೃಶ್ಯತಾ ವಿರೋಧಿ ಚಿಂತನೆ ಗಟ್ಟಿಯಾಗಿ ಹೇಳಿದವರು ಎಂದರು. ಜೀವ ವಿಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ. ಅಶೋಕ ರೆಡ್ಡಿ ಗದಲೇಗಾಂವ ಮಾತನಾಡಿದರು. ಈ ಸಂದರ್ಭದಲ್ಲಿ ಶ್ರೀನಿವಾಸ ಉಮಾಪುರೆ, ವಿವೇಕಾನಂದ ಶಿಂಧೆ, ರೋಷನ್ ಬಿ, ಪ್ರಭಾಕರ ನೌವಗಿರೆ, ನಾಗರಾಜ್ ನಾಸೆ, ಪ್ರೇಮಲಾ ತಾಂಬೋಳೆ, ನೀಲಮ್ಮ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಡಾ. ಬಸವರಾಜ ಖಂಡಾಳೆ ನಿರೂಪಿಸಿ ಸ್ವಾಗತಿಸಿದರು. ಗಂಗಾಧರ ಸಾಲಿಮಠ ವಂದಿಸಿದರು.

# ಪ್ರಕೃತಿ ವಿಕೋಪಕ್ಕೆ ಆರು ಆಕಳು ಬಲಿ



• ಮಲ್ಲಮ್ಮ ನುಡಿ ವಾರ್ತೆ, ಗಂಗಾವತಿ

ಗಂಗಾವತಿ ತಾಲೂಕಿನಾದ್ಯಂತ ಅಕಾಲಿಕ ಮಳೆ ಸುರಿದಿದ್ದು, ತಾಲೂಕಿನ ವ್ಯಾಪ್ತಿಯ ಸಿದ್ದಿಕೇರಿಯಲ್ಲಿ ಅಲೆಮಾರಿಗಳು ಹಾಕಿದ ಕುರಿಹಟ್ಟಿಯ ಮೇಲೆ ಗುಡುಗು ಸಿಡಿಲು ಆರ್ಭಟಿಸಿದ ಶಬ್ದ ಕ್ಕೆ ಆರು ಆಕಳು ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ನಡೆದಿದೆ.

ಜಾನುವಾರುಗಳನ್ನು ಕನಕಗಿರಿ ತಾಲ್ಲೂಕಿನ ಬಂಕಾಪುರಕ್ಕೆ ಸೇರಿದ ಪಾರ್ವತಮ್ಮ ಸಣ್ಣ ಯಂಕಪ್ಪ ಬಂಡ್ರ , ನಾಗೇಶ ಸಣ್ಣ ತಿಮಪ್ಪ ಬಂಡ್ರ ಅವರಿಗೆ ಸೇರಿದ ತಲಾ 3 ಮರಿ ಹಾಕಲು ಬಂದಂತಹ ದೊಡ್ಡ ಆಕಳು ಸಾವನ್ನಪ್ಪಿವೆ. ಒಂದೊಂದು ಜಾನುವಾರು ಸುಮಾರು 60 ಸಾವಿರ ಮೊತ್ತವಿದ್ದು, ಒಟ್ಟು 3.50 ಲಕ್ಷ ಹಾನಿಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಲೆಮಾರಿ ಜನಾಂಗಕ್ಕೆ ಸೇರಿದ ಈ ಕುಟುಂಬಗಳು, ಕುರಿ ಮತ್ತು ಆಕಳುಗಳನ್ನು ಒಂದು ಊರಿನ ಸ್ಥಳದಿಂದ ಮತ್ತೊಂದು ಊರಿನ ಸ್ಥಳಕ್ಕೆ ಮೇಯಲು ಕರೆದುಕೊಂಡು ಹೋಗುತ್ತವೆ. ಹೊಲಗಳಲ್ಲಿ ಕುರಿಹಟ್ಟಿ ಹಾಕಿ ಜಾನುವಾರುಗಳನ್ನು ಮೇಯಲು ಬಿಡುತ್ತಾರೆ. ಕಳೆದ ಮೂರು ದಿನಗಳ ಹಿಂದೆ ಸಿದ್ದಿಕೇರಿಯ ಕೋಲ್ಕಾರ ಅಯ್ಯಪ್ಪ ಎಂಬುವವರ ಹೊಲಕ್ಕೆ ಆಗಮಿಸಿ ಅಲ್ಲಿಯೆ ಕುರಿಹಟ್ಟಿ ಹಾಕಲಾಗಿತ್ತು. ಜಾನುವಾರುಗಳನ್ನು

ರಾತ್ರಿ ಹೊಲದಲ್ಲಿ ಕಟ್ಟಿ ಹಾಕಿದಾಗ ಮಧ್ಯರಾತ್ರಿ ಸುರಿದ ಮಳೆ ಹಾಗೂ ಸಿಡಿಲಿಗೆ ಜಾನುವಾರು ಮೃತಪಟ್ಟಿವೆ ಎಂದು ಗೊತ್ತಾಗಿದೆ. ಸ್ಥಳೀಯರು ಸಹಾಯಕ್ಕಾಗಿ ಸೇರಿದರು ಅಲ್ಲಿನ ನಗರಸಭೆ ಸದಸ್ಯರಾದ ಶರಬೋಜಿ ಜಿ ರಾವ್ ಗಾಯಕ್ವಾಡ್ ಅವರು ಮುಂದಿನ ಕಾರ್ಯಕ್ರಮಕ್ಕೆ ನಗರಸಭೆ ವಾಹನದ ವ್ಯವಸ್ಥೆ ಮಾಡಿಕೊಡಲು ಹೇಳಿದ್ದಾರೆಂದು ತಿಳಿಸಿದರು.

ಈ ಸಂದರ್ಭದಲ್ಲಿ ನಾಗೇಶ್ ಬಂಡ್ರ, ಪಾರ್ವತಮ್ಮ ಯಂಕಪ್ಪ ಬಂಡರ್, ವೀರೇಶ್ ಕೋಲ್ಕಾರ್ ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

# ಅಧಿಕಾರಿಗಳು ಅಲೆಮಾರಿ ಸಮುದಾಯಗಳಿಗೆ ನಿಗದಿಪಡಿಸಿದ ಯೋಜನೆಗಳು ಸರಿಯಾದ ಸಮಯಕ್ಕೆ ತಲುಪಿಸಿ: ಪಲ್ಲವಿ

ಮಲ್ಲಮ್ಮ ನುಡಿ ವಾರ್ತೆ ಬೀದರ,

ಅಲೆಮಾರಿ ಸಮುದಾಯಗಳಿಗೆ ನಿಗದಿಪಡಿಸಿದ ಯೋಜನೆಗಳು ಸರಿಯಾದ ಸಮಯಕ್ಕೆ ಹಾಗು ಕಾಲಮಿತಿಯೊಳಗಾಗಿ ಫಲಾನುಭವಿಗಳಿಗೆ ತಲುಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಪ್ರಾಮಾಣಿಕವಾಗಿ ಪ್ರಯತ್ನಿಸುವಂತೆ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವರದ್ಧಿ ನಿಗಮದ ಅಧ್ಯಕ್ಷರಾದ ಪಲ್ಲವಿ ಜಿ. ಅವರು ಅಧಿಕಾರಿಗಳಿಗೆ ಸೂಚಿಸಿದರು.

ಅವರು ಶನಿವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಿವಿಧ ಯೋಜನೆಗಳ ಕುರಿತು ಜಿಲ್ಲಾ ಅನುಷ್ಠಾನ ಸಮಿತಿ ಸದಸ್ಯರು ಹಾಗೂ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಮತ್ತು ಸಮಾಲೋಚನೆ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಈಗಾಗಲೇ ಸ್ಥಗಿತಗೊಂಡ ಅಲೆಮಾರಿ ಸಮುದಾಯ ಭವನಗಳು ನಿಗಮದಿಂದ ಅನುದಾನ ನೀಡಿ ಪೂರ್ಣಗೊಳಿಸಲು ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು. ಹೋದ ವರ್ಷ ಕೂಡ ಏ. 18ರಂದು ನಾನು ಬೀದರ್ ಜಿಲ್ಲಾ ಪ್ರವಾಸ ಕೈಗೊಂಡಿದ್ದೆ. ಆ ಸಂದರ್ಭದಲ್ಲಿ ಬೀದರ್ ಜಿಲ್ಲೆ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಪ್ರವಾಸ ಮಾಡಿ ಅಲೆಮಾರಿ ಸಮುದಾಯದವರ ವಾಸಸ್ಥಳಕ್ಕೆ ಭೇಟಿ ನೀಡಿದ್ದೇನೆ. ಅವರ ಸಮಸ್ಯೆಗಳನ್ನು ತಿಳಿದುಕೊಂಡಿದ್ದೆ. ಇವಾಗ ಕೂಡ ಅಧಿಕಾರಗಳ ಜೊತೆಗೆ ಹೋಗಿ ಪರಿಶೀಲನೆ ಮಾಡಿದ್ದೇನೆ ಎಂದರು.

ಅಲೆಮಾರಿ ಸಮುದಾಯದವರಲ್ಲಿ ಇರುವ ಸಮಸ್ಯೆ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ತೆಗೆದುಕೊಳ್ಳಲು ಈಗಾಗಲೇ ನಾನು ನಮ್ಮ ಸಮಾಜ ಕಲ್ಯಾಣ ಇಲಾಖೆ ಮತ್ತು ಇದಕ್ಕೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗೆ



ನಿರ್ದೇಶನನೀಡಿ, ಕಾಲಮಿತಿಯೊಳಗಾಗಿ ಆ ಸಮಸ್ಯೆಯನ್ನು ಬಗೆಹರಿಸುವುದಾಗಿ ತಿಳಿಸಿದ್ದೇನೆ ಎಂದು ಅವರು ಹೇಳಿದರು.

ನಾವು ಭೇಟಿ ನೀಡಿದ ಸ್ಥಳಗಳಲ್ಲಿ ಯಾವ ಯಾವ ರೀತಿಯ ಕಾರ್ಯಕಾರಿಗಳನ್ನು ಕೈಗೊಂಡಿದ್ದಾರೆ, ಯಾವ ರೀತಿಯಲ್ಲಿ ಸಮಸ್ಯೆಗಳನ್ನು ಬಗೆಹರಿಸಿದ್ದಾರೆ ಎನ್ನುವುದನ್ನು ಪರಿಶೀಲಿಸಿದ್ದೇನೆ. ಚೌಳಿ ಕಮಾನ್ ಹತ್ತಿರದಲ್ಲಿರುವ ಸಿಂಧೋಳ್ ಮತ್ತು ಮಾಂಗಾರವಾಡಿ 84 ಕುಟುಂಬಗಳಿಗೆ ಅಲಿಯಂಬರ್ ಗ್ರಾಮದಲ್ಲಿ ಎರಡು ಎಕರೆ ಭೂಮಿಯನ್ನು ನಿಗದಿ ಹಾಗೂ ಲೇಔಟ್ ಪ್ಲಾನಿಂಗ್ ಕೂಡ ಮಾಡಿ ಪ್ರಸ್ತಾವನೆ ನಿಗಮಕ್ಕೆ ಕಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಈಗಾಗಲೇ ಎರಡು ಎಕರೆ ಭೂಮಿಯನ್ನು ನಿಗದಿ ಮಾಡಿದ್ದಾರೆ. ಆದರೆ ಲೇಔಟ್ ಪ್ಲಾನಿಂಗ್ ಮಾಡಿ ಪ್ರಸ್ತಾವನೆ ನಿಗಮಕ್ಕೆ ಕಳಿಸಿರುವುದಿಲ್ಲ. ಇದರ ಬಗ್ಗೆ ಚರ್ಚಿಸಿ ಲೇಔಟ್ ಪ್ಲಾನಿಂಗ್ ಮಾಡಿ ಅದಕ್ಕೆ ಎಷ್ಟು ಅನುದಾನ ಬೇಕು ಅಷ್ಟು ನಮ್ಮ ನಿಗಮದಿಂದ ನೀಡುತ್ತೇವೆ ಎಂದು ಭರವಸೆ ನೀಡಿದ್ದೇನೆ. ಈಗಾಗಲೇ ಚೌಳಿ ಕಮಾನ ಹತ್ತಿರ 84 ಕುಟುಂಬಗಳಿಗೆ ಶೌಚಾಲಯಕ್ಕೆ ಸಮಸ್ಯೆಯಾಗುತ್ತಿರುವುದರಿಂದ ಬೀದರ ಮಹಾನಗರ ಪಾಲಿಕೆಯ ಆಯುಕ್ತರಿಗೆ ಕರೆ ಮಾಡಿ ಮೊಬೈಲ್ ಶೌಚಾಲಯವನ್ನು ಒದಗಿಸಲು ಸೂಚಿಸಿದ್ದೇನೆಂದರು.

ಈ ಸಭೆಯಲ್ಲಿ ಜಿಲ್ಲಾಧಿಕಾರಿಯಾದ ಶಿಲ್ಪಾ ಶರ್ಮಾ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಲೆಮಾರಿ ಅಭಿವೃದ್ಧಿ ನಿಗಮದ ಜಂಟಿ ನಿರ್ದೇಶಕರಾದ ಆನಂದಕುಮಾರ ಏಕಲವ್ಯ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಯೋಗೇಶ, ಎಲ್ಲಾ ತಾಲ್ಲೂಕಿನ ತಹಸೀಲ್ದಾರರು, ಅಲೆಮಾರಿ ಸಮುದಾಯದ ಅನುಷ್ಠಾನ ಸಮಿತಿ ಸದಸ್ಯರಾದ ಪಿ.ಟಿ.ಶ್ಯಾಮ, ಶ್ರೀಮತಿ ರೇಖಾ ರಾಕೇಶ, ಮಹೇಶ, ತಿಪ್ಪಣ್ಣ, ಆಕಾಶ ಸೇರಿದಂತೆ ಅಲೆಮಾರಿ ಸಮಾಜದ ಸದಸ್ಯರುಗಳು, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ತಿತರಿದ್ದರು.

# ದಿ ಗೋಲ್ಡನ್ ಗ್ಲೀಮ್ಸ್ ಕಾಲೇಜಿನಲ್ಲಿ 135ನೇ ಅಂಬೇಡ್ಕರ್ ಜಯಂತಿ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ, ಚಿಕ್ಕಬಳ್ಳಾಪುರ



ಅವಕಾಶ ವಂಚಿತ ಭಾರತೀಯರಿಗೆ ಘನತೆಯ ಬದುಕನ್ನು ಕಲ್ಪಿಸುವ ಏಕೈಕ ಉದ್ದೇಶದಿಂದ ತಮ್ಮಿಡೀ ಬದುಕನ್ನು ಅದಕ್ಕಾಗಿ ಮೀಸಲಾಗಿಟ್ಟಿದ್ದ ಸಾಮಾಜಿಕ ನ್ಯಾಯದ ಹರಿಕಾರ ನ್ಯಾಯದ ಹರಿಕಾರ ಡಾ.ಬಾಬಾ ಸಾಹೇಬ ಅಂಬೇಡ್ಕರ್ ಮಾತ್ರ ಎಂದು ಚಿಂತಕ ಉಪನ್ಯಾಸಕ ಎಂ.ಮನಿರಾಜು ಅರಿಕೆರೆ ತಿಳಿಸಿದರು.

ನಗರದ ಗೋಲ್ಡ್‌ಗ್ಲೀಮ್ಸ್ ಕಾಲೇಜಿನಲ್ಲಿ ಏರ್ಪಡಿಸಿದ್ದ ಬಾಬಾ ಸಾಹೇಬ ಅಂಬೇಡ್ಕರ್ ಅವರ 135ನೇ ಜಯಂತಿಗೆ ದೀಪಬೆಳಗುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಅಪ್ರತಿಮ ಜ್ಞಾನಿಯಾಗಿದ್ದ ಬಾಬಾ ಸಾಹೇಬ್ ಅಂಬೇಡ್ಕರ್ ತಮ್ಮಿಡಿ ಬದುಕನ್ನು ದಮನಿತ ಸಮುದಾಯಗಳ ಸಬಲೀಕರಣಕ್ಕಾಗಿ ಬಳಸಿದರು. ಎಲ್ಲರನ್ನೂ ಒಳಗೊಂಡ ಸದೃಢ ಭಾರತ ನಿರ್ಮಾಣಕ್ಕಾಗಿ ಅಂತಃಕರಣದಿಂದ ಮಿಡಿದರು. ಅವರ ಜೀವನ ವ್ಯಕ್ತಿತ್ವ ಹೋರಾಟ ಮತ್ತು ಕೊಡುಗೆಗಳ ಅರಿವಿನ ಅಗತ್ಯತೆ ಮತ್ತು ಅನಿವಾರ್ಯತೆ ಇಂದು ಹೆಚ್ಚಿದೆ. ಸಂವಿಧಾನದ ಶಕ್ತಿ ಮತ್ತು ಸೌಂದರ್ಯ ಅದರ ಅರಿವಿನಲ್ಲಿಯೇ ಇದೆ ಎಂದರು ನಮ್ಮದು ಶ್ರೇಷ್ಠ ಸಂವಿಧಾನ ಎನ್ನುತ್ತೇವೆ. 26 ಜನವರಿ 1950 ಸಂವಿಧಾನವನ್ನು ಅಂಗೀಕರಿಸಿಕೊಂಡ ನಾವು ಈ 76 ವರ್ಷದಲ್ಲಿ 105 ಬಾರಿ ತಿದ್ದುಪಡಿ ಮಾಡಿಕೊಂಡಿದ್ದೇವೆ. ಅಮೆರಿಕದ ಸಂವಿಧಾನಕ್ಕೆ ಹೋಲಿಸಿದರೆ ಭಾರತದ ಸಂವಿಧಾನಕ್ಕೆ ಆದಷ್ಟು ತಿದ್ದುಪಡಿ ಬೇರೆ ಯಾವುದಕ್ಕೂ ಆಗಿಲ್ಲದಿರುವುದು ದುರ್ದೈವ ಎಂದರು.

ಸಂವಿಧಾನವೆಂದರೆ ಕೇವಲ ಪುಸ್ತಕವಲ್ಲ ಭಾರತೀಯರ ಆತ್ಮ. ಭಾರತದ ದಮನಿತರ ಅಶಕ್ತರ, ಶೋಷಿತರ ಬದುಕು ಸಂವಿಧಾನದಲ್ಲಿ ಇದೆ ಎಂದರೆ ತಪ್ಪಾಗಲಾರದು. ಸಂವಿಧಾನ ಎಷ್ಟೇ ಶ್ರೇಷ್ಠವಾಗಿದ್ದರು ಅದನ್ನು ಅನುಷ್ಠಾನ ಮಾಡುವವರು ದುರ್ಬಲರಾಗಿದ್ದರೆ ದುಷ್ಟರಾಗಿದ್ದರೆ ಅವಸಾನ ಖಚಿತ ಎಂದು ಅಂಬೇಡ್ಕರ್ ಹೇಳಿದ್ದರು. ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿದರೆ ಈ ಮಾತು ನಿಜವಾಗುತ್ತಿದೆ ಎಂದರು.

ಮಹಿಳಾ ಮೀಸಲಾತಿ ವಿದೇಯಕದ ಬಗ್ಗೆ ಮಾತನಾಡುವವರು ಖಂಡಿತವಾಗಿ ಹಿಂದೂ ಕೊಡುವಿಲ್ ಬಗ್ಗೆ ಮಾತನಾಡಬೇಕು. ಹಿಂದೂ ಕೋಡ್ ಬಿಲ್ ಭಾರತೀಯ ಮಹಿಳೆಯರ ಆತ್ಮಗೌರವದ ಬಿಲ್ಲಾಗಿ–ತ್ತು. ಲೋಕಸಭೆಯಲ್ಲಿ ಅಂಬೇಡ್ಕರ್ ಅವರನ್ನು ಮಂಡಿಸಿದಾಗ ಸೋಲಾಗವಂತೆ ನೋಡಿಕೊಂಡ ಮನುವಾದಿಗಳೇ ಇಂದು ಈ ಬಗ್ಗೆ ಪುಂಖಾನು ಪುಂಖವಾಗಿ ಮಾತನಾಡುತ್ತಿದ್ದಾರೆ ಎಂದರು

ಅಂಬೇಡ್ಕರರು ಕೇವಲ ಸಂವಿಧಾನವನ್ನು ರಚಿಸಲಿಲ್ಲ ಆ ಮೂಲಕ ಸಮ ಸಮಾಜದ ಆಶಯಗಳನ್ನುಳ್ಳ ಬಲಿಷ್ಠ ಭಾರತವನ್ನು ಕಟ್ಟುವ ಕನಸು ಕಂಡಿದ್ದರು.

ಶೋಷಿತ ಯುವಜನತೆ ರಾಜಕೀಯ ಪ್ರವೇಶ ಮಾಡಿ ಆಳುವ ವರ್ಗವಾದಾಗ ಸಾಮಾಜಿಕ ಅಸಮಾನತೆಗೆ ಮದ್ದರೆಯಬಹುದು, ನ್ಯಾಯ ಪಡೆಯಬಹುದು ಎಂದು ಅಂಬೇಡ್ಕರ್ ಭಾವಿಸಿದ್ದರು ಎಂದರು.

ಸಂವಿಧಾನದಲ್ಲಿರುವ ನ್ಯಾಯ ಸ್ವಾತಂತ್ರ್ಯ ಸಮಾನತೆ ಭ್ರಾತೃತ್ವ ಇವು ಕೇವಲ ಶಬ್ದಗಳಲ್ಲ. ಇವುಗಳ ಅರ್ಥವನ್ನ ಅರಿದು ನಮ್ಮ ಬದುಕಲ್ಲಿ ಅಳವಡಿಸಿಕೊಂಡಾಗ ಸಂವಿಧಾನದ ಘನತೆಯ ಬದುಕು ಪ್ರಾಪ್ತಿಯಾಗಲಿದೆ ಎಂದರು.

ನಮಗೆ ಘನತೆಯ ಬದುಕನ್ನು ಕೊಡಲು ತಮ್ಮಿಡಿ ಕುಟುಂಬವನ್ನು ಬಲಿಕೊಟ್ಟ ಏಕೈಕ ಸ್ವಾತಂತ್ರ್ಯ ಸೇನಾನಿ ಬಾಬಾ ಸಾಹೇಬರು. ಅವರ ಋಣದಲ್ಲಿ ಇಡೀ ದೇಶವಿದೆ. ಹೀಗಾಗಿ ಅವರ ಹುಟ್ಟುಹಬ್ಬ ಭಾರತೀಯರ ಮನೆ ಮನೆಯಲ್ಲಿ ಆಚರಿಸಲ್ಪಡಬೇಕು. ಆಗಲೇ ಸಮ ಸಮಾಜದ ಆಶಯದ ಹಣತೆ ಬೆಳಗಲಿದೆ ಎಂದು ಕರೆ ನೀಡಿದರು

ಖ್ಯಾತ ನ್ಯಾಯವಾದಿ ಶ್ರೀರಾಮಪುರ ನರಸಿಂಹಮೂರ್ತಿ ಮಾತನಾಡಿ ದೇಶ ಮತ್ತು ದೇಶವಾಸಿಗಳ ಭವಿಷ್ಯಕ್ಕಾಗಿ ಸಂವಿಧಾನದ ಮೂಲಕ ಹೊಸ ಭಾಷ್ಯ ಬರೆದ ಧೀಮಂತ ನಾಯಕ ಅಂಬೇಡ್ಕರಾಗಿದ್ದಾರೆ. ಅವರ ಆದರ್ಶದ ಬದುಕು ನಮ್ಮದಾಗಲಿ. ದೇಶಕ್ಕೆ ಹೊರೆಯಾಗದ ಜವಾಬ್ದಾರಿಯುತ ನಾಗರೀಕರಾಗಿ ನಮ್ಮ ಹಕ್ಕು ಮತ್ತು ಕರ್ತವ್ಯಗಳನ್ನು ಸಂವಿಧಾನಕ್ಕೆ ಬದ್ಧವಾಗಿ ಬಳಸೋಣ. ಉತ್ತಮ ಶಿಕ್ಷಣ ಪಡೆಯುವ ಮೂಲಕ ಶೋಷಣೆ ಮುಕ್ತ ಸಮಾಜ ಕಟ್ಟೋಣ, ಆ ಮೂಲಕ ಭ್ರಾತೃತ್ವವನ್ನು ಜಗತ್ತಿಗೆ ಸಾರೋಣ. ಬಾಬಾ ಸಾಹೇಬರ ಜಯಂತಿ ಆಚರಿಸುವುದೆಂದರೆ ಭಾರತದ ಅಂಚಿನ ವರ್ಗಗಳಿಗೆ ಸಾಮಾಜಿಕ ನ್ಯಾಯವನ್ನು ಒದಗಿಸುವ ದಿನವಾಗಲಿ ಎಂದು ಆಶಿಸಿದರು.

ಪ್ರಾಂಶುಪಾಲ ಸಿಎಂ ಮುನಿಕೃಷ್ಣಪ್ಪ ಮಾತನಾಡಿ ಭಾರತ ಇಂದು ಏನಾದರೂ ಸಾಧಿಸಿದೆ ಎಂದರೆ ಆ ಸಾಧನೆಯಲ್ಲಿ ಅಂಬೇಡ್ಕರರ ಕೊಡುಗೆ ಇದೆ. ಸರ್ವರಿಗೆ ಸಮಬಾಳು ಸಮಪಾಲು ಕೊಡಲು ನಿರ್ವಂಚನೆಯಿಂದ ಶ್ರಮಿಸಿದ ಬ್ರಿಟಿಷರಿಗೆ ಮನವರಿಕೆ ಮಾಡಿಕೊಟ್ಟ ಮಹಾಜ್ಞಾನಿ ಬಾಬಾ ಸಾಹೇಬ್ ಅಂಬೇಡ್ಕರ್ ಎಂದರು. ಅಂಬೇಡ್ಕರ್ ಎಂಬ ಜ್ಞಾನ ಸೂರ್ಯ ಭಾರತದಲ್ಲಿ ಉದಯವಾಗಲಿಲ್ಲವೆಂದಿದ್ದರೆ ಭಾರತದ ಮಹಿಳೆಯರಿಗೆ, ಕಾರ್ಮಿಕರಿಗೆ, ಶೋಷಿತರಿಗೆ, ಅಶಕ್ತರಿಗೆ ಒಟ್ಟಾರೆ ಬಹುಜನ ಭಾರತಕ್ಕೆ ಮುಕ್ತಿ ಎಂಬುದು ದೊರೆಯುತ್ತಿರಲಿಲ್ಲ ಎಂದರೆ ಅತಿಶಯೋಕ್ತಿಯಲ್ಲ ಎಂದರು.

ಶಿಕ್ಷಣ ಸಂಘಟನೆ ಹೋರಾಟ ಎಂಬುದು ಕೇವಲ ಶಬ್ದಗಳಲ್ಲ ಅವು ಅಧ್ಯಯನ ಆಂದೋಲನ ಅಧಿಕಾರ ಪಡೆಯುವ ಬಲಿಷ್ಠ ಅಸ್ತ್ರಗಳು. ಈ ದಿಕ್ಕಿನಲ್ಲಿ ಯುವಜನತೆ ಯೋಚಿಸಲಿಲ್ಲ ಎಂದರೆ ಸ್ವಾತಂತ್ರ್ಯಕ್ಕೆ ಅರ್ಥವಿರುವುದಿಲ್ಲ. ಅಂಬೇಡ್ಕರ್ ಜಯಂತಿ ಎಂದರೆ ಕೇವಲ ಆಡಂಬರದ ಕಾರ್ಯಕ್ರಮವಾಗಬಾರದು. ಬದಲಿಗೆ ಸ್ಪರ್ಧಾತ್ಮಕ ಜಗತ್ತಿನಲ್ಲಿ ನಮ್ಮನ್ನು ನಾವು ಕಂಡುಕೊಳ್ಳುವ ಅರಿವಿನ ಜ್ಯೋತಿಯಾಗಬೇಕು. ಈ ನಿಟ್ಟಿನಲ್ಲಿ ಇಂದಿನ ಕಾರ್ಯಕ್ರಮ ಸಾರ್ಥಕವಾಗಿದೆ ಎಂದರು ಗೋಲ್ಡನ್ ಗ್ಲಿಮ್ಸ್ ಕಾಲೇಜಿನಲ್ಲಿ ನಡೆದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಬಾಬಾ ಸಾಹೇಬ ಅಂಬೇಡ್ಕರ್ ಅವರ ಭಾವಚಿತ್ರವುಳ್ಳ ಬೃಹತ್ ಕೇಕನ್ನು ಕತ್ತರಿಸಿ ಸಿಹಿ ಹಂಚುವ ಮೂಲಕ ಜ್ಞಾನ ಸೂರ್ಯನ ಜಯಂತಿಗೆ ಹೊಸ ಭಾಷ್ಯ ಬರೆದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ಮೂಡಿಬಂದ ಭಾಷಣ ಸಭಿಕರನ್ನು ತನ್ಮಯಗೊಳಿಸಿತು.

ಈ ವೇಳೆ ಕಾಲೇಜಿನ ಎಲ್ಲಾ ಬೋಧಕ ಬೋಧಕೇತರ ವರ್ಗ, ವಿದ್ಯಾರ್ಥಿ ಸಮೂಹ ಹಾಜರಿದ್ದು ಬಾಬಾ ಸಾಹೇಬರಿಗೆ ಪುಷ್ಪಾರ್ಚನೆ ಮೂಲಕ ಗೌರವ ಸಲ್ಲಿಸಿದರು.

# ಸೇವೆಗಾಗಿ ಬಾಳುವ ತತ್ವ ಮುಖ್ಯ: ಮಿರ್ಜಿ




• ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ

ವಿದ್ಯಾರ್ಥಿಗಳು ನಿಸ್ವಾರ್ಥತೆಯಿಂದ ಸೇವೆ ಮಾಡುವ ವ್ಯಕ್ತಿತ್ವ ಕಟ್ಟಿಕೊಳ್ಳಬೇಕು. ಸೇವೆಗಾಗಿ ಬಾಳುವ ತತ್ವವನ್ನು ಬದುಕಿನಲ್ಲಿ ಅಳವಡಿಸಿಕೊಂಡು ಆದರ್ಶ ನಾಗರಿಕರಾಗಬೇಕು ಎಂದು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಆಯುಕ್ತ ಎಚ್.ಜಿ.ಮಿರ್ಜಿ ಹೇಳಿದರು.

ನವನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳ ಆಶ್ರಯದಲ್ಲಿ ಶುಕ್ರವಾರ ಕಾಲೇಜಿನ ವಿಶ್ವಮಾನವ ಸಭಾಂಗಣದಲ್ಲಿ ನಡೆದ 2026 ರ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

ಮದರ ತೆರೆಸಾ, ಸಾಲುಮರದ ತಿಮ್ಮಕ್ಕ ಅವರಂತಹ ಸಾಧಕರು ತಮ್ಮ ಬದುಕಿನಲ್ಲಿ ಮಾಡಿರುವ ಸಮಾಜಮುಖಿ ಸೇವೆ ಇಂದಿನ ಯುವ ಜನತೆಗೆ ಪ್ರೇರಣೆ ಮತ್ತು ಸ್ಫೂರ್ತಿಯಾಗಿದೆ. ಹುಟ್ಟಿದ ಮನೆಗೆ, ಕಲಿತ ಶಾಲೆಗೆ ಕೀರ್ತಿ ತರುವಂತ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದು ಮಿರ್ಜಿ ಹೇಳಿದರು. ಪ್ರಾಂಶುಪಾಲ ಡಾ,ಅರುಣಕುಮಾರ ಗಾಳಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿಬಿರಗಳು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಸಾಮರಸ್ಯ ಬೆಳೆಸುತ್ತವೆ. ಹೊಂದಾಣಿಕೆಯ ಬದುಕು ಕಲಿಯಲು ಅವಕಾಶವಿದ್ದು ಶಿಸ್ತು, ಛಲ, ಪ್ರಯತ್ನಗಳಿಂದ ವ್ಯಕ್ತಿತ್ವದ ಫಲ ದೊರೆಯಲು ಸಾಧ್ಯವಿದೆ. ಸಾಧನೆ ಸಾಧಕರ ಸ್ವತ್ತು ಎಂಬುದನ್ನು ಅರಿತುಕೊಳ್ಳಬೇಕು ಎಂದು ಹೇಳಿದರು.

ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ದ ಜಿಲ್ಲಾ ಸಂಘಟಕರಾದ ಪ್ರಮೋದ ಚೌಗಲೆ ಅವರು ಮಾತನಾಡಿ, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ನಡೆಸುವ ಶಿಬಿರಗಳು ವಿದ್ಯಾರ್ಥಿಗಳಲ್ಲಿ ಆತ್ಮಸಾಮಾರ್ಥ್ಯ ಹೆಚ್ಚಿಸುವದರೊಂದಿಗೆ ಭಾವನಾತ್ಮಕವಾದ ಬಾಂಧವ್ಯ ಬೆಳೆಸುತ್ತವೆ ಎಂದರು. ರೇಂಜರ್ಸ್ ಲೀಡರ್ ಡಾ.ಸುಮಂಗಲಾ ಮೇಟಿ ಶಿಬಿರದ ಅನುಭವಗಳನ್ನು ಹಂಚಿಕೊಂಡರು. ರೋವರ್ಸ್ ಲೀಡರ್ ಪ್ರೊ.ಪರಸಪ್ಪ ತಳವಾರ ಪರಿಚಯಿಸಿದರು. ರೋವರ್ಸ್ ಲೀಡರ್ ಚಂದ್ರಶೇಖರ ಕಾಳನ್ನವರ, ಕ್ರೀಡಾ ನಿರ್ದೇಶಕ ನೀಲಪ್ಪ ಕುರಿ, ಪ್ರೊ.ಲೇಪಾಕ್ಷಯ್ಯ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶಿಬಿರಾರ್ಥಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡರು. ಸಮಾರಂಭದಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳ ರೋವರ್ಸ್ ರೇಂಜರ್ಸ್‌ಗಳು ಪಾಲ್ಗೊಂಡಿದ್ದರು.

# ಕಲೆ ಸಾಹಿತ್ಯ ಸಂಗೀತ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಕರೆ



• ಮಲ್ಲಮ್ಮ ನುಡಿವಾರ್ತೆ, ಕೊಪ್ಪಳ

ಯುವಜನತೆ ಕಲೆ, ಸಾಹಿತ್ಯ ಹಾಗೂ ಸಂಗೀತದಂತಹ ಅಭಿರುಚಿಯ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ನಿವೃತ್ತ ಲೋಕಾಯುಕ್ತ ಅಧಿಕಾರಿ ರಾಮಣ್ಣ ಬನ್ನಿಗೋಳ ಕರೆ ನೀಡಿದ್ದರು.

ತಾಲ್ಲೂಕಿನ ಹಿರೇಬಗನಾಳದ ಪಂಡಿತ್ ಪುಟ್ಟರಾಜ ಹರಿಕಥಾ ಸಾಂಸ್ಕೃತಿಕ ಕಲಾ ಸಂಘವು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಗರದಲ್ಲಿ ಶುಕ್ರವಾರ ಪಂಡಿತ್ ಪುಟ್ಟರಾಜ ಕವಿ ಗವಾಯಿಗಳವರ 112ನೇ ಜನ್ಮದಿನದ ಅಂಗವಾಗಿ ಹಮ್ಮಿಕೊಂಡಿದ್ದ ಸಂಸ್ಥೆಯ 19ನೇ ವರ್ಷದ ವಾರ್ಷಿಕೋತ್ಸವ, ಗುರುನಮನ ಸಂಗೀತ ಸಂಭ್ರಮ ಮತ್ತು ಧರ್ಮಸಭೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂತಹ ಕಾರ್ಯಕ್ರಮಗಳು ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾಗಿದ್ದು, ಸೃಜನಶೀಲತೆ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತವೆ ಎಂದು ಅವರು ಅಭಿಪ್ರಾಯ ಪಟ್ಟರು.

ಸಂಗೀತ ಮತ್ತು ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರೆ ಮನಸ್ಸಿಗೆ ನೆಮ್ಮದಿ ದೊರೆಯುತ್ತದೆ ಹಾಗೂ ಒತ್ತಡ ಕಡಿಮೆಯಾಗುತ್ತದೆ. ಇದೇ ವೇಳೆ, ಹೊಸ ಪ್ರತಿಭೆಗಳು ಹೊರಹೊಮ್ಮಲು ವೇದಿಕೆ ಸಿಗುತ್ತದೆ. ಸಮಾಜದಲ್ಲಿ ಸಾಂಸ್ಕೃತಿಕ ಮೌಲ್ಯಗಳನ್ನು ಉಳಿಸಿ ಬೆಳೆಸಲು ಇಂತಹ ಕಾರ್ಯಕ್ರಮಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದು ತಿಳಿಸಿದರು.

ಜನ ಸದಾಕಾಲ ಟಿ.ವಿ. ಮುಂದೆಯೇ ಕುಳಿತುಕೊಳ್ಳುವ ಬದಲು ಕಲೆ, ಸಾಹಿತ್ಯ, ಸಂಗೀತದಂತ ಅಭಿರುಚಿಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕು. ಇದರಿಂದ ಕಲಾವಿದರಿಗೂ ಪ್ರೋತ್ಸಾಹ ಲಭಿಸುತ್ತದೆ ಎಂದ ಅವರು 'ಜನರ ಕೊರತೆಯ ನಡುವೆಯೂ ಮಹಾಂತಯ್ಯ ಶಾಸ್ತ್ರಿ ಹಿರೇಮಠ ಅವರು ಸಂಗೀತ ಕಾರ್ಯಕ್ರಮ ನಡೆಸುತ್ತಿರುವ ಶ್ಲಾಘನೀಯ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕರ್ಣ ಕುಮಾರ್ ಮಾತನಾಡಿ 'ಕಲಾ ಸಂಘಗಳು ಸಾಂಸ್ಕೃತಿಕ ಪೋಷಕರಾಗಿ ಕೆಲಸ ಮಾಡುತ್ತಿದ್ದಾರೆ. ಕೃತಕ ಬುದ್ಧಿಮತ್ತೆಯ ಯುಗದಲ್ಲಿ ನಾವೆಲ್ಲ ಕಳೆದು ಹೋಗಿದ್ದೇವೆ. ಜನರಿಗೆ ಡಿಸ್ಕೊ ಡ್ಯಾನ್ಸ್‌ಗಳ ಬಗ್ಗೆ ಇರುವ ಪ್ರೀತಿ ಸಂಗೀತ ಕಾರ್ಯಕ್ರಮಗಳ ಬಗ್ಗೆ ಇಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಆಯೋಜಕ ಮಹಾಂತಯ್ಯ ಶಾಸ್ತ್ರಿ ಹಿರೇಮಠ ಮಾತನಾಡಿ, ಜಗತ್ತಿನ ಎಲ್ಲ ನೋವುಗಳನ್ನೂ ಎದುರಿಸುವ ಶಕ್ತಿ ಸಂಗೀತ ನೀಡುತ್ತದೆ. ಜನ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡರೆ ಕಲಾವಿದರೂ ಪ್ರೇರಣೆ ಲಭಿಸುತ್ತದೆ ಎಂದ ಅವರು, ದಾಸಸಾಹಿತ್ಯದ ಪ್ರಸಾರ ಹಾಗೂ ಸಂಗೀತ ಸೇವೆಯಲ್ಲಿ ಅಪಾರ ಸಾಧನೆ ಮಾಡಿರುವ ಪುಟ್ಟರಾಜ ಗವಾಯಿಗಳಿಗೆ ಮರಣೋತ್ತರವಾಗಿ ಭಾರತ ರತ್ನ ಪ್ರಶಸ್ತಿ ನೀಡುವಂತೆ ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದರು.

ದೃಷ್ಟಿಹೀನರಾಗಿದ್ದರೂ ಸಂಗೀತದ ಮೂಲಕ ಸಾವಿರಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ ಅವರು, ಗದಗದ ವೀರೇಶ್ವರ ಪುಣ್ಯಾಶ್ರಮದ ಮೂಲಕ ಅನೇಕ ಅನಾಥ ಹಾಗೂ ದೃಷ್ಟಿಹೀನ ಮಕ್ಕಳಿಗೆ ಶಿಕ್ಷಣ ಮತ್ತು ಆಶ್ರಯ ಒದಗಿಸಿದ್ದರು. ಅವರ ಸೇವೆಯನ್ನು ರಾಷ್ಟ್ರಮಟ್ಟದಲ್ಲಿ ಗುರುತಿಸಿ ಅತ್ಯುನ್ನತ ಗೌರವ ನೀಡಬೇಕು ಎಂಬುದು ನನ್ನ ಒತ್ತಾಯವಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಗಮನಹರಿಸಿ, ಪುಟ್ಟರಾಜ ಗವಾಯಿಗಳ ಅಪಾರ ಸೇವೆಯನ್ನು ಪರಿಗಣಿಸಿ ಭಾರತ ರತ್ನ ಪ್ರಶಸ್ತಿ ಘೋಷಿಸಬೇಕು ಎಂದು ಮನವಿ ಮಾಡಿದರು.

# ಸಾಲದ ಹೊರೆ ಹೊತ್ತ ರಾಜ್ಯ ಸರ್ಕಾರ: ವಜ್ಜಲ್

• ಮಲ್ಲಮ್ಮ ನುಡಿ ವಾರ್ತೆ, ಮುದಗಲ್

ಆರ್ಥಿಕ ಸಂಕಷ್ಟದಲ್ಲಿ ರಾಜ್ಯ ಸರ್ಕಾರ ಮುಳುಗಿದೆ. ರಾಜ್ಯ ಸರ್ಕಾರ ಜನಸಾಮಾನ್ಯರಿಗೆ ನೀಡುವ ಗ್ಯಾರಂಟಿ ಯೋಜನೆಗಳಿಂದ ನಾಲ್ಕು ಲಕ್ಷ ಕೋಟಿ ಸಾಲದ ಸಾಲದ ಹೊರೆ ಹೊತ್ತಿದೆ ಎಂದು ಲಿಂಗಸಗೂರು ಕ್ಷೇತ್ರದ ಶಾಸಕ ಮಾನಪ್ಪ ಡಿ. ವಜ್ಜಲ್ ಹೇಳಿದರು.

ಪಟ್ಟಣದ ಕುಂಬಾರ ಪೇಟೆ ಬಸವಣ್ಣ ದೇವಸ್ಥಾನದ ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಪಕ್ಕದಲ್ಲಿ ನಾರಾಯಣಪುರ ಜಲಾಶಯ ಇಟ್ಟು ಕೊಂಡು ಪಟ್ಟಣಕ್ಕೆ ಕುಡಿಯುವ ನೀರಿನ ಸಮಸ್ಯೆ ಹಾಗೇ ಇದೆ. ಸರಕಾರದಲ್ಲಿ ನೀರಿಗೆ ಅನುದಾನ ಕೋರಿದರೆ ಜಾಣ ಕುರುಡುತನ ಪ್ರದರ್ಶಿಸುತ್ತಿದೆಂದು ಅಸಮಾಧಾನ ವ್ಯಕ್ತಪಡಿಸಿದರು. ಯುವಕರಿಗೆ ಉದ್ಯೋಗ ಮಹಿಯರಿಗೆ ಕೈಗಾರಿಕೆ ಮತ್ತು ಗುಳೆ ತಪ್ಪಿಸಲು ಅನೇಕ ಕ್ರಮಗಳನ್ನು ಕೈಗೊಳ್ಳಬೇಕಾದರೆ ಸರ್ಕಾರ ಮಾತ್ರ ಯೋಜನೆಗಳ ಅನುಷ್ಠಾನಕ್ಕೆ ಅನುದಾನ ನೀಡದೇ ತಾರತಮ್ಯ ನೀತಿ ಮುಂದುವರೆಸಿದೆ ಎಂದು ಆರೋಪಿಸಿದರು. ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಪಾಟೀಲ್ ಮಾತನಾಡಿದರು.

# ಕಲಾದಗಿಯಲ್ಲಿ ಜಾನಪದ ಉತ್ಸವ



• ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ

ತಾಲೂಕಿನ ಕಲಾದಗಿ ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಶುಕ್ರವಾರ ಜಾನಪದ ಜಾತ್ರೆಯನ್ನು ಆಚರಿಸಲಾಯಿತು.

ಚಕ್ಕಡಿ ಮತ್ತು ಎತ್ತುಗಳನ್ನು ವಿಶೇಷವಾಗಿ ಅಲಂಕೃತಗೊಳಿಸಿ ಮೆರವಣಿಗೆಯ ಮೂಲಕ ಮಹಾವಿದ್ಯಾಲಯದ ಪ್ರಾಂಶುಪಾಲ ಮಹಾಂತೇಶ ಎಚ್. ಬಿ. ಅವರನ್ನು ಕಾರ್ಯಕ್ರಮದ ವೇದಿಕೆಗೆ ಕರೆತರಲಾಯಿತು. ನಂತರ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಜಾನಪದ ಉತ್ಸವ ನಮ್ಮ ಸಂಸ್ಕೃತಿ, ಪರಂಪರೆಯನ್ನು ಬಿಂಬಿಸುತ್ತದೆ. ಇಂತಹ ಬಹುಮೂಲ್ಯ ದೇಶಿ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಹೋಗುವ ಉತ್ತರದಾಯಿತ್ವ ನಮ್ಮೆಲ್ಲರದ್ದಾಗಲಿ ಎಂದರು.

ಮುಖ್ಯ ಅತಿಥಿ ಮಂಗಳಾ ಬೇವೂರ ಮಾತನಾಡಿ, ಜನಪದ ಜೀವನ ಕ್ರಮ ಅಪ್ಪಟ ದೇಸಿಯ ಶೈಲಿಯದು. ಆಚಾರ ವಿಚಾರಗಳು, ಉಡುಗೆ ತೊಡುಗೆ, ಆಹಾರ ಕ್ರಮ ಇವೆಲ್ಲವೂ ಕೂಡ ವೈಶಿಷ್ಟ್ಯಪೂರ್ಣವಾದವು. ಆಧುನಿಕತೆಯ ಭರಾಟೆಯಲ್ಲಿ ಈ ವೈಭವವನ್ನು ಇಂದು ಮ್ಯೂಸಿಯಂಗಳಲ್ಲಿ ಇಟ್ಟು ನೋಡುವಂತಾಗಿದ್ದು ಇದು ನಾವು ನಮ್ಮತನವನ್ನು ಕಳೆದುಕೊಳ್ಳುತ್ತಿರುವುದಕ್ಕೆ ಸಾಕ್ಷಿಯಾಗಿದೆ ಎಂದರು.

ದೈಹಿಕ ಶಿಕ್ಷಣ ನಿರ್ದೇಶಕ ಡಾ.ಕೆ. ಎಂ.ಸಾರವಾನ್, ಡಾ.ಪುಂಡಲಿಕ ಹುನ್ನಳ್ಳಿ, ಡಾ.ಲೋಕಣ್ಣ ಭಜಂತ್ರಿ, ಡಾ.ವಿಕಾಸ್ ಕಾಳೆ, ಜಂಬೀರ್‌ಸಾಬ್ ಕುರಣಿ, ವಿದ್ಯಾ ದಂಡಗಿ ಹಾಗೂ ವಿದ್ಯಾರ್ಥಿಗಳು ಇದ್ದರು. ಸಚಿನ್ ಮಾದರ ಪ್ರಾರ್ಥಿಸಿದರು. ಡಾ.ಎಲ್ಲಪ್ಪ. ಜಿ ಸ್ವಾಗತಿಸಿದರು. ಯಂಕಮ್ಮ ವಂದಿಸಿದರು. ಡಾ.ಸರೋಜಿನಿ ಹೊಸಕೇರಿ ನಿರೂಪಿಸಿದರು.

# ರಂಗನಾಥ ಶಾಲೆಗೆ ಸಿದ್ಧಾರ್ಥ ಪ್ರಥಮ



• ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ

ಸಮೀಪದ ಬೇವಿನಮಟ್ಟಿ ಬಳಿಯ ಕಾವಡೆ ಶಿಕ್ಷಣ ಸಂಸ್ಥೆಯ ರಂಗನಾಥ ಅಂತಾರಾಷ್ಟ್ರೀಯ ಶಾಲೆಯ ವಿದ್ಯಾರ್ಥಿಗಳು ಸಿಬಿಎಸ್‌ಇ 10 ನೇ ತರಗತಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದು, ಸಿದ್ಧಾರ್ಥ ಚಿನಿವಾರ ಶೇ.94 ಅಂಕ ಗಳಿಸಿ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾನೆ.

ಶಾಲೆಯ ಒಟ್ಟು ಫಲಿತಾಂಶ ಶೇ.97 ಆಗಿದ್ದು, ಧೈರ್ಯ ಸೋನಿ ಶೇ.90, ವಿನಾಯಕ ಗೌಡರ ಶೇ.89, ಸಮರ್ಥ ಬೇನಾಳ ಶೇ.88 ಹಾಗೂ ವೇದಾಂತ ನಾಯಕ ಶೇ.87 ಅಂಕ ಪಡೆದು ಅನುಕ್ರಮವಾಗಿ ಶಾಲೆಗೆ ದ್ವಿತೀಯ, ತೃತೀಯ, ಚತುರ್ಥ ಹಾಗೂ ಐದನೇ ಸ್ಥಾನ ಪಡೆದಿದ್ದಾರೆ.

ಸಾಧನೆ ತೋರಿದ ಹಾಗೂ ಪಾಸಾದ ವಿದ್ಯಾರ್ಥಿಗಳನ್ನು ಕಾವಡೆ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ರುಕ್ಮಾಸಾ ಕಾವಡೆ, ದೀಪಕ ಕಾವಡೆ ಮತ್ತು ಪ್ರಾಚಾರ್ಯ ಸಾಗರ ಖೋಂಡ್ರೆ ಅಭಿನಂದಿದ್ದಾರೆ.

# ಏ21ಕ್ಕೆ ಸಿಎಂರಿಂದ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ



• ಮಲ್ಲಮ್ಮ ನುಡಿ ವಾರ್ತೆ, ಪಿರಿಯಾಪಟ್ಟಣ

ಕ್ಷೇತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಏ 21ರಂದು 419.78 ಕೋಟಿ ರೂ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ ವೆಂಕಟೇಶ್ ತಿಳಿಸಿದರು.

ಪಟ್ಟಣದ ಶ್ರೀ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ನನ್ನ ನಡುವೆ ಇರುವ ಆತ್ಮೀಯತೆ ಬಹು ವರ್ಷಗಳಿಂದಲೂ ಇರುವುದರಿಂದ ನನ್ನ ಕ್ಷೇತ್ರದ ಅಭಿವೃದ್ಧಿ ಕೆಲಸಗಳು ಯಶಸ್ವಿಯಾಗಲು ಕಾರಣವಾಗುತ್ತಿದೆ ಇದರಿಂದ ಕೆಲವು ಮಂತ್ರಿ ಶಾಸಕರುಗಳು ನಿಮ್ಮ ಕ್ಷೇತ್ರಕ್ಕೆ ಮುಖ್ಯಮಂತ್ರಿ ರವರನ್ನು ಎಷ್ಟು ಬಾರಿ ಕರೆದುಕೊಂಡು ಹೋಗಿ ಕೆಲಸ ಮಾಡಿಸಿಕೊಳ್ಳುತ್ತೀಯ ಎಂದು ಕೇಳುತ್ತಿದ್ದಾರೆ ಎಂದು ತಿಳಿಸಿದರು.

ಪಿರಿಯಾಪಟ್ಟಣ ಶಕ್ತಿ ದೇವತೆ ಎನಿಸಿಕೊಂಡ ಶ್ರೀ ಮಸಣಿಕಮ್ಮ ದೇವಸ್ಥಾನ ಪುನರ್ ನಿರ್ಮಾಣ ತಾಲೂಕು ಒಕ್ಕಲಿಗರ ಸಂಘದ ಸಹಯೋಗದೊಂದಿಗೆ ಕುವೆಂಪು ಭವನದ ಕಟ್ಟಡ ನಿರ್ಮಾಣ ಇತಿಹಾಸ ಪ್ರಸಿದ್ಧವಾದ ಬೆಟ್ಟದ ಪುರ ಗ್ರಾಮದಲ್ಲಿರುವ ಶ್ರೀ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಬೆಟ್ಟಕ್ಕೆ ಹೋಗುವ ರಸ್ತೆ ನಿರ್ಮಾಣ ಹಾಗೂ ವಿವಿಧ ಇಲಾಖೆಗಳ ಒಟ್ಟಾರೆ 419.78 ಕೋಟಿ ರೂ ವೆಚ್ಚದ ಹಲವು ಅಭಿವೃದ್ಧಿ ಕಾಮಗಾರಿಗಳ ಶಂಕೋಸ್ಥಾಪನೆ ಮತ್ತು ಉದ್ಘಾಟನೆ ಗ್ರಾಮ ಕಾರ್ಯಕ್ರಮ ಆಗಿದೆ.

ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್. ಜಿಲ್ಲಾ ಸಚಿವ ಡಾ. ಹೆಚ್ ಸಿ ಮಹಾದೇವಪ್ಪ. ಸಾರಿಗೆ ಹಾಗೂ ಧಾರ್ಮಿಕ ದತ್ತಿ ಇಲಾಖೆ ಸಚಿವ ರಾಮಲಿಂಗ ರೆಡ್ಡಿ ಲೋಕ ಉಪಯೋಗಿ ಸಚಿವ ಸತೀಶ್ ಜಾರಕಿಹೊಳಿ. ಇಂಧನ ಸಚಿವ ಕೆಜೆ ಜಾರ್ಜ್. ಕಂದಾಯ ಸಚಿವ ಕೃಷ್ಣಭೈರೇಗೌಡ. ಪಂಚಾಯಿತಿ ರಾಜ್ಯ ಸಚಿವ ಪ್ರಿಯಾಂಕ ಖರ್ಗೆ. ಅರಣ್ಯ ಸಚಿವ ಈಶ್ವರ್ ಖಂಡ್ರೆ. ಕೃಷಿ ಸಚಿವ ಎನ್ ಚೆಲುವರಾಯಸ್ವಾಮಿ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವ ತಂಗಡಗಿ ಶಿವರಾಜ್ ಸಂಗಪ್ಪ. ಉನ್ನತ ಶಿಕ್ಷಣ ಸಚಿವ ಡಾ. ಎಂಸಿ ಸುಧಾಕರ್.

ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್ ಎಸ್ ಬೋಸರಾಜ್ ಸೇರಿದಂತೆ ವಿವಿಧ ಇಲಾಖೆಯ ಆಯುಕ್ತರು ಮತ್ತು ನಿಗಮ ಮಂಡಳಿ ಅಧ್ಯಕ್ಷರುಗಳು ಹಾಗೂ ನಿಗಮ ಮಂಡಳಿಯ ಪದಾಧಿಕಾರಿಗಳು ಆಗಮಿಸಲಿದ್ದಾರೆ.

ಆದ್ದರಿಂದ ಪಟ್ಟಣ ಮತ್ತು ಗ್ರಾಮೀಣ ಪ್ರತಿಸತಿದಿಂದ ಹೆಚ್ಚು ಕಾರ್ಯಕರ್ತರು ಆಗಮಿಸಿ ಈ ಕಾರ್ಯಕ್ರಮವನ್ನು ಯಶಸ್ವಿ ಮಾಡಬೇಕು ಎಂದು ಕೋರಿ–ಕೊಂಡರು. ಕಾಂಗ್ರೆಸ್ ಪಕ್ಷದ ವಕ್ತಾರೆ ಎಂ ಲಕ್ಷ್ಮಣ್ ಮಾತನಾಡಿ ಕಳೆದ ಲೋಕಸಭೆ ಚುನಾವಣೆಯಲ್ಲಿ ನನಗೆ 7 ಲಕ್ಷ ಮತ ಹಾಕಿರುವ ಜನತೆಯ ಋಣ ನನ್ನ ಮೇಲಿದ್ದು ನಾನು ಯಾವುದೇ ಜನರ ಕಷ್ಟ ಸುಖಗಳಲ್ಲಿ ಭಾಗಿಯಾಗಲಿದ್ದೇನೆ.

ಈ ಕ್ಷೇತ್ರದಲ್ಲಿ ಅನಿಲ ಸೋರಿಕೆಯಿಂದ ಎರಡು ಹೆಣ್ಣುಮಕ್ಕಳು ಮೃತಪಟ್ಟಿದ್ದು ಅವರಿಗೆ ಮುಖ್ಯಮಂತ್ರಿ ಸಹಾಯ ನಿಧಿಯಿಂದ ತಲಾ 2 ಲಕ್ಷ ರೂಗಳನ್ನು ಮಂಜೂರು ಮಾಡಿಸಲಾಗಿತ್ತು ಸದ್ಯದಲ್ಲಿ ಅವರ ಕುಟುಂಬದ ಕೈ ಸೇರಲಿದೆ ಎಂದು ತಿಳಿಸಿದರು.

ಕೇಂದ್ರದಲ್ಲಿರುವ ಬಿಜೆಪಿ ನೇತೃತ್ವದ ಸರ್ಕಾರ ತಾಂಬಾಕು ದರ ನೀಡದೆ ಬಾರಿ ಅನ್ಯಾಯ ಮಾಡುವ ಮೂಲಕ ರೈತರನ್ನು ಹಾಳು ಮಾಡುತ್ತಿದೆ ದಿನ ಬಳಕೆ ವಸ್ತುಗಳ ಬೆಲೆ ಸಮಸ್ಯೆಯನ್ನು ಸೃಷ್ಟಿಸಿರುವುದು ಮಹಿಳಾ ಮೀಸಲಾತಿ ನೆಪದಲ್ಲಿ ಅನ್ಯಾಯ ಮಾಡಲು ಮುಂದಾಗಿದೆ ಎಂದು ಆರೋಪ ಮಾಡಿದರು.

ಈ ಎಲ್ಲವನ್ನು ಜನಸಾಮಾನ್ಯರು ಅರ್ಥ ಮಾಡಿಕೊಳ್ಳುತ್ತಿದ್ದಾರೆ ಎಂಬುದನ್ನು ಅವರು ಮರೆತು ಹಗಲು ಕನಸು ಕಾಣುತ್ತಿದ್ದಾರೆ ಯಾವುದೇ ಕಾರಣಕ್ಕೂ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವೇ ಅಧಿಕಾರಕ್ಕೆ ಬರಲಿದೆ ಎಂದು ಭರವಸೆ ನೀಡಿದ್ದರು.

ಈ ಸಂದರ್ಭದಲ್ಲಿ ಮೈಸೂರು ಫ್ರೆಂಡ್ಸ್ ಮತ್ತು ವಾರ್ನಿಸ್ ಲಿಮಿಟೆಡ್ ಅಧ್ಯಕ್ಷ ಎಚ್ ಡಿ ಗಣೇಶ್. ಗ್ಯಾರಂಟಿಗಳ ಅನುಷ್ಠಾನ ಸಮಿತಿ ತಾ ಅಧ್ಯಕ್ಷ ಕೆ ವಿ ನಿತಿನ್ ವೆಂಕಟೇಶ್. ಬ್ಲಾಕ್ ಕಾಂಗ್ರೆಸ್ ಪಕ್ಷದ ಅಧ್ಯಕ್ಷರುಗಳಾದ ರಹಮತ್ ಜಾನ್ ಬಾಬು ಮತ್ತು ಡಿಟಿ ಸ್ವಾಮಿ ಸೇರಿದಂತೆ ಪಕ್ಷದ ಪದಾಧಿಕಾರಿಗಳು ಕಾರ್ಯಕರ್ತರು ಪಾಲ್ಗೊಂಡಿದ್ದರು.

# ಏ.23.24 ಸಾಮಾನ್ಯ ಪ್ರವೇಶ ಪರೀಕ್ಷೆ

• ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ



**ಎಪ್ರೀಲ್ 23 ಬೆಳಿಗ್ಗೆ 10.30 ರಿಂದ 11.50 ರವರೆಗೆ ಭೌತಶಾಸ್ತ್ರ, ಮಧ್ಯಾಹ್ನ 2.30 ರಿಂದ 3.50 ರವರೆಗೆ ರಸಾಯನಶಾಸ್ತ್ರ, ಎಪ್ರೀಲ್ 24 ಬೆಳಿಗ್ಗೆ 10.30 ರಿಂದ 11.50 ರವರೆಗೆ ಗಣಿತಶಾಸ್ತ್ರ, ಮಧ್ಯಾಹ್ನ 2.30 ರಿಂದ 3.50 ರವರೆಗೆ ಜೀವಶಾಸ್ತ್ರ ವಿಷಯದ ಪರೀಕ್ಷೆಗಳು ನಡೆಯಲಿವೆ.**

ಜಿಲ್ಲೆಯ ಬಾಗಲಕೋಟೆ ಮತ್ತು ಜಮಖಂಡಿ ನಗರದಲ್ಲಿ ಎಪ್ರೀಲ್ 23 ಮತ್ತು 24 ರಂದು ಸಾಮಾನ್ಯ ಪ್ರವೇಶ ಪರೀಕ್ಷೆ(ಸಿಇಟಿ)ಗಳು ನಡೆಯಲಿದ್ದು, ಪರೀಕ್ಷೆಗೆ ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಅಧಿಕಾರಿಗಳಿಗೆ ಸೂಚನೆ ನೀಡಿದರು. ಜಿಲ್ಲಾಡಳಿತ ಭವನದಲ್ಲಿರುವ ಆಡಿಟೋರಿಯಂ ಹಾಲ್‌ನಲ್ಲಿ ಶನಿವಾರ ಸಿಇಟಿ–2026 ಪರೀಕ್ಷೆ ಕುರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರ, ಬಾಗಲಕೋಟೆ ನಗರದಲ್ಲಿ 13 ಹಾಗೂ ಜಮಖಂಡಿ ನಗರದಲ್ಲಿ 8 ಸೇರಿ ಒಟ್ಟು 21 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಒಟ್ಟು 9800 ವಿದ್ಯಾರ್ಥಿಗಳು ಸಿಇಟಿ ಪರೀಕ್ಷೆಯನ್ನು ಬರೆಯಲಿದ್ದು, ಇದರಲ್ಲಿ ಬಾಗಲಕೋಟೆ ನಗರದಲ್ಲಿ 5553 ವಿದ್ಯಾರ್ಥಿಗಳು ಹಾಗೂ ಜಮಖಂಡಿ ನಗರದಲ್ಲಿ 4247 ವಿದ್ಯಾರ್ಥಿಗಳಿದ್ದಾರೆ ಎಂದು ತಿಳಿಸಿದರು. ಸಿಇಟಿ ಪರೀಕ್ಷೆಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವ ದೃಷ್ಠಿಯಿಂದ ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಫ್ರಿಸ್ಕಿಂಗ್, ಫೇಸ್ ರೆಕಗ್ನಿಶನ್ ಸೌಲಭ್ಯವನ್ನು ಮಾಡಲಾಗಿದೆ. ಪರೀಕ್ಷಾ ಮುನ್ನಾದಿನ ಪ್ರಾತ್ಯಕ್ಷಿಕೆಯ ಮೂಲಕ ಖಚಿತ ಪಡಿಸಿಕೊಳ್ಳಲು ಪರೀಕ್ಷಾ ಕೇಂದ್ರದ ಉಪ ಮುಖ್ಯ ಅಧೀಕ್ಷಕರಿಗೆ ಸೂಚನೆ ನೀಡಿದರು. ಪರೀಕ್ಷೆಗೆ ವಿಜ್ಞಾನ ಉಪನ್ಯಾಸಕರನ್ನು ಹೊರತುಪಟಿಸಿ ಇತರೆ ವಿಷಯದ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಬೇಕು. ಗುರುತಿಸಲಾದ ಪರೀಕ್ಷಾ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳು ಸಮರ್ಪಕವಾಗಿರುವಂತೆ ನೋಡಿಕೊಳ್ಳಲು ಸೂಚಿಸಿದರು.

ಪರೀಕ್ಷೆಯಲ್ಲಿ ಉಪ ಮುಖ್ಯ ಅಧೀಕ್ಷಕರ ಪಾತ್ರ ಹಾಗೂ ಜವಾಬ್ದಾರಿ ಮುಖ್ಯವಾಗಿದೆ. ಪ್ರತಿ 24 ವಿದ್ಯಾರ್ಥಿಗಳಿಗೆ ಓರ್ವ ಕೊಠಡಿ ಮೇಲ್ವಿಚಾರಕರಂತೆ ನೇಮಿಸಿಕೊಳ್ಳಬೇಕು. ಇದರ ಜೊತೆಗೆ ಅಗತ್ಯವಿರುವ ಇತರೆ ಸಿಬ್ಬಂದಿಗಳನ್ನು ಸಹ ನೇಮಿಸಿಕೊಂಡು ಪರೀ–ಕ್ಷೆ ಸುಸೂತ್ರವಾಗಿ ನಡೆಸಲು ಎಲ್ಲ ರೀತಿಯ ಅಗತ್ಯ ಕ್ರಮಕೈಗೊಳ್ಳಲು ತಿಳಿಸಿದರು. ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯ ಒಳಗೆ ಕೈಗಡಿಯಾರ ಕಟ್ಟಿಕೊಂಡು ಬರುವಂತಿಲ್ಲ. ಪ್ರತಿ ಕೊಠಡಿಯಲ್ಲಿ ಗೋಡೆಗಡಿಯಾರವನ್ನು ಅಳವಡಿಸಲು ಕ್ರಮಕೈಗೊಳ್ಳಲು ಅಶೋಕ ತೇಲಿ ತಿಳಿಸಿದರು. ಪರೀಕ್ಷೆಗಳು ಬೆಳಿಗ್ಗೆ ಮತ್ತು ಮಧ್ಯಾಹ್ನ ಎರಡು ಅವಧಿಯಲ್ಲಿ ನಡೆಯಲಿದ್ದು, ಎರಡು ಅವಧಿಗೆ ಮಾರ್ಗಾಧಿಕಾರಿಗಳು ಪ್ರಶ್ನೆ ಪತ್ರಿಕೆಗಳನ್ನು ಸಮಯಕ್ಕೆ ಸರಿಯಾಗಿ ಪರೀಕ್ಷಾ ಕೇಂದ್ರಗಳಿಗೆ ತಲುಪಿಸುವ ಕೆಲಸವಾಗಬೇಕು. ಪರೀಕ್ಷಾ ಕಾರ್ಯಕ್ಕೆ ನೇಮಿಸಲಾಗುತಿರುವ ಅಧಿಕಾರಿ ಹಾಗೂ ಸಿಬ್ಬಂದಿಗಳ ಮಕ್ಕಳು ಪರೀಕ್ಷೆ ಬರೆ–ಯುತ್ತಿದ್ದರೆ, ಅಂತವರನ್ನು ಕರ್ತವ್ಯಕ್ಕೆ ನಿಯೋಜನೆ ಮಾಡುವಂತಿಲ್ಲವೆಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಅಭ್ಯರ್ಥಿಗಳು ಪರೀಕ್ಷಾ ಕೊಠಡಿಗೆ ಪಠ್ಯ ಸಾಮಗ್ರಿ, ಜಾಮಿಟ್ರಿ ಬಾಕ್ಸ್, ಕ್ಯಾಲ್ಕುಲೇಟರ್, ಮೊಬೈಲ್ ಫೋನ್ ಸೇರಿದಂತೆ ಇತರೆ ಎಲೆಕ್ಟ್ರಾನಿಕ್ಸ್ ವಸ್ತುಗಳು, ಕೈಗಡಿಯಾರ, ಬಳೆ, ಯಾವುದೇ ಆಭರಣ, ಲೋಹದ ವಸ್ತುಗಳು (ಮಂಗಳ ಸೂತ್ರ ಹೊರತುಪಡಿಸಿ), ಕ್ಯಾಮರಾ, ಬ್ಲೂಟೂತ್ ಸಾಧನ ತರುವುದನ್ನು ನಿಷೇಧಿಸಲಾಗಿದೆ. ಅಲ್ಲದೇ ಪರೀಕ್ಷಾ ಪ್ರವೇಶ ಪತ್ರದ ಜೊತೆಗೆ ಯಾವುದಾದರೊಂದು ಗುರುತಿನ ಚೀಟಿ ತರುವುದನ್ನು ತಿಳಿಸಬೇಕು ಎಂದು ಅವರು ಹೇಳಿದರು.

